Master copy

# ಶಾಸ್ತ್ರಸರಣಿ - ದಾಸವಾಣಿ

ವಿಷಯ ಸಂಗ್ರಾಹಕರು ಮತ್ತು ಲೇಖಕರು :
ಪಾಂಡುರಂಗಾಚಾರ್ಯ ಶ್ರೀನಿವಾಸಾಚಾರ್ಯ ವಾಯಿಕರ್

೨

ಗುರುಕೃಪಾ ಪ್ರಕಾಶನ

606/607, 14ನೇ ಕ್ರಾಸ್, ಮಾಗಡಿ ಕಾರ್ಡ್ ರಸ್ತೆ, ವಿಜಯನಗರ
ಬೆಂಗಳೂರು–560 040

'ಓಂ ಅಥಾತೋ ಬ್ರಹ್ಮ ಜಿಜ್ಞಾಸಾ ಓಂ'



# ದಾಸವಾಣಿ



ಸಂದೇಹಾತ್ಮಾ ವಿನಶ್ಯತಿ ಎಂದೂ ।
ಸ್ಮೃತಿ ವೃಂದಗಳೆಲ್ಲ ಸಾರುತಿವೆ ॥
ಪುರಂದರ ವಿಠಲ ಸರ್ವೋತ್ತಮನೆಂಬಲ್ಲಿ ।
ಸಂದೇಹವ ಬಿಟ್ಟು ಸ್ತುತಿಸೆಲೋ ಮನುಜ ॥

# ಕೃತಜ್ಞತಾಪೂರ್ವಕ ವಂದನೆಗಳು

ಶ್ರೀಶ್ರೀನಿವಾಸಾಚಾರ್ಯ ನಾರಾಯಣಾಚಾರ್ಯ ವಾಯಿಕರ್

ಶ್ರೀಕೃಷ್ಣಾಚಾರ್ಯ ನಾರಾಯಣಾಚಾರ್ಯ ವಾಯಿಕರ್

ಶ್ರೀವಾಸುದೇವಾಚಾರ್ಯ ಯಲಮೇಲಿ

ಹರಿಃ ಓಂ

# ಅನುಗ್ರಹವಚನ

## ಶ್ರೀ ೧೦೮ ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರಿಂದ

ಶ್ರೀ ಗೋಪಿನಾಥೋ ವಿಜಯತೆ ॥ ಶ್ರೀ ಮುಖ್ಯಪ್ರಾಣರು ಏಳೂವರೆ ಶತಮಾನಗಳ ಹಿಂದೆ ಸಜ್ಜನೋದ್ಧಾರಕ್ಕಾಗಿ ಶ್ರೀಮನ್ನಾರಾಯಣನ ಆಜ್ಞೆಯಿಂದ ಪಾಜಕ ಕ್ಷೇತ್ರದಲ್ಲಿ ಮೂರನೆಯ ಅವತಾರಮಾಡಿ ಶ್ರೀಮದಾನಂದ ತೀರ್ಥರೆಂಬ ನಾಮಧೇಯದಿಂದ ಪ್ರಸಿದ್ಧರಾದದ್ದು ಸಕಲರಿಗೂ ವಿದಿತವಾದ ವಿಷಯ. ಅವರು ಮೂಲ ಮೂವತ್ತೇಳು ಗ್ರಂಥಗಳನ್ನು ದೇವ ಭಾಷೆಯಲ್ಲಿ ರಚನೆ ಮಾಡಿದರು. ಅಧಿಕಾರಿಗಳಿಗೆ ಉಪದೇಶಿಸಿದರು. ಸಂಸ್ಥಾನ/ಮಠಗಳನ್ನು ಸ್ಥಾಪಿಸಿದರು ಮತ್ತು ತತ್ವ ಪ್ರಚಾರಕ್ಕಾಗಿ ಅನೇಕ ಶಿಷ್ಯರನ್ನು ಸಿದ್ಧಪಡಿಸಿದರು. ಅನಂತರ ಶ್ರೀಮದಾಚಾರ್ಯರ ಶಿಷ್ಯ ಪ್ರಸಿಷ್ಯರು ಮೂಲ ಗ್ರಂಥಗಳಿಗೆ ಟೀಕಾ ಟಿಪ್ಪಣಿಗಳನ್ನು ಬರೆದು, ಅಧ್ಯಾತ್ಮಿಗಳ ಬುದ್ಧಿಗೆ ಮೂಲ ಗ್ರಂಥಗಳು ನಿಲುಕು ವಂತೆ ಮಾಡಿದರು.

ಇಷ್ಟಾದರೂ ತತ್ವಬುಭುತ್ಸಾ ಉಳ್ಳ ಮತ್ತು ಸಂಸ್ಕೃತ ಅನಭಿಜ್ಞರಾದ ಅನೇಕ ಭಗವದ್ಭಕ್ತರು ಈ ಅಮೋಘ ತತ್ವಜ್ಞಾನದ ಸೋಂಕಿಲ್ಲದೆ ಉಳಿದು ಬಿಟ್ಟರು. ಇದನ್ನು ನೋಡಿ ದಯಾಮಯರಾದ ಶ್ರೀಪಾದರಾಜರು, ಶ್ರೀವ್ಯಾಸ ರಾಜರು ಶ್ರೀವಾದಿರಾಜರು ಇವರೇ ಮುಂತಾದ ಜ್ಞಾನಿಗಳು ತಾವು ಸಂಸ್ಕೃತದಲ್ಲಿ ಉದ್ಗ್ರಂಥಗಳನ್ನು ರಚನೆ ಮಾಡಿ ಪಾಠಪ್ರವಚನಗಳನ್ನು ಮಾಡಿದ್ದಲ್ಲದೇ ಪ್ರಾಕೃತ ಕರ್ನಾಟಕ ವಾಙ್ಮಯದಲ್ಲಿಯೂ ಸಹ ತತ್ವಬೋಧಕ ಹರಿಗುರು ಮಹಿಮಾಯುಕ್ತ ಪದಪದ್ಯ ಸುಳಾದಿಗಳನ್ನು ರಚನೆಮಾಡಿ ಭಕ್ತಿಭಾವಗಳಿಂದ ಹಾಡಿದರು. ಈ ಯತಿವರ್ಯರುಗಳು ಉಭಯ ವಾಙ್ಮಯಪೋಷಕರಾಗಿದ್ದಕ್ಕೆ, ಪ್ರಾಕೃತ ಭಾಷೆಯಲ್ಲಿ ರಚಿತವಾದ ಪದ ಪದ್ಯ ಸುಳಾದಿಗಳಿಗೆ ಶಾಸ್ತ್ರ ಗ್ರಂಥಗಳ ಸಡಗರ ಪ್ರಾಪ್ತವಾಯಿತು. ಈ ಯತಿತ್ರಯರ ಕಾಲದಲ್ಲಿಯೇ ಶ್ರೀನಾರದಾಂಶ

ಸಂಭೂತರಾದ ಶ್ರೀ ಪುರಂದರದಾಸರು ಅವತರಿಸಿದರು. ಇವರು ಬೃಹತ್ಸಂಖ್ಯೆಯಲ್ಲಿ ದೇವರ ನಾಮುಗಳನ್ನು ರಚಿಸಿದ್ದಾರೆ. ಕನಕದಾಸರೂ ಆಗಿನ ಕಾಲದವರೇ.

ಒಂದು ರೀತಿ ನೋಡಿದರೆ ಸಂದರ್ಭವನ್ನು ಹೀಗೆ ಹೇಳಬಹುದು. ಶ್ರೀಮನ್ಮಧ್ವರ ಅವತಾರ ನಂತರ ಇಂದ್ರಾದಿ ದೇವತೆಗಳ ತಂಡವು ಈ ಭೂಭಾಗದಲ್ಲಿ ಅವತರಿಸಿ ಟೀಕಾ ಟಿಪ್ಪಣಿಗಳನ್ನು ರಚನೆಮಾಡಿ ತದ್ವಾರಾ ಶ್ರೀಹರಿಯನ್ನು ತೋಷಿಸಿದರು. ಇನ್ನೊಂದು ತಂಡ ನಾರದಾದಿಗಳದು. ಶ್ರೀ ಪುರಂದರ ದಾಸರು, ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು, ಶ್ರೀ ಜಗನ್ನಾಥ ದಾಸರು ಇತ್ಯಾದಿ. ಇವರುಗಳು ಕರ್ನಾಟಕ ಭಾಷಾ ವಾಙ್ಮಯದಲ್ಲಿ ಭಗವಂತನ ಮಹಿಮೆಗಳನ್ನು ಕೊಂಡಾಡಿ ಮನೆ ಮನೆಗೆ ಅಧ್ಯಾತ್ಮ ತತ್ವವನ್ನು ಪ್ರಸಾರ ಮಾಡಿ ತದ್ವಾರಾ ಶ್ರೀಹರಿಯನ್ನು ತೋಷಿಸಿದರು. ಜ್ಞಾನ, ಭಕ್ತಿ ವೈರಾಗ್ಯಾದಿ ಅನೇಕ ಪ್ರಮೇಯಗಳು ಸಂಗೀತ ಸಾಹಿತ್ಯ ರೂಪದಲ್ಲಿ ಪ್ರವಹಿಸಿದವು.

ಪ್ರಕೃತ "ಶಾಸ್ತ್ರಸರಣಿ ದಾಸವಾಣಿ" ಎಂಬ ಗ್ರಂಥವು ಈ ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಶ್ರೀ ಪಾಂಡುರಂಗಾಚಾರ್ಯ ಶ್ರೀನಿವಾಸಾಚಾರ್ಯ ವಾಯಿಕರ್ ಇವರಿಂದ ರಚಿತವಾಗಿದೆ. ಇವರು ಶ್ರೀ ಸತ್ಯ ಪರಾಕ್ರಮತೀರ್ಥರ ವಂಶಜರು. ಇವರದು ಅನೇಕ ತಲೆಮಾರುಗಳಿಂದ ಬಂದ ವಿದ್ವಾಂಸರ ಆನುಪೂರ್ವಿ ಮನೆತನ. ಶ್ರೀ ಪಾಂಡುರಂಗಾಚಾರ್ಯರು ಆಧುನಿಕ ಉನ್ನತ ವಿದ್ಯೆಯಲ್ಲಿ ಪದವೀಧರರೂ ಮತ್ತು ಗುರುಮುಖೇನ ಮಧ್ವಶಾಸ್ತ್ರ ಅಧ್ಯಯನ ಮಾಡಿದವರೂ ಆಗಿದ್ದಾರೆ. ಅಷ್ಟೇ ಅಲ್ಲ ಇವರಿಗೆ ಶಾಸ್ತ್ರದಲ್ಲಿ ಪರಿಶ್ರಮ ವಿದ್ದಂತೆ ದಾಸವಾಣಿಯಲ್ಲಿಯೂ ಪರಿಶ್ರಮ ಮತ್ತು ಆದರವಿದೆ ಎಂಬುದು ಗ್ರಂಥ ಓದುವರಿಗೆಲ್ಲ ಸುಲಭವಾಗಿ ಸ್ಪಷ್ಟವಾಗುವದು.

ಪದಗಳಲ್ಲಿ ಶಾಸ್ತ್ರಸಂಬದ್ಧತ್ವ ಹೇಗಿದೆ ? ಪದಗಳಲ್ಲಿ ಅಧ್ಯಾತ್ಮ ಹೇಗೆ ಅಡಗಿದೆ ? ಪುರಂದರೋಪನಿಷತ್ ಎಂಬ ಶ್ರೀ ವ್ಯಾಸರಾಜರ ನುಡಿ ಅದೆಷ್ಟು ಅನ್ವರ್ಥಕವಾಗಿದೆ ? ಶಾಸ್ತ್ರ ಸರಣಿಯಲ್ಲಿ ದಾಸವಾಣಿಯು ಹೇಗೆ ಪ್ರತಿಬಿಂಬಿಸಿವೆ ಎಂಬುದನ್ನೂ ಮತ್ತು ಶ್ರೀಹರಿ ಸರ್ವೋತ್ತಮತ್ವಾದಿ ಪ್ರಮೇಯಗಳನ್ನೂ

ಸದೃಷ್ಟಾಂತ ದೇವರ ನಾಮಗಳೊಡನೆ ಜಿಜ್ಞಾಸು ಚೇತನರಿಗೆ ಮನವರಿಕೆಯಾಗಿ ಅನುಷ್ಠಾನವನ್ನು ತಮ್ಮ ಜೀವಿತದಲ್ಲಿ ಅಳವಡಿಸಿಕೊಂಡು ಅನುಭವಕ್ಕೆ ಬರುವಂತೆ ಈ ಕೃತಿ ಒಂದು ಅಪೂರ್ವತಾವನ್ನು ಒಳಗೊಂಡಿದೆ. ಈ ಗ್ರಂಥಗತ ನಾಲ್ಕು ಪ್ರಬಂಧಗಳಲ್ಲಿಯೂ ತತ್ವನಿರೂಪಣೆಯು ವ್ಯಾಸೋಕ್ತಿಗಳನ್ನು ದಾಸೋಕ್ತಿಗಳೊಂದಿಗೆ ಸದೃಷ್ಟಾಂತ ವ್ಯಕ್ತಪಡಿಸಿರುವುದನ್ನು ನೋಡಿ ನಮಗೆ ಬಹಳ ಹರ್ಷವಾಗಿದೆ.

ಶ್ರೀಹರಿವಾಯುಗಳು ತತ್ಶ್ರೀಶರದ್ವಾರಾ ಇವರಿಂದ ಬರೆಯಿಸಿದ ಈ ಅಪೂರ್ವ ಕೃತಿಯು ಲೋಕೋಪಕಾರ ದೃಷ್ಟಿಯಿಂದ ಸಜ್ಜನ ಸಮುದಾಯಕ್ಕೆ ಒಂದು ವಿಶೇಷ ಕೊಡುಗೆಯಾಗಿದೆ ಎಂದರೆ ಅತಿಶಯೋಕ್ತಿ ಆಗಲಾರದು.

ಇತರೇ ಗ್ರಂಥಗಳ ಶೈಲಿಯನ್ನನುಸರಿಸದೇ ತಮ್ಮದೇ ಆದ ಭಿನ್ನ ರೀತಿಯ ಶೈಲಿಯಲ್ಲಿ "ಶಾಸ್ತ್ರಸರಣಿ ದಾಸವಾಣಿ" ಮೂಡಿ ಬಂದಿರುವುದು ಈ ಗ್ರಂಥಕ್ಕೆ ಒಂದು ಹೊಸಕಳೆ ತಂದಿದೆ.

ಈ ಗ್ರಂಥವು ಸಜ್ಜನರ ಕೈಸೇರಿ ಇವರ ಶ್ರಮ ಸಾರ್ಥಕವಾಗಲೆಂದೂ, ಇವರ ಇಚ್ಛಾನುಸಾರಿ ಈ ಮುಂಬರುವ ನಾಲ್ಕುನೂರಾ ಇಪ್ಪತ್ತೈದನೆಯ (425) ಶ್ರೀ ಪುರಂದರದಾಸರ ಪುಣ್ಯ ತಿಥಿಯಂದು (6–2–1989) ಈ ಗ್ರಂಥವು ಬಿಡುಗಡೆಯಾಗಲೆಂದೂ ಮತ್ತು ಇನ್ನೂ ಹಲವಾರು ಆಧ್ಯಾತ್ಮಿಕ/ಧಾರ್ಮಿಕ ಗ್ರಂಥಗಳನ್ನು ರಚಿಸಲು ಶ್ರೀ ವಾಯಿಕರ್ ಅವರಿಗೆ ಶ್ರೀಹರಿವಾಯುಗಳು ಜ್ಞಾನ ಭಕ್ತಿ ಸ್ಫೂರ್ತಿಗಳನ್ನು ಅನುಗ್ರಹಿಸಲೆಂದೂ ನಮ್ಮ ಆರಾಧ್ಯಮೂರ್ತಿ ಶ್ರೀ ಶ್ರೀ ಹಯವದನ ರಂಗವಿಠಲಾತ್ಮಕ ಶ್ರೀ ಗೋಪಿನಾಥ ದೇವರಲ್ಲಿ ಪ್ರಾರ್ಥಿಸುವೆವು.

ಇತಿ ನಾರಾಯಣ ಸ್ಮರಣೆಗಳು.

ಶ್ರೀ ೧೦೮ ಶ್ರೀವಿಜ್ಞಾನನಿಧಿತೀರ್ಥಶ್ರೀಪಾದಂಗಳವರು.
ಶ್ರೀಪಾದರಾಜ ಸಂಸ್ಥಾನ
ಮೊಕ್ಕಾಂ–ಮುಳಬಾಗಲು
ಜಿಲ್ಲಾ–ಕೋಲಾರ.

ದಿ: 1–1–1989.

# ಗ್ರಂಥಕರ್ತರ ಮುನ್ನುಡಿ

ಶ್ರೀ ವಿಷ್ಣುವಿನ ಅನಂತನಾಮಗಳಲ್ಲಿ "ತ್ರಿಯುಗ ಹೂತಿ" ಎಂಬದೂ ಒಂದು ನಾಮ. ಅಂದರೆ ಪರಮಾತ್ಮನು ಮೂರು ಯುಗಗಳಲ್ಲಿ ಅವತಾರ ಮಾಡುತ್ತಾನೆ. ನಾಲ್ಕು ಯುಗಗಳಲ್ಲಿ ಯಾವದಾದರೂ ಮೂರು ಯುಗಗಳಲ್ಲಿ ಅವತಾರ ಮಾಡುತ್ತಾನೋ ಅಥವಾ ನಿಯಮೇನ ಯಾವದಾದರೊಂದು ಯುಗ ದಲ್ಲಿ ಮಾತ್ರ ಅವತಾರವಿಲ್ಲವೋ, ಎಂದರೆ, ಹೌದು ಕಲಿಯುಗದಲ್ಲಿ ಅವನ ಅವತಾರವಿಲ್ಲ. ಕೃತ, ತ್ರೈತಾ, ಮತ್ತು ದ್ವಾಪರ ಯುಗಗಳಲ್ಲಿ ಅವನ ಅವತಾರ ಗಳು ಸ್ಪಷ್ಟವಾಗಿವೆ. ಅಲ್ಲರೀ,

"ಯದಾಯದಾಹಿ ಧರ್ಮಸ್ಯಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯತದ್ಯಾತ್ಮಾನಂ ಸೃಜಾಮ್ಯಹಂ ॥ 4-7
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೆ ॥ 4-7 ॥ಗೀತಾ॥

ಎಂಬ ಗೀತೆಯ ವಚನವು ಪರಮಾತ್ಮನ ಆಶ್ವಾಸನವೇ. ಅದರಲ್ಲಿಯೂ ಕಲಿಯುಗದಲ್ಲಿ ಧರ್ಮಗ್ಲಾನಿ ಹೆಚ್ಚು. ಉಳಿದ ಯುಗದಲ್ಲಿ ಜನರು ಹೆಚ್ಚು ಧರ್ಮಪರಾಯಣರಾಗಿರುತ್ತಾರೆ. ಅಂಥಾದ್ದರಲ್ಲಿ ಕಲಿಯುಗದಲ್ಲಿಯೇ ಪರಮಾತ್ಮನ ಅವತಾರ ವಿಲ್ಲವಲ್ಲ, ಎಂದರೆ,

ನಜನ್ಮನೈವ ಪರಿತ್ರಾಣಾದಿಕಂ ಕಾರ್ಯಮಿತಿ ನಿಯಮಃ । ತಥಾಪಿ ಲೀಲಯಾ ಸ್ವಭಾವೇನ ಚ ಯಥೇಷ್ಟಚಾರೀ । ತಥಾಹ್ಯುಕ್ತಂ "ದೇವಸ್ಸೈಷ ಸ್ವಭಾವೋಯಂ," "ಲೋಕವತ್ತು ಲೀಲಾಕೈವಲ್ಯಂ ॥" ಗೀತಾಭಾಷ್ಯ ॥
ಜನ್ಮನಾ ವಿನಾಪಿ ಕರ್ತುಂ ಸಮರ್ಥತ್ವಾದಿತಿ ಭಾವಃ ॥ ಪ್ರ. ದೀಪಿಕಾ ॥

"ಯದಾಯದಾಹಿ" ಎಂಬುದು ಸಾಮಾನ್ಯೋಕ್ತಿ. ಅವತಾರವಿಲ್ಲದೆಯೂ ಸಹ ತಾನು ಮಾಡತಕ್ಕ ಕಾರ್ಯವನ್ನು ನಿರ್ವಹಿಸಬಲ್ಲನು. ಬೇಕಾದರೆ ತನ್ನ ಸರ್ವಾರ್ಥಭೃತ್ಯರನ್ನು ಕಳುಹಿಸುತ್ತಾನೆ. ಇದೆಲ್ಲವೂ ಅವನ ಸ್ವೇಚ್ಛಾವ್ಯಾಪಾರ.

ಈ ರೀತಿ ಪರಮಾತ್ಮನಿಗೆ ಅನೇಕ ಮಾರ್ಗಗಳಿವೆ. ಪ್ರಕೃತ ಕಲಿಯುಗದಲ್ಲಿಯೂ ಅಂಥದೊಂದು ಸಂದರ್ಭ ಒದಗಿತು. ವೇದ, ಉಪನಿಷತ್, ಬ್ರಹ್ಮಸೂತ್ರ, ಭಾರತ, ಇತ್ಯಾದಿಗಳಿಗೆ ಅನೇಕ ಮತಪ್ರವರ್ತಕರು ಅನೇಕ ರೀತಿ ವ್ಯಾಖ್ಯಾನಗಳನ್ನು ಬರೆದರು. ಮುಮುಕ್ಷುಗಳು ಸಂಶಯ ಗ್ರಸ್ತರಾದರು. ಯಾವದು ತತ್ವ ? ಯಾವದು ಯಥಾರ್ಥ ? ಯಾವದನ್ನು ಅನುಸರಿಸಿದರೆ ಸರಿ ಯಾವದು ತಪ್ಪು ? ಯಾವ ಮಾರ್ಗವನ್ನವಲಂಬಿಸಿದರೆ ಮೋಕ್ಷಲಭ್ಯ ? ಯಾವದು ಅಯಥಾರ್ಥ ಮತ್ತು ತಾಜ್ಯವೆಂದು ನಿರ್ಧರಿಸುವದು ಸಜ್ಜನರಿಗೆ ದುಃಸಾಧ್ಯವೆನಿಸಿತು.

ಆಗ ದೇವತೆಗಳಿಂದ ಪ್ರಾರ್ಥಿತನಾದ ಪರಮಾತ್ಮನು ಸಜ್ಜನರ ಉದ್ಧಾರ-ಕ್ಕೋಸ್ಕರವಾಗಿ (ತನ್ನ ಅವತಾರವಿಲ್ಲದ್ದರಿಂದ) ವಾಯುದೇವರ ಕಡೆಗೆ ಮಂದ ಹಾಸದಿಂದ ನೋಡಿದನು. ವಾಯುದೇವರು ಪರಮಾತ್ಮನ ಅಭಿಪ್ರಾಯವನ್ನು ತಿಳಿದವರಾಗಿ, ಆಜ್ಞೆಯನ್ನು ಶಿರಾಸಾವಹಿಸಿ ದೇವತೆಗಳಿಂದ ಪ್ರಾರ್ಥಿತರಾಗಿ ಪಾಜಕ ಕ್ಷೇತ್ರದಲ್ಲಿ ಅವತಾರ ಮಾಡಿದರು. ಅವರಿಗೆ ಮೊದಲಿನ ಹೆಸರು ವಾಸುದೇವ. ಬಾಲ್ಯಾರಭ್ಯ ಅನೇಕ ಆಶ್ಚರ್ಯಕರವಾದ ಲೀಲೆಗಳನ್ನು ತೋರಿಸುವವರಾಗಿ, ಗುರುಕುಲ ವಾಸನಂತರ ನೈಜವೈರಾಗ್ಯಹೊಂದಿ ಅವರು ಸನ್ಯಾಸವನ್ನು ಸ್ವೀಕಾರಮಾಡಿದರು. ಮೊದಲು ಮೊದಲು ಕೆಲವು ದಿನ ಅವರು ಪರ-ಕೀಯ ವ್ಯಾಖ್ಯಾನಗತವಾದ ದೋಷಗಳನ್ನು ಎಲ್ಲ ಸಭೆಗಳಲ್ಲೂ ಎತ್ತಿತೋರಿದರು. ಯಥಾರ್ಥವಾದ ಇನ್ನೊಂದು ವ್ಯಾಖ್ಯಾನದ ಅವಶ್ಯಕತೆ ಇದೆ ಎಂಬ ವಿಷಯ ಸಜ್ಜನರಿಗೆ ಮನದಟ್ಟಾಗಿ ಪ್ರಾರ್ಥಿತರಾದ ಮೇಲೆ ತಾವು ಸ್ವತಃ ಭಾಷ್ಯಾದಿಗ್ರಂಥಗಳನ್ನು ರಚನೆ ಮಾಡಿದರು. ಬದರಿಕಾಶ್ರಮಕ್ಕೆ ಹೋಗಿ ಶ್ರೀ ಬಾದರಾಯಣರ ದರ್ಶನ ಮಾಡಿಕೊಂಡು ಪುನಃ ಆಜ್ಞಪ್ತರಾಗಿ ಬ್ರಹ್ಮಸೂತ್ರಭಾಷ್ಯ ಇತ್ಯಾದಿ ಒಟ್ಟು ಮೂಲ ಮೂವತ್ತೇಳು ಗ್ರಂಥಗಳನ್ನು ರಚನೆಮಾಡಿದರು. ಅವೆಲ್ಲವೂ ನಿರ್ಣಯ ಗ್ರಂಥಗಳೇ, ಪರಮತಗಳ ದೋಷೋತ್ಥಾಪನೆ ಮಾಡಿ ಅವುಗಳನ್ನು ನಿರಾಕರಣಮಾಡಿ, ಯಥಾರ್ಥ ಮತ್ತು ನಿಶ್ಚಿತವಾದ ಜ್ಞಾನಸಾಧನೆಯನ್ನು ಮಾಡಿ ಕೊಟ್ಟಿದ್ದಾರೆ.

ಗ್ರಂಥಗಳ ಅಂತ್ಯದಲ್ಲಿ ತಾವು ವಾಯುದೇವರ ತೃತೀಯ ಅವತಾರರೆಂದೂ (ಮಧ್ವೋಯತ್ತು ತೃತೀಯ ಮೇತದಮುನಾ ಗ್ರಂಥಃಕೃತಃ ಕೇಶವೇ),

ಘೋಷಿಸಿದರು. ಕಾರ್ಯಾನಂತರ ಅವತಾರ ಪರಿಸಮಾಪ್ತಿಮಾಡಿ, ಉಡುಪಿ ಯಲ್ಲಿ ಪುಷ್ಪರಾಶಿಯಲ್ಲಿ ಅದೃಶ್ಯರಾಗಿ ಬದರಿಕಾಶ್ರಮಕ್ಕೆ ತೆರಳಿದರು. ಅವರು ಪಾರ್ಥಿವ ಶರೀರ ಬಿಡಲಿಲ್ಲ. ಆದ್ದರಿಂದ ಬೃಂದಾವನಗಳಾಗಲಿ ಇತರ ಅವಶೇಷ ಗಳಾಗಲಿ ಇಲ್ಲ. ಆದರೆ ಪ್ರಾಜ್ಞರ ಮತದಂತೆ ಅವರ ಸನ್ನಿಧಾನವು ಮೂರು ಸ್ಥಳಗಳಲ್ಲಿ ಇರುತ್ತದೆ. ಮೊದಲನೆಯದು ಉಡುಪಿ ಶ್ರೀಕೃಷ್ಣ ಕ್ಷೇತ್ರದಲ್ಲಿ, ಎರಡನೆಯದು ಬದರಿಕಾಶ್ರಮ ಬಾದರಾಯಣರ ಬಳಿಯಲ್ಲಿ ಮತ್ತು ಮೂರನೆ ಯದು ಅವರು ರಚಿಸಿದ ಭಾಷ್ಯಾದಿ ಗ್ರಂಥಗಳಲ್ಲಿ.

ಇವರ ಅವತಾರ ಪರಿಸಮಾಪ್ತಿಯಾದಮೇಲೆ ಅಚಿರಕಾಲದಲ್ಲಿಯೇ ಅನೇಕ ದೇವತೆಗಳು ಆನಂದತೀರ್ಥರ ಗ್ರಂಥಗಳಿಗೆ ವ್ಯಾಖ್ಯಾನರೂಪವಾದ ವಾಙ್ಮಯ ಸೇವೆಯನ್ನು ಮಾಡಲು ಧರಾತಳಕ್ಕಿಳಿಯಲು ಆರಂಭ ಮಾಡಿದರು. ಆ ದೇವತೆಗಳಿಗೆ ಯಾರಿಗೂ ತಮ್ಮ ಸ್ವರೂಪವನ್ನು ತಿಳಿಸಲು ಆಜ್ಞೆ ಇರಲಿಲ್ಲ. ಅಂತೆಯೇ ಅವರು ಸ್ವತಃ ತಿಳಿಸಲಿಲ್ಲ. ಬೇರೆ ಜ್ಞಾನಿಗಳು ತಿಳಿಸಿದರು. ಇಂದ್ರಾದಿಗಳ ಗುಂಪು ಮೊದಲುಬಂದು, ಜನಸಾಮಾನ್ಯರಿಗೆ ತಿಳಿಯಲಸಾಧ್ಯವಾದ ಶ್ರೀಮದಾನಂದತೀರ್ಥರ ಮೂಲಗ್ರಂಥಗಳಿಗೆ ವ್ಯಾಖ್ಯಾನ (ಟೀಕಾ) ಬರೆದರು. ನಂತರ ಬಂದ ದೇವತೆಗಳು ಟಿಪ್ಪಣಿ ರಚಿಸಿದರು.

ಇಷ್ಟು ಗ್ರಂಥಗಳು ರಚನೆಯಾದರೂ ಸಂಸ್ಕೃತ ವಾಙ್ಮಯದ ಮೂಲಕ ಗ್ರಂಥಗಳನ್ನು ಅಧ್ಯಯನಮಾಡಿ ಅರ್ಥಮಾಡಿಕೊಳ್ಳುವುದು ಬಹುಜನರಿಗೆ ಅಸಾಧ್ಯವಾಯಿತು. ಇವರುಗಳ ಉದ್ಧಾರಕ್ಕಾಗಿ ಗ್ರಂಥಗತ ವಿಷಯಗಳನ್ನು ಪ್ರಾಕೃತ ಭಾಷೆಯಲ್ಲಿ ಪದ, ಪದ್ಯ, ಸುಳಾದಿಗಳ ಮೂಲಕ ತಿಳಿಸಲು ದೇವತೆಗಳ ಇನ್ನೊಂದು ಸಮೂಹಬಂತು. ಅದು ನಾರದಾದಿಗಳದು. ಗಾನರೂಪದಿಂದ ಪರಮಾತ್ಮನನ್ನು ಮೆಚ್ಚಿಸಿದವರಲ್ಲಿ ನಾರದ ಮಹರ್ಷಿಗಳದು ಪ್ರಮುಖಪಾತ್ರ. ಅವರ ವೀಣಾನಾದ ದೇವಲೋಕ ಪ್ರಸಿದ್ಧ. ಪದಗಳು ಬಹುಬೇಗ ಬಾಯಿಪಾಠ ವಾಗುತ್ತವೆ ಮತ್ತು ಸಂಗೀತ ಮಧ್ಯವರ್ತಿ ಆಕರ್ಷಕವೂ ಆಗಿದೆ.

ಯದ್ಯಪಿ ನರಹರಿತೀರ್ಥರ ಕಾಲದಲ್ಲಿಯೇ ಪ್ರಾಕೃತಭಾಷಾ ಪದ್ಯಗಳ ಮೂಲಕ ತತ್ತ್ವಪ್ರಸಾರ ಪ್ರಾರಂಭವಾದರೂ, ಹೇಗೆ ನದೀ ಉಗಮಸ್ಥಾನದಲ್ಲಿ ಹೆಚ್ಚು ಪ್ರವಾಹ ಕಾಣಿಸುವುದಿಲ್ಲವೋ ಮತ್ತು ಮುಂದೆ ಹರಿಯುತ್ತ ದೊಡ್ಡ

ಪ್ರವಾಹವಾಗುವುದೋ, ಹಾಗೆಯೇ ಪ್ರಾರಂಭದಲ್ಲಿ ಅಲ್ಪವಾದರೂ ಬರುಬರುತ್ತಾ, ಅಂದರೆ ಮುಂದೆ ಶ್ರೀಪಾದರಾಜರ, ಶ್ರೀವ್ಯಾಸರಾಜರ, ಶ್ರೀವಾದಿರಾಜರ, ಶ್ರೀಪುರಂದರದಾಸರ ಮತ್ತು ಶ್ರೀಕನಕದಾಸರ ಕಾಲದಲ್ಲಿ ಈ ಆಧ್ಯಾತ್ಮ ಗಾನಪ್ರವಾಹ ಮಹಾಪೂರವಾಗಿ ಹರಿಯಿತು.

ಪದಗಳೇನೋ ಕನ್ನಡ ಭಾಷೆಯಲ್ಲಿವೆ. ಆದರೆ ಅವರು ತಿಳಿಸತಕ್ಕ ಆಧ್ಯಾತ್ಮಿಕ ವಿಷಯವು ಮಾತ್ರ ಮಧ್ವಮತ ಪ್ರಮೇಯಳೇ ಅಥವಾ ತತ್ವಗಳೇ. ಮಧ್ವಶಾಸ್ತ್ರಗಳೇ ದಾಸರಾಯರ ವಿಚಾರಧಾರೆಗೆ ಮೂಲ ಆಕರ ಗ್ರಂಥಗಳು.

ವೇದಾಂತ ಮಾತ್ರವಲ್ಲದೇ ಮಾನವನ ಉನ್ನತಿಗೆ ಬೇಕಾದ ನೀತಿ, ಧರ್ಮ, ಹಿತೋಪದೇಶಗಳು, ಸಮಾಜ ಉಧೃತಿ, ದುಷ್ಟನಿಂದೆ ಇತ್ಯಾದಿಗಳು. ಮತ್ತು ಸಮಾಜೋದ್ಧಾರ ಸಾಮಾನ್ಯವಾದ (Ethics) ವಿಷಯಗಳು ಅವರ ಪದ ಗಳಲ್ಲಿವೆ. ದಾಸರಾಯರು ಮನಃಶಾಸ್ತ್ರವನ್ನೂ ಬಲ್ಲವರಾಗಿದ್ದಾರೆ. ಆಕರ್ಷಣೀ ಯವಾದ ಸಾಮಾನ್ಯ ವಿಚಾರಗಳಿಂದ ಮನಸ್ಸು ಜೀವನದ ಉತ್ತಮಮೌಲ್ಯಗಳ ಕಡೆಗೆ ಒಲಿದಾಗ ವಿಶೇಷ ಉಪದೇಶ. ಭಗವಂತನ ವಿಷಯ, ವಿಷ್ಣುಸರ್ವೋತ್ತ ಮತ್ವ, ವಾಯುಜೀವೋತ್ತಮತ್ವ, ಪಂಚಭೇದ, ತಾರತಮ್ಯ ದೇವತೆಗಳ ವಿಚಾರ, ಸಾಧನವಿಚಾರ, ಪರಮಾತ್ಮನನ್ನು ಸಾಕ್ಷಾತ್ಕರಿಸುವ ವಿಚಾರ, ಬಿಂಬೋ ಪಾಸನೆ, ಹರಿಸಮರ್ಪಣೆ, ಮುಕ್ತಿವಿಚಾರ, ಮುಕ್ತಿಯಲ್ಲಿ ಭೇದ, ಸ್ವರೂಪಾ ನಂದಾನುಭಾವ, ಇವೇ ಮುಂತಾದ ವಿಚಾರಗಳು ಪ್ರಮಾಣವನ್ನಾಧರಿಸಿಕೊಂಡು ಹೇಳಲ್ಪಟ್ಟಿವೆ. ಎಲ್ಲ ನಾಮಗಳು, ಪದಗಳು ಕೊನೆಗೆ ಅವರವರ ಉಪಾಸ್ಯ ಮೂರ್ತಿಯಲ್ಲಿ ಸಮರ್ಪಿತವಾಗುತ್ತವೆ. ಅಂಕಿತನಾಮದಲ್ಲಿ ಕೊನೆಗೊಳ್ಳುತ್ತವೆ. "ಸರ್ವೇ ವೇದಾಯತ್ಪದ ಮಾಮನಂತಿ". ದಾಸರಾಯರ ಪದಗಳು ಕನ್ನಡ ಭಾಷೆಯಲ್ಲಿರುವುದರಿಂದ ಕನ್ನಡ ಭಾಷಾಜ್ಞಾನವಿದ್ದವರಿಗೆ ಸಾಮಾನ್ಯವಾಗಿ ಅರ್ಥವಾಗತ್ತವೆ. ಅವರ ಕವನಗಳು ಭಾಷಾ ಮತ್ತು ಸಂಗೀತಕ್ಕೆ ಸೀಮಿತ ವಾಗಿಲ್ಲ. ಅದರಲ್ಲಿ ಅಧ್ಯಾತ್ಮವಿದೆ. ಮಾನವನ ಶ್ರೇಯಸ್ಸಿಗೆ ಇದು ಅತ್ಯವಶ್ಯಕ ವಾದದ್ದು.

ಈ ಭಾಗ ನಮಗೆ ತಿಳಿಯಬೇಕಾದರೆ, ಮೊದಲನೆಯ ಮಾರ್ಗ, ಶಾಸ್ತ್ರಗಳನ್ನೋದಿ, ಪದಗಳನ್ನು ಓದಬೇಕು. ಇಲ್ಲವೇ ಶಾಸ್ತ್ರಬಲ್ಲವರ ಮೂಲಕ ಶಾಸ್ತ್ರ–ಪದಗಳ ಸಂಬಂಧ ತಿಳಿಯಬೇಕು. ಇಲ್ಲವೇ ಸಚ್ಛಾಸ್ತ್ರಶ್ರವಣಮಾಡಿ/ ಮಾಡುತ್ತ ಪದಗಳನ್ನು ನೋಡಬೇಕು.

ಅಲ್ಲರೀ, ಶಾಸ್ತ್ರಗಳನ್ನೋದಿದಮೇಲೆ ಪದಗಳ ಗೊಡವೆಯೇಕೆ ? ಶಾಸ್ತ್ರಾಧ್ಯಯನವೇ ಸಾಕಲ್ಲವೇ ? ಹಾಗೆನ್ನಬೇಡಿ. ಪದಗಳಲ್ಲಿ ಸ್ವಾರಸ್ಯವಿದೆ. ಮಾತೃಭಾಷೆಯಲ್ಲಿರುವುದರಿಂದ ಹೃದ್ಯವಾಗಿದೆ. ಓದಿನೋಡಿ. ಓದುಗರಿಗೆ ನೇರವಾಗಿ ಬುದ್ಧಿಸ್ಥವಾಗುತ್ತವೆ. ರೋಗಿಗಳಿಗೆ ಸಲೈನ್ ಚಿಕಿತ್ಸೆ ಇದ್ದಹಾಗೆ. ಈ ಪದಗಳು ಭವರೋಗಕ್ಕೆ ಸಲೈನ್ ಚಿಕಿತ್ಸೆ. ತತ್ಕಾಲದಲ್ಲಿ (Relief) ಹಿತವಾಗುತ್ತದೆ.

ಅಲ್ಲರೀ, ಸುಲಭವಾಗಿ ತತ್ವ ತಿಳಿಯಲಿ ಎಂದು ದಾಸರಾಯರುಗಳು ಕನ್ನಡ ಭಾಷೆಯಲ್ಲಿ ಪದರಚನೆಮಾಡಿ ಸುಲಭಮಾಡಿದರೆ, ನೀವು ಅವುಗಳನ್ನು ಕಷ್ಟಮಾಡುತ್ತೀರಲ್ಲ.

ಇಲ್ಲ. ಅದು ನಮ್ಮ ಉದ್ದೇಶವಲ್ಲ. ಪದಗಳು ಮೇಲೆ ನೋಡುವುದಕ್ಕೆ ಸಾಮಾನ್ಯ. ಒಳಹೊಕ್ಕು ನೋಡಿದಷ್ಟೂ ಗಹನ. ಶಾಸ್ತ್ರಗಳ ಸಹಾಯ ಬೇಕೇಬೇಕಾಗುತ್ತದೆ.

3-ಡಿ (3-Dimension) ಚಲನಚಿತ್ರಗಳನ್ನು ನೋಡಿದಂತಿದೆ ಈ ದಾಸರಾಯರ ಪದಗಳು. 3-ಡಿ ಚಲನಚಿತ್ರಗಳನ್ನು ನೋಡಲು ಒಂದು ಕನ್ನಡಕ ವಿಶೇಷವಿದೆ. ಆ ಕನ್ನಡಕವನ್ನು ಚಲನಚಿತ್ರದ ದ್ವಾರದಲ್ಲಿಯೇ ಪ್ರೇಕ್ಷಕರಿಗೆ ಒದಗಿಸುತ್ತಾರೆ. ಅದನ್ನು ಹಾಕಿಕೊಂಡು 3-ಡಿ ಚಿತ್ರಗಳನ್ನು ನೋಡಿದರೆ ತೆರೆಯಮೇಲೆ ಚಲಿಸತಕ್ಕ ಪದಾರ್ಥಗಳು ನಮ್ಮಕಡೆ ಬಂದಂತೆ ತೋರುತ್ತದೆ. ಈ ಕನ್ನಡಕವನ್ನು ಹಾಕದೇಹೋದರೆ ವೈಶಿಷ್ಟ್ಯಕಾಣುವುದಿಲ್ಲ. ಹಾಗೆಯೇ ದಾಸರಾಯರ ಕೃತಿಗಳಲ್ಲಿ 3-ಡಿ ವೈಶಿಶ್ಟ್ಯವಿದೆ. ಅದೇನೆಂದರೆ ಪದಗಳಲ್ಲಿ ಸಾಹಿತ್ಯ (ಕನ್ನಡ), ಸಂಗೀತ ಮತ್ತು ಅಧ್ಯಾತ್ಮವಿದೆ. ಈ ಅಧ್ಯಾತ್ಮ ನಮ್ಮ

ಕಡೆಗೆ ಬರಬೇಕಾದರೆ, ಶ್ರೀಮಧ್ವರಾಯರು ಮತ್ತು ಟೀಕಾರಾಯರು ಕೊಟ್ಟ ಸುಲೋಚನ ಅಥವಾ ಜ್ಞಾನಚಕ್ಷುಸ್ ಹಾಕಿಕೊಂಡು ಪದಗಳನ್ನು ನೋಡಿದರೆ ಅಧ್ಯಾತ್ಮ ನಮ್ಮಕಡೆ ಬರಲುಸಾಧ್ಯ. ಇಲ್ಲವಾದರೆ ಪದದಲ್ಲಿಯೇ ಲೀನವಾಗಿ ಉಳಿಯುತ್ತದೆ. ವ್ಯಂಜಕವಾಗುವುದಿಲ್ಲ.

ಶ್ರೀಮನ್ಮಧ್ವ ಶಾಸ್ತ್ರಕ್ಕೂ-ದಾಸರಪದಗಳಿಗೂ ನಿಕಟ ಸಂಬಂಧವಿದೆ. ಶ್ರೀಪಾದರಾಜರು, ಶ್ರೀವ್ಯಾಸರಾಜರು, ಶ್ರೀವಾದಿರಾಜರು, ಶ್ರೀಪುರಂದರ ದಾಸರು, ಶ್ರೀಕನಕದಾಸರು, ಶ್ರೀವಿಜಯದಾಸರು, ಶ್ರೀಗೋಪಾಲದಾಸರು, ಶ್ರೀಜಗನ್ನಾಥದಾಸರು, ಮುಂತಾದ ಇನ್ನೂ ಅನೇಕ ದೇವಾಂಶ ಸಂಭೂತರು ಕನ್ನಡನಾಡಿನಲ್ಲಿ ಉದಯಿಸಿದವರು. ಇವರುಗಳು ಭಾಷಾತಜ್ಞರು. ಸಂಗೀ ತಜ್ಞರು. ಕನ್ನಡಸಾಹಿತ್ಯ, ಸಂಗೀತ ಈ ಮಧ್ಯವರ್ತಿಯನ್ನವಡಿಸಿಕೊಂಡು ಮಾನವನ ಜೀವನವನ್ನು ಪಾವನಮಾಡತಕ್ಕ ಅಧ್ಯಾತ್ಮಿಕ ವಿಷಯಗಳನ್ನು ಪ್ರಸಾರ ಮಾಡಿದ್ದಾರೆ. ಕನ್ನಡ ಸಾಹಿತ್ಯಪ್ರಪಂಚ ಶ್ರೀಮಂತವಾಯಿತ್ತು. ಅದು ನಮ್ಮ ಕನ್ನಡಿಗರ ಸುದೈವ. ಸಂಗೀತಲೋಕ ವಿಟ್ಠಲನ ಸೊಂಕಿನಿಂದ ರಮ್ಯವಾಯಿತು. ಅಧ್ಯಾತ್ಮದಿಂದ ಮಾನವನ ಜೀವನ ಉಜ್ವಲವಾಯಿತು. ಒಂದು ನಿರ್ದಿಷ್ಟ ಮಾರ್ಗದಲ್ಲಿ ಹೊರಟಿದ್ದಾರೆ. ಅದೇ ಮೋಕ್ಷಮಾರ್ಗ. "ಏಷಪಂಥಾ ಏತತ್ಕರ್ಮ" (ಉಪನಿಷತ್)

ಈ ಕೃತಿಯಲ್ಲಿ ನಾಲ್ಕು ಪ್ರಬಂಧಗಳಿವೆ. ಮುಖ್ಯ ಶೀರ್ಷಿಕೆಯು ಒಂದೇ. ಶಾಸ್ತ್ರಗ್ರಂಥಗಳಿಗೂ ದಾಸರಪದಗಳಿಗೂ ಸಂಬಂಧ ತೋರಿಸತಕ್ಕದ್ದೇ ಈ ಕಿರು ಹೊತ್ತಿಗೆಯ ಉದ್ದೇಶ. ಇದು ಕೇವಲ ದಿಕ್ಪ್ರದರ್ಶನ. ಅಭಿಮಾನಿಗಳು ಈ ಗ್ರಂಥವನ್ನೋದಿ ದಾಸರಾಯರ ಹೃದಯವನ್ನರಿತರೆ ಸಾಕು. ಓದಿದ-ಬರೆದ ನಾವಿಬ್ಬರೂ ಧನ್ಯರಾಗೋಣ.

"ಶಾಸ್ತ್ರಸಾರಣಿ-ದಾಸವಾಣಿ" ಎಂಬ ಶೀರ್ಷಿಕೆಯಲ್ಲಿ, ಶಾಸ್ತ್ರಸರಣಿಯನ್ನ-ವಲಂಬಿಸಿದೆ ದಾಸವಾಣಿ ಎಂಬದನ್ನು ಸದೃಷ್ಟಾಂತವಾಗಿ ನಿರೂಪಿಸಿದ್ದೇನೋ ಆಯಿತು. "ಬಹುವಕ್ತೃ ಸಂವಾದಾದೇವ ದಾರ್ಢ್ಯಹೇತೋ" ಎಂಬ ಶ್ರೀಮದಾ ಚಾರ್ಯರ ವಚನದಂತೆ. ಬಹುಜನ ಈ ವ್ಯವಸಾಯ ಸಮರ್ಥಕವಾಗಿದೆ ಎಂದರೆ

ನನಗೂ ದಾರ್ಢ್ಯ, ಧೈರ್ಯ ಓದುಗರಿಗೂ ನೆಮ್ಮದಿ. ಈ ಗ್ರಂಥವನ್ನು ಮೂರು ಜನ ವಿದ್ವಾಂಸರಿಗೆ ನಿವೇದಿಸಿದೆನು. ಇದನ್ನು ಓದಿ ಸಲಹೆಗಳಿದ್ದರೆ ಸೂಚಿಸಿ ಅಭಿಪ್ರಾಯವನ್ನು ಅನುಗ್ರಹವಚನರೂಪ/ಮುನ್ನುಡಿ ರೂಪದಲ್ಲಿ ಬರೆದು ಕೊಡಬೇಕೆಂದು ಪ್ರಾರ್ಥಿಸಿದೆ.

ಆ ಮಹನೀಯರು—

1. ಶ್ರೀ ೧೦೮ ಶ್ರೀ ವಿಜ್ಞಾನನಿಧಿ ತೀರ್ಥ ಶ್ರೀಪಾದಂಗಳವರು
2. ಡಾ. ಕೆ.ಎಮ್. ಕೃಷ್ಣರಾಯರು.
3. ವಿದ್ವಾನ್ ಶಿರೋಮಣಿ ಹೆಚ್.ಕೆ. ರಂಗನಾಥಾಚಾರ್ಯರು.

ಇವರಿಗೆ ನನ್ನ ಗೌರವಪೂರ್ವಕ ವಂದನೆಗಳು.

ಗ್ರಂಥವನ್ನು ಪ್ರಕಟಿಸುವಾಗ ಮುದ್ರಣದೋಷಗಳು ಅನಿವಾರ್ಯವೇನೋ ಎನ್ನಿಸಿಬಿಡುತ್ತದೆ. ಮುದ್ರಣದೋಷದಿಂದ ಈ ಗ್ರಂಥವನ್ನು ಮುಕ್ತಮಾಡಲು ಸಹಕರಿಸಿದ ಮುನ್ನುಡಿ ಬರೆದ ವಿದ್ವಾಂಸರಿಗೂ, ಪ್ರೆಸ್ ಸಿಬ್ಬಂದಿಗೂ ನಮ್ಮ ಹೃತ್ಪೂರ್ವಕ ವಂದನೆಗಳು. ಅಲ್ಪಕಾಲದಲ್ಲಿ ಅಂದವಾಗಿ ಗ್ರಂಥವನ್ನು ಮುದ್ರಿಸಿ ಕೊಟ್ಟ ಶ್ರೀ ವಿಶಾಲ ಪ್ರಿಂಟರ್ಸ್ ಅವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

ಶ್ರೀ ವೇದವ್ಯಾಸರ–ದಾಸರ ಚಿತ್ರಒಂದನ್ನು ಅಂದವಾಗಿ ಬರೆದುಕೊಟ್ಟ ಶ್ರೀ ಜಿ. ಎಸ್. ಪಾಠಕ್‌ರವರ ಉಪಕಾರ ಮರೆಯಲಾರೆ. ಅವರಿಗೂ ನಮ್ಮ ಅಭಿನಂದನೆಗಳು.

ಗ್ರಂಥಕರ್ತೃ

**ಪಾಂಡುರಂಗಾಚಾರ್ಯ ಶ್ರೀನಿವಾಸಾಚಾರ್ಯ ವಾಯಿಕರ್**

(ಪಿ. ಎಸ್. ವಾಯಿಕರ್)
ಡೈರೆಕ್ಟರ್ (ನಿವೃತ್ತ)
ಸಿ. ಕ್ಯೂ. ಎ. ಆರ್.
ರಕ್ಷಣಾ ವಿಭಾಗ

ಗುರುಕೃಪ ಪ್ರಕಾಶನ
606/607, 14ನೇ ಕ್ರಾಸ್
ಮಾಗಡಿಕಾರ್ಡ್‌ರೋಡ್
ವಿಜಯನಗರ
ಬೆಂಗಳೂರು–560 040.

# ವಿದ್ವಾಂಸರ ಮುನ್ನುಡಿ

## ಡಾ. ಕೆ.ಎಮ್. ಕೃಷ್ಣರಾವ್, ಇವರಿಂದ

ಶ್ರೀಯುತ ಪಾಂಡುರಂಗಾಚಾರ್ಯ ಶ್ರೀನಿವಾಸಾಚಾರ್ಯ ವಾಯಿಕರ್ ಅವರು ರಚಿಸಿರುವ "ಶಾಸ್ತ್ರಸರಣಿ—ದಾಸವಾಣಿ" ಒಂದು ಅರ್ಥವತ್ತಾದ ಆಕರ್ಷಕ ಶೀರ್ಷಿಕೆಯ ಹೃದಯಂಗಮ ಪ್ರಬಂಧವಾಗಿದೆ. ಮಧ್ವ ಶಾಸ್ತ್ರವನ್ನು ಹರಿದಾಸರು ಹೇಗೆ ಅನುಸರಿಸಿದ್ದಾರೆ, ಅನುವರ್ತಿಸಿದ್ದಾರೆ ಎಂಬುದನ್ನು ಸೋದಾಹರಣಪೂರ್ವಕ ವಿವರಿಸಿದ್ದಾರೆ. ಜನಸಾಮಾನ್ಯರಿಗೂ, ಶಾಸ್ತ್ರವೇತ್ತರಿಗೂ ದಾಸ ಸಾಹಿತ್ಯ ಹೇಗೆ ಉಪಯುಕ್ತವೆಂಬುದನ್ನು ಮನಗಾಣುವಂತೆ ಇಲ್ಲಿ ವರ್ಣಿಸಿ ಮನಗಾಣಿಸಿದ್ದಾರೆ.

ಸಂಸ್ಕೃತದಲ್ಲಿ ದ್ವೈತ ಸಿದ್ಧಾಂತಕ್ಕೂ ಕನ್ನಡ ಹರಿದಾಸ ಸಾಹಿತ್ಯಕ್ಕೂ ನಿಕಟ ಸಂಬಂಧವಿದೆ ಎಂಬುದನ್ನು ಚೆನ್ನಾಗಿ ಸ್ಫುಟವಾಗಿ ತೋರಿಸಿಕೊಟ್ಟಿದ್ದಾರೆ. ಕನ್ನಡ ದಾಸ ಸಾಹಿತ್ಯ ಪೂರ್ಣ ಅರ್ಥವಾಗಬೇಕಾದರೆ ಮಧ್ವಾಚಾರ್ಯರ ದ್ವೈತ ಸುಲೋಚನ ಅಗತ್ಯ ಎಂಬುದನ್ನೂ ಸ್ಪಷ್ಟ ಪಡಿಸಿದ್ದಾರೆ.

ಮೇಲೆ ನೋಡಲು ಸಾಧಾರಣವೆಂಬಂತೆ ಕಾಣುವ ಅನೇಕ ದಾಸರ ಪದ ಪದ್ಯಗಳಲ್ಲಿ ಶಾಸ್ತ್ರ–ಸಿದ್ಧಾಂತ ಪ್ರಮೇಯಗಳು ಹೇಗೆ ತುಂಬಿಕೊಂಡಿವೆ ಎಂಬುದನ್ನು ಹಲವಾರು ಪದಗಳಿಂದ, ಹರಿಕಥಾಮೃತಸಾರದ ಎರಡು ಪದ್ಯಗಳಿಂದ ಶ್ರುತಪಡಿಸಿದ್ದಾರೆ.

ಶಾಸ್ತ್ರ ಓದಿಕೊಂಡಿರುವವರಿಗೂ ದಾಸ ಸಾಹಿತ್ಯ ಉಪಯುಕ್ತ ; ಓದದವರಿಗಂತೂ ಶಾಸ್ತ್ರಸಾರ ಬೋಧಪ್ರದ, ಹೃದಯೋಲ್ಲಾಸಕರ ಎಂಬುದನ್ನು ಶಾಸ್ತ್ರಾಧ್ಯಯನ ಮಾಡಿದವರೊಬ್ಬರು ಇಲ್ಲಿ ಮನಗಾಣಿಸಿ ಕೊಟ್ಟಿದ್ದಾರೆ.

ದೇವಾಂಶ ಸಂಭೂತರಾದ ಅನೇಕ ಹರಿದಾಸರು ಪ್ರದೇಶ ಭಾಷೆಯಲ್ಲಿ, ತಾಯ್ನುಡಿಯಲ್ಲಿ, ಸಂಗೀತ ಮಾಧ್ಯಮದೊಂದಿಗೆ ಅಧ್ಯಾತ್ಮ ತತ್ವಗಳನ್ನಳವಡಿಸಿ, ಮನನ ಮಾಡುವ ಮಾನವನನ್ನು ಪಾವನಗೊಳಿಸಿ, ಆತ್ಮೋದ್ಧಾರ ಮಾಡು

ವಂತಹ ಸಂಕೀರ್ತನ ಶಾಸ್ತ್ರ ಸಾಹಿತ್ಯ ನಿರ್ಮಾಪಕರಾಗಿದ್ದಾರೆ. ಇದರಿಂದ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ. ಅಜ್ಞಾನವನ್ನು ಕಳೆದು ಸುಜ್ಞಾನವನ್ನು ನೀಡಿ ತನ್ನೊಡನೆ ಎಳೆದುಕೊಳ್ಳುವ ಕರುಣಾಳು ವಿಟ್ಠಲನ ಸೋಂಕಿನಿಂದ ಸಂಗೀತ ಪಾವನವೂ ರಮ್ಯವೂ ಆಗಿದೆ. ಅಧ್ಯಾತ್ಮ ಜ್ಞಾನ ಪರಿಪಾಕದಿಂದ ಜೀವನ ಉಜ್ವಲವಾಗಿ, ಬಾಳು ಹಸನಾಗಿ ಆತ್ಮ ಉದ್ಧಾರವಾಗುತ್ತದೆ.

ಈ ಪ್ರಬಂಧದಲ್ಲಿ ನಾಲ್ಕು ವಿಭಾಗಗಳಿವೆ. (1) ಶಾಸ್ತ್ರಸರಣಿ—ದಾಸವಾಣಿ, (2) ಪುರಂದರೋಪನಿಷತ್, (3) ಹರಿಕಥಾಮೃತಸಾರ ಪಲ್ಲವಿ-ಆದ್ಯ ಪದ್ಯಾನುವಾದ (4) ಮತ್ತು ಶ್ರೀ ಜಗನ್ನಾಥ ದಾಸರ ಉಪಮಾನಗಳು ಎಂದು.

ನಾಲ್ಕು ವಿಭಾಗಗಳಿದ್ದರೂ ಈ ಲೇಖನ ವಿಷಯದ ಹರಹಿನ ದೃಷ್ಟಿಯಿಂದ ಪುಟ್ಟದೇ ಎಂದೆನಿಸುತ್ತದೆ. ಇದೊಂದು ದಿಗ್ದರ್ಶನ ಮಾತ್ರ ಎಂದು ಲೇಖಕರೇ ಹೇಳಿದ್ದಾರೆ. ವ್ಯಾಪಕವಾದ ಅಧ್ಯಯನದ ಆವಶ್ಯಕತೆ ಈ ಕ್ಷೇತ್ರದಲ್ಲುಂಟು.

ಪುರಂದರದಾಸರ ಕೃತಿಗಳು ಉಪನಿಷತ್ತುಗಳು ಎಂದು ಗುರು ಶ್ರೀವ್ಯಾಸರಾಜರೇ ಕರೆದು ಮಾನ್ಯ ಮಾಡಿದರು ಎಂಬ ಐತಿಹ್ಯವಿದೆ. ಹಾಗೆ ಅವುಗಳನ್ನು ಕರೆಯುವುದರ ಔಚಿತ್ಯವನ್ನು ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ಪುರಂದರದಾಸರ ಪದಕ್ಕೆ ಉಪನಿಷತ್ತಿನಲ್ಲಿರುವ ಉಪಕೋಸಲ ಮತ್ತು ಸತ್ಯಕಾಮರ ಸ್ವಾರಸ್ಯ ಕಥೆಯ ದೃಷ್ಟಾಂತಗಳನ್ನು ವಿವರಿಸಿ-ಅನ್ವಯಿಸಿ ಸಮರ್ಥನೆ ಮಾಡಿ ಕೊಟ್ಟಿರುವುದು ಹೃದ್ಯವಾಗಿದೆ. ಹಾಗೆಯೇ ಹರಿಕಥಾಮೃತಸಾರದ ಪಲ್ಲವಿ ಮತ್ತು ಮಂಗಳಾಚರಣ ಪದ್ಯಗಳಿಗೆ ಶಾಸ್ತ್ರವನ್ನು ಅನ್ವಯಿಸಿ ಅನುಬಂಧ ಚತುಷ್ಟಯ-ಸರ್ವೋತ್ತಮತ್ವಗಳನ್ನು ಸಮರ್ಥನೆ ಮಾಡಿ ತೋರಿಸಿರುವುದು ಮನನೀಯವಾಗಿದೆ. ಜಗನ್ನಾಥ ದಾಸರ ಕೆಲವು ಉಪಮಾನಗಳನ್ನು ಪರಿಶೀಲಿಸಿ ಅವುಗಳ ಸ್ವಾರಸ್ಯ-ಮಹತ್ವ-ಅಪೂರ್ವತೆಗಳನ್ನು ಸಮಾಲೋಚಿಸಿರುವುದು ಶ್ಲಾಘನೀಯ ಪ್ರಯತ್ನವಾಗಿದೆ.

ಗಾಯಿತ್ರೀ ವೈಭವ ಎಂಬ ಗ್ರಂಥರಚನೆ–ಪ್ರಕಟಣೆಗಳಿಂದ ಕನ್ನಡ ಸಾರಸ್ವತ ಲೋಕಕ್ಕೆ ಈಗಾಗಲೇ ಪರಿಚಿತರಾಗಿರುವ ಶ್ರೀ ವಾಯಿಕರ್ ಪಾಂಡು ರಂಗಾಚಾರ್ಯರು ಈಗ ಶಾಸ್ತ್ರಸರಣಿ-ದಾಸವಾಣಿಯ ಮೂಲಕ ಇನ್ನೂ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಲೇಖನಿಯಿಂದ ಇನ್ನೂ ಅನೇಕ ಉಪಯುಕ್ತ ಸದ್ಗ್ರಂಥಗಳು ಹೊರಬಂದು ಸುಜೀವರ ಮಾರ್ಗದರ್ಶಿಯಾಗಲಿ ಎಂದು ಹೃತ್ಪೂರ್ವಕ ಹಾರೈಸುತ್ತೇನೆ.

**ಡಾ|| ಕೆ. ಎಸ್. ಕೃಷ್ಣರಾವ್, ಎಂ.ಎ.,ಪಿಎಚ್.ಡಿ.**
ವಿಶ್ರಾಂತ ಪ್ರಾಧ್ಯಾಪಕ,
ಉಸ್ಮಾನಿಯ ವಿಶ್ವವಿದ್ಯಾಲಯ

ಬೆಂಗಳೂರು
26–7–1988

# ವಿದ್ವಾಂಸರ ಮುನ್ನುಡಿ-೨

ಶ್ರೀ ಲಕ್ಷ್ಮೀವೆಂಕಟೇಶಪ್ರಸನ್ನಃ

## ವಿದ್ವಾನ್ ಶಿರೋಮಣಿ ಶ್ರೀ ಹೇ.ಕೃ. ರಂಗನಾಥಾಚಾರ್ಯರಿಂದ

ಅದುಃಖಮಿತರತ್ ಸರ್ವಂ ಜೀವಾಖಿವತು ದುಖಿಃನಃ ।
ತೇಷಾಂದುಃಖ ಪ್ರಹಾಣಾಯ ಶ್ರುತಿ ರೇಷಾಪ್ರವರ್ತತೆ ॥

ಯೋಗ್ಯರಾದ ಸಕಲಜೀವರ ದುಃಖವನ್ನು ಪರಿಹರಿಸಿ ಸುಖವನ್ನುಂಟು ಮಾಡಲು ಸಕಲವೇದಗಳು ಪ್ರವೃತ್ತವಾಗಿದ್ದರೂ ಅನ್ಯರ ಅಪವ್ಯಾಖ್ಯಾನದಿಂದ ವೇದಗಳ ಉದ್ದೇಶವು ಸಫಲವಾಗದಿರಲು ಬ್ರಹ್ಮಾದಿಗಳ ಪ್ರಾರ್ಥನೆಯಿಂದ ಶ್ರೀ ವೇದವ್ಯಾಸರು (ನಾರಾಯಣ ದೇವರು) ಅವತರಿಸಿ ವೇದಾರ್ಥನಿರ್ಣಾಯಕ ಬ್ರಹ್ಮಸೂತ್ರಗಳನ್ನು ರಚಿಸಿ ವೇದಾರ್ಥಗಳನ್ನು ನಿರ್ಣಯಿಸಿಕೊಟ್ಟರು. ಆದರೆ ಬ್ರಹ್ಮಸೂತ್ರಗಳಿಗೆ ರಚಿಸಿದ ಭಾಷ್ಯಗಳು ವೇದವ್ಯಾಸ ದೇವರಿಗೆ ಅಸಮ್ಮತ ವಾದ್ದರಿಂದ ದೇವತೆಗಳಿಂದ ಪ್ರಾರ್ಥಿತರಾಗಿ ಶ್ರೀಹರಿಯ ಆಜ್ಞಾನುಸಾರ ವಾಯುದೇವರೇ ಮಧ್ವರಾಗಿ ಅವತರಿಸಿ, ವೇದವ್ಯಾಸರಿಗೆ ಸಮ್ಮತವಾದ, ಭಾಷ್ಯಾದಿಗ್ರಂಥಗಳನ್ನು ರಚಿಸಿದರು.

ನಿರ್ದೋಷಶಬ್ದಾರ್ಥಪುರಸ್ಸರವಾದ ಸುಸ್ವಾದು ಶಾಸ್ತ್ರೀಯ ವಿಷಯ ರಸಾಮೃತರೂಪವಾದ ಟೀಕಾ ರಚನೆಯಿಂದ ಶ್ರೀ ಬಾದರಾಯಣರ ಬ್ರಹ್ಮ ಮೀಮಾಂಸಾ ಶಾಸ್ತ್ರದ ಸಾರವನ್ನು, ಗುರುಶ್ರೇಷ್ಠರಾದ ಶ್ರೀ ಮಧ್ವರ ಭಾಷ್ಯಾದಿ ಗಳ ಭಾವ ಭಾರತಿಯನ್ನು ವಿಶದೀಕರಿಸಿದವರು ಶ್ರೀ ಜಯತೀರ್ಥರು.

ವಿಷ್ಣು ಪಾದೈಕ ಸಂಶ್ರಿತರಾದ ಸದ್ವೈಷ್ಣವರಿಗೆ ಮೇಲ್ಕಂಡ ಶಾಸ್ತ್ರಾಮೃತ ಪಾನವಿಲ್ಲದೇ ಮೋಕ್ಷ ದೊರಕಲಾರದು. ಸ್ವರೂಪಾನಂದ ಅಭಿವ್ಯಕ್ತಿ ರೂಪ ವಾದ ಮೋಕ್ಷವನ್ನು ಹೊಂದಲು ಪರಮಾತ್ಮನ ಪ್ರಸಾದವಾಗಬೇಕು.

ಪ್ರಸಾದವು ಅಪರೋಕ್ಷ ಜ್ಞಾನದಿಂದಲೇ ಲಭಿಸಬೇಕು. ಅದಕ್ಕೆ ಸಾಧನವು ಆನಂದತೀರ್ಥರಿಂದ ರಚಿತವಾದ ಶ್ರುತಿಮೂಲ, ಸ್ಮೃತಿಮೂಲ ಇರತಕ್ಕ ಶಾಸ್ತ್ರವೇ.

ಸಂಸ್ಕೃತ–ಗಂಭೀರ ಭಾಷೆಯಲ್ಲಿರುವ ತತ್ವಗಳನ್ನು ತಿಳಿಯಲಶಕ್ಯವಾದವರಿಗೆ, ಅಧ್ಯಾತ್ಮತತ್ವಗಳನ್ನು ಸುಲಭವಾಗಿ ತಿಳಿಯಪಡಿಸಲು ಶ್ರೀಪಾದರಾಜರು, ಶ್ರೀ ವ್ಯಾಸರಾಜರು, ಶ್ರೀ ಪುರಂದರದಾಸರೇ ಮೊದಲಾದ ಜ್ಞಾನಿಗಳು ಭಗವತ್ಪಾದರ ತತ್ವಗಳನ್ನೇ ಪದ, ಪದ್ಯ ರೂಪದಿಂದ ರಚಿಸಿ ಸಜ್ಜನರಿಗೆ ಉಪಕಾರ ಮಾಡಿರುತ್ತಾರೆ. ದಾಸರೆಲ್ಲರೂ ಶ್ರೀಮದಾಚಾರ್ಯರ ಪಂಥವನ್ನೇ ಹೊಂದಿರುತ್ತಾರೆ. ಇಬ್ಬರ ಪಂಥವು ಒಂದೇ ಆಗಿರುತ್ತದೆ. ವ್ಯಾಸಪಂಥ–ದಾಸಪಂಥ ಬೇರೆ ಅಲ್ಲ. ಒಂದೇ ಮೇಲಿನ ಹಿನ್ನೆಲೆಯಲ್ಲಿ ಶ್ರೀ ಸತ್ಯಪರಾಕ್ರಮ ತೀರ್ಥರ ವಂಶಜರಾದ ಶ್ರೀ ಪಾಂಡುರಂಗಾಚಾರ್ಯ ಶ್ರೀನಿವಾಸಾಚಾರ್ಯ ವಾಯಿಕರ್ ಅವರು "ಶಾಸ್ತ್ರಸರಣಿ ದಾಸವಾಣಿ" ಎಂಬ ಒಂದು ಉತ್ತಮ ಗ್ರಂಥವನ್ನು ರಚಿಸಿದ್ದಾರೆ. ಈ ಗ್ರಂಥದಲ್ಲಿ ಪ್ರಧಾನವಾಗಿ ನಾಲ್ಕು ಪ್ರಬಂಧಗಳಿವೆ.

ಮೊದಲನೆಯ ಪ್ರಬಂಧದಲ್ಲಿ ಪುರಂದರದಾಸರ ದೇವರ ನಾಮಗಳು, ಬ್ರಹ್ಮಸೂತ್ರದ–ಭಾಷ್ಯಾನುಸಾರಿ ಅರ್ಥವನ್ನು ಕೊಡುವವಿಳು ದೇವರನಾಮಗಳನ್ನು ಪ್ರಥಮ ಸೂತ್ರಕ್ಕೆ ಹೊಂದಿಸಿ ಹೃದಯಂಗಮವಾಗಿ ವಿವರಿಸಲಾಗಿದೆ.

ಎರಡನೆ ಪ್ರಬಂಧದಲ್ಲಿ ಪುರಂದರೋಪನಿಷತ್, ಎಂಬ ಶ್ರೀವ್ಯಾಸರಾಜರಿಂದ ಕರೆದ ಅನ್ವರ್ಥಕ ನಾಮವನ್ನು, ಸತ್ಯಕಾಮ–ಉಪಕೋಸಲ ಉಪಾಖ್ಯಾನಗಳಿಂದ ಚಮತ್ಕಾರ ರೀತಿ ವರ್ಣಿಸಲಾಗಿದೆ.

ಮೂರನೆಯ ಪ್ರಬಂಧದಲ್ಲಿ ಶ್ರೀ ಹರಿಕಥಾಮೃತಸಾರದ ಪಲ್ಲವಿ ಮತ್ತು ಮಂಗಲಾಚರಣ ಆದ್ಯ ಪದ್ಯಕ್ಕೆ ತಮ್ಮದೇ ಆದ ಶೈಲಿಯಲ್ಲಿ ಶಾಸ್ತ್ರೀಯ ಹೊಸ ಅನೇಕಾರ್ಥಗಳನ್ನು ತೋರಿಸಿರುವದು ಒಂದು ಹೊಸ ರೀತಿ.

ನಾಲ್ಕನೆಯ ಪ್ರಬಂಧದಲ್ಲಿ "ಉಪಮಾ ಕಾಳಿದಾಸಸ್ಯ" ಎಂಬ ಪ್ರಸಿದ್ಧೋಕ್ತಿಯಂತೆ "ಉಪಮಾ ಜಗನ್ನಾಥದಾಸಸ್ಯ" ಎಂಬದೂ ಪ್ರಸಿದ್ಧಿ

ಪಡಿಸಲು, ಶ್ರೀ ಜಗನ್ನಾಥದಾಸರ ಅನೇಕ ಉಪಮಾನಗಳನ್ನು ರಮಣೀಯ ವಾಗಿ ವರ್ಣಿಸಿ ಸಮರ್ಥಿಸಲಾಗಿದೆ. ಇದು ಅನನ್ಯ ಸಾಧಾರಣ ಪ್ರಯತ್ನ.

ಇವರ ಪರಿಶ್ರಮವು ಆಧುನಿಕ ಜಗತ್ತಿನ ಅಧಿಕಾರಿಗಳಿಗೆ ಬಹಳ ಉಪಯೋಗವಾಗಿದ್ದು ಸಾಹಿತ್ಯದ್ವಯಗಳು ಒಂದೇ ಎಂದು ತಿಳಿಯಲು ಅನುಕೂಲವಾಗುವದು.

ಉದಾ : "ತಮೇವೈಕಂ ಜಾನಥ", "ಅನ್ಯೋವಾಚೋವಿಮುಂಚಥ", ಇದು ಭಾಷ್ಯಸ್ಥ ಪ್ರಮಾಣವು. ಇದನ್ನು ದಾಸವಾಣಿಯಲ್ಲಿ ನೋಡಬಹುದು.

"ಚಿತ್ತ ನಿನ್ನಯ ಚಿಂತೆಯೊಳಿರಲಿ । ಸದಾ ।
ಚಿಂತೆ ಇತರ ಬಿಡಲಿ"

ಹಾಳು ಹರಟೆ ಬೇಡ, ಕಾಲವ್ಯರ್ಥ ಕಳೆಯಬೇಡ. ಇವೇ ಮೊದಲಾದ ಭಾಷ್ಯ ವಚನಗಳು ಹರಿದಾಸ ವಾಙ್ಮಯ ಕನ್ನಡದ ಹೊನ್ನಿನ ಚೌಕಟ್ಟಿನಲ್ಲಿ ಹೊಸ ರೂಪತಾಳಿ ಕಂಗೊಳಿಸುತ್ತದೆ. ಶ್ರೀ ವಾಯಿಕರ್ ಆಚಾರ್ಯರು ಬರೆದ ಈ ಗ್ರಂಥದಲ್ಲಿ ಸಂಶೋಧಕ ದೃಷ್ಟಿ ಇದೆ. ಈ ಮಾದರಿಯ ಗ್ರಂಥ ಇದೇ ಮೊದಲನೆಯದು ಎಂದರೆ ತಪ್ಪಿಲ್ಲ. ಸಮಾಜದಲ್ಲಿ ಇಂಥ ಉತ್ತಮ ಗ್ರಂಥಗಳ ಆವಶ್ಯಕತೆ ಇದೆ. ಶ್ರೀಹರಿಯು ಇವರಿಂದ ಇನ್ನೂ ಅನೇಕ ಗ್ರಂಥಗಳನ್ನು ರಚಿಸಲು/ಪ್ರಕಟಿಸಲು ಅನುಗ್ರಹಿಸಲಿ ಎಂದು ಶ್ರೀಲಕ್ಷ್ಮೀವೆಂಕಟೇಶನನ್ನು ಪ್ರಾರ್ಥಿಸುತ್ತೇವೆ.

**ವಿದ್ವಾನ್ ಶಿರೋಮಣಿ ಹೆ. ಕೃ. ರಂಗನಾಥಾಚಾರ್ಯ**
ಶ್ರೀ ರಘೋತ್ತಮ ಬೃಂದಾವನ
ಉತ್ತರಾಧಿಮಠರಸ್ತೆ, ಬಸವನಗುಡಿ
ಬೆಂಗಳೂರು-560004.

28-1-1989
ಬೆಂಗಳೂರು.

# ವಿಷಯ ಸೂಚಿ


| ಕ್ರಮಸಂಖ್ಯೆ | ವಿಷಯ | ಪುಟ |
|---|---|---|
| 1. | ಶಾಸ್ತ್ರಸರಣಿ-ದಾಸವಾಣಿ (ಭಾಗ ೧ ರಿಂದ ೫) | ೧–೩೫ |
| 2. | ಶ್ರೀಪುರಂದರೋಪನಿಷತ್ | ೩೬–೫೨ |
| 3. | ಶ್ರೀಮದ್ಧರಿಕಥಾಮೃತಸಾರದ ಪಲ್ಲವಿ ಮತ್ತು ಆದ್ಯಪದ್ಯಗಳ ಅನುವಾದ | ೫೩–೭೫ |
| 4. | ಶ್ರೀಮಜ್ಜಗನ್ನಾಥದಾಸರ ಉಪಮಾನಗಳು (ಉಪಮಾ ಜಗನ್ನಾಥದಾಸಸ್ಯ) | ೭೬–೧೦೦ |

**ಶ್ರೀ ಗುರುರಾಜೋವಿಜಯತೆ || ಹರಿಃ ಓಂ ||**

ಶ್ರೀಮದ್ಧನುಮ ಭೀಮ ಮಧ್ವಾಂತರ್ಗತ ಶ್ರೀ ರಾಮಕೃಷ್ಣ
ವೇದವ್ಯಾಸಾತ್ಮಕ ಶ್ರೀ ಲಕ್ಷ್ಮೀಹಯಗ್ರೀವಾಯ ನಮಃ ।

# ಶಾಸ್ತ್ರಸರಣಿ ದಾಸವಾಣಿ

## ಭಾಗ-೧

**"ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ"** ಇದು ಶ್ರೀಬಾದರಾಯಣ ಕೃತ ಬ್ರಹ್ಮ ಸೂತ್ರಗಳಲ್ಲಿ ಪ್ರಥಮಸೂತ್ರ. ಈ ಸೂತ್ರದಲ್ಲಿ "ಓಂ" ಮತ್ತು "ಅಥ" ಶಬ್ದಗಳು ಮಂಗಳಾರ್ಥವನ್ನು ಸೂಚಿಸುವವು. "ಅಥ" ಶಬ್ದವು ಮಂಗಳಾರ್ಥದ ಜೊತೆಗೆ ಅಧಿಕಾರಾನಂತರ್ಯವನ್ನೂ ಸೂಚಿಸುವುದು. "ಅತ" ಶಬ್ದವು ಭಗವತ್ಪ್ರಸಾದದ್ವಾರಾ ಮೋಕ್ಷಾಖ್ಯ ಫಲವಿರೋಣದರಿಂದ, ಎಂದು ಹೇತುವನ್ನು ಸೂಚಿಸುತ್ತದೆ.

"ಬ್ರಹ್ಮ" ಶಬ್ದವು ಬೃಹ-ಪೂರ್ತೌ ಎಂಬ ಧಾತ್ವರ್ಥದಿಂದ ಪೂರ್ಣನನ್ನು ಸೂಚಿಸುತ್ತದೆ. "ಬ್ರಹ್ಮಶಬ್ದಸ್ಯ ವಿಷ್ಣಾವೇವ" ಎಂದು ಶ್ರೀಮದಾಚಾರ್ಯರ ಭಾಷ್ಯ. ಬ್ರಹ್ಮ= ವಿಷ್ಣು.

"ಜಿಜ್ಞಾಸಾ" ಎಂದರೆ ಬ್ರಹ್ಮವಿಷಯಕ ಶ್ರವಣ, ಮನನ, ನಿದಿ ಧ್ಯಾನಾಖ್ಯ ಕ್ರಿಯಾದಿಗಳು.

"ಕರ್ತವ್ಯಾ" ಮಾಡಬೇಕು. ಈ ಪದವನ್ನು ಅರ್ಥಪೂರ್ತಿಗೆ ಅಧ್ಯಾಹಾರ ಮಾಡಬೇಕೆಂದು ಭಾಷ್ಯ ವಚನ.

"ಓಂ" ಕಾರವು ಸೂತ್ರದ ಆದಿಯಲ್ಲಿಯೂ ಅಂತ್ಯದಲ್ಲಿಯೂ ಸಂಪುಟೀಕರಣವಾಗಿ ಆವರಿಸಿಕೊಂಡಿದೆ. **"ಸ್ರವತ್ಯನೋಂಕೃತಂ ಬ್ರಹ್ಮ ಪರಸ್ತಾಚ್ಚ ವಿಶೀರ್ಯತೆ"** ಎಂಬುದು ಶ್ರುತಿ ಸಂಪ್ರದಾಯ. ಈ ಸೂತ್ರಗಳು ಅನೇಕ ವೇದಾರ್ಥ ನಿರ್ಣಾಯಕವೆಂದೂ ಮತ್ತು ಒಂದೊಂದು ಸೂತ್ರವೂ ಅವಾಂತರ ಬ್ರಹ್ಮವಿದ್ಯೆ ಎಂದು ಸೂಚಿಸಲು "ಓಂ" ಕಾರದ್ವಯಗಳು.

ಅರ್ಥಾತ್ ಮುಮುಕ್ಷುಗಳಾದ ಅಧಿಕಾರಿಗಳು ಭಗವದ ಪರೋಕ್ಷಜ್ಞಾನ, ತತ್ಪ್ರಸಾದ ದ್ವಾರಾ ಪರಮಾನಂದ ರೂಪವಾದ ಮೋಕ್ಷವನ್ನು ಹೊಂದಲು ಕರ್ತವ್ಯತ್ವೇನ ವಿಷ್ಣು ವಿಷಯಕ ಜಿಜ್ಞಾಸಾ (ಅಂದರೆ ಶ್ರವಣ ಮನನ ನಿಧಿ ಧ್ಯಾನಾದಿಗಳನ್ನು) ಮಾಡಬೇಕೆಂದು ಸೂತ್ರಕಾರರ ಆದೇಶ.

ಅಧಿಕಾರಿ ವಿಷಯವನ್ನು ಕುರಿತು ಭಾಷ್ಯದಲ್ಲಿ ಶ್ರೀಮದಾಚಾರ್ಯರ ಸೂಚನೆ ಏನೆಂದರೆ **"ಮಂದ ಮಧ್ಯೋತ್ತಮತ್ವೇನ ತ್ರಿವಿಧಾಹ್ಯಧಿ ಕಾರಿಣಃ"** ಎಂದು. ಪರಮಾತ್ಮನ ಪ್ರಸಾದ ದ್ವಾರಾ ಮೋಕ್ಷಾಪೇಕ್ಷೆಯಿಂದ ಸಾಧನಮಾಡತಕ್ಕ ಅಧಿಕಾರಿಗಳು ಮೂರು ವಿಧ. ಇವರಲ್ಲಿ ಉತ್ತಮಾಧಿ ಕಾರಿಗಳು ದೇವತೆಗಳು ಮಧ್ಯಮಾಧಿಕಾರಿಗಳು ಋಷಿಗಳು ಮತ್ತು ಗಂಧರ್ವರು, ಮೂರನೆಯ ತರಗತಿಯಲ್ಲಿ ಬರತಕ್ಕವರು ಮನುಷ್ಯರು (ಅವರಲ್ಲಿಯೂ ಉತ್ತಮ ವರ್ಗ).

ಇದರಲ್ಲಿ ಉತ್ತಮ ಮತ್ತು ಮಧ್ಯಮಾಧಿಕಾರಿಗಳು ಜ್ಞಾನಭಕ್ತ್ಯಾದಿದಾರ್ಢ್ಯ ವಿರೋಣದರಿಂದ ಅವರು ಒಂದನ್ನೂ ಲೆಕ್ಕಿಸದೆ ಉಕ್ತರೀತ್ಯಾ ಸಾಧನಾನುಷ್ಠಾನ ಗಳನ್ನು ಮಾಡಿಬಿಡುತ್ತಾರೆ. ಆದರೆ ಮೂರನೆಯ ವರ್ಗದಲ್ಲಿದ್ದ ಮಂದಾಧಿಕಾರಿ ಗಳಲ್ಲಿ ಕೆಲವರಿಗೆ ಸಾಧನ ಮಾರ್ಗದಲ್ಲಿ ಎರಡು ಪ್ರತಿಬಂಧಕಗಳಿರಲು ಸಾಧ್ಯವೆಂದು ಪ್ರಾಚೀನಾಚಾರ್ಯರ ಮತ್ತು ಶ್ರೀ ದಾಸರಾಯರ ಸೂಚನೆ. ಮೊದಲನೆಯದು (ನಾಚಿಕೆ) "ಲಜ್ಜಾ" ಎರಡನೆಯದು "ಭಯ".

ಲಜ್ಜೆ ಬಿಡಬೇಕೆಂಬ ವಿಷಯದಲ್ಲಿ ಭಾಗವತ ವಾಕ್ಯ :—

**ಶೃಣ್ವನ್ ಸುಭದ್ರಾಣಿ ರಥಾಂಗಪಾಣೇರ್ಜನ್ಮಾನಿ ಕರ್ಮಾಣಿ ಚ ಯಾನಿಲೋಕೇ ।**
**ನಾಮನಿರೂಪಾಣಿ ತದರ್ಥಕಾನಿ ಗಾಯನ್ ವಿಲಜ್ಜೋವಿಚರೇದ ಸಂಗಃ ॥ ಭಾಗವತ ॥**

ಭಗವಂತನ ಮಂಗಳಕರವಾದ ಅವತಾರಗಳನ್ನು ಮತ್ತು ಲೀಲೆಗಳನ್ನು ಶ್ರವಣ ಮಾಡಿ. ತನ್ನಾಮ ರೂಪಗಳನ್ನು ಧ್ಯಾನಿಸಿ ಗುಣಗಾನಗಳನ್ನು ಮಾಡುತ್ತ

ಲಜ್ಜೆ ಅಥವಾ ಶ್ಲೋಂಚಗಳನ್ನು ಬಿಟ್ಟು ಭಗವದ್ಭಕ್ತನಾದವನು ಸಂಗರಹಿತನಾಗಿ ತಿರುಗಾಡಬೇಕು.

ಭಯದ ವಿಷಯದಲ್ಲಿ ಭಗವದ್ಗೀತೆಯ ವಾಕ್ಯ :—

**ಪ್ರಶಾಂತಾತ್ಮಾ ವಿಗತಭೀಃ ಬ್ರಹ್ಮಚಾರಿ ವ್ರತೇಸ್ಥಿತಃ ॥ ಗೀತಾ ॥**

ಶ್ರೀಕೃಷ್ಣಪರಮಾತ್ಮನು ಅರ್ಜುನನಿಗೆ (ಗೀತಾ) ಧ್ಯಾನೋಪದೇಶ ಮಾಡುವ ಸಂದರ್ಭದಲ್ಲಿ "ಪ್ರಶಾಂತಾತ್ಮಾ ವಿಗತಭೀಃ" ಎಂದು ಉಪದೇಶ ಮಾಡಿದ್ದಾನೆ.

ಭಯವು ಮನಃ ಪ್ರಶಾಂತತೆಗೂ ಏಕಾಗ್ರಚಿತ್ತಕ್ಕೂ ಪ್ರತಿಬಂಧಕ ಆದ್ದರಿಂದ ಭಯರಹಿತನಾಗಿ ಪ್ರಶಾಂತ ಮನಸ್ಸುಳ್ಳವನಾಗಿ ಬ್ರಹ್ಮನಲ್ಲಿ ಏಕಾಗ್ರ ಚಿತ್ತ ಉಳ್ಳವನಾಗಿ ಧ್ಯಾನ ಮಾಡಬೇಕು. ಭಯವಿರುವವರೆಗೂ ಧ್ಯಾನ ಅಸಾಧ್ಯ ಎಂದು ಶ್ರೀಕೃಷ್ಣನ ಉಪದೇಶ.

ಪ್ರತಿಬಂಧಕ ಸಾಮಗ್ರಿ ಇರುವವರೆಗೂ, ಸಾಧನ ಸಾಮಾಗ್ರಿಗಳಿದ್ದರೂ ಮೋಕ್ಷ ದೊರೆಯುವಷ್ಟು ಸಾಧನಕಾರ್ಯ ಹುಟ್ಟದಿರುವ ಸಂಭವವಿದೆ. ಹೇಗೆ ಅಗ್ನಿಯಲ್ಲಿ ದಾಹಕ ಶಕ್ತಿ ಇದ್ದಾಗ್ಯೂ ಮಣಿ, ಮಂತ್ರ ಮತ್ತು ಔಷಧಿಗಳ ಪ್ರತಿ ಬಂಧಕದಿಂದ, ಅಗ್ನಿಯ ದಹನ ಶಕ್ತಿಯು ಹ್ರಾಸವಾಗುವದೋ, ಹಾಗೆಯೇ ಲಜ್ಜಾ ಮತ್ತು ಭಯಗಳ ಪ್ರತಿಬಂಧಕ ಸಾಮಗ್ರಿಗಳಿರುವವರೆಗೂ ಸಾಧನಾನ್ಪ್ಠಾನಗಳಿಗೆ ತಡೆಯನ್ನುಂಟು ಮಾಡುತ್ತವೆ. ಆದ್ದರಿಂದ ಲಜ್ಜಾ–ಭಯಗಳ ಆತಂಕವಿರುವ ಕೆಲವು ಅಧಿಕಾರಿಗಳು ಶಾಸ್ತ್ರ ವಿಹಿತ ಉಪಾಯಗಳನ್ನಳವಡಿಸಿ ಕೊಂಡು ಲಜ್ಜಾ–ಭಯರಹಿತರಾಗುವದು ಯುಕ್ತವೆಂದು ಪ್ರಾಚೀನಾಚಾರ್ಯರ ಹಿತನುಡಿಗಳು.

ಲಜ್ಜಾ–ಭಯಾದಿಗಳನ್ನು ಬಿಡುವ ವಿಷಯವಾಗಿ ಶ್ರೀ ದಾಸರಾಯರ ಹಿತೋಪದೇಶವೇನು ? ಪ್ರಥಮತಃ ಅವರು ಲಜ್ಜಾ (ನಾಚಿಕೆ) ಯ ನಿವಾರಣೆ ವಿಷಯದಲ್ಲಿ ಯಾವ ಉಪಾಯವನ್ನು ಸೂಚಿಸುತ್ತಾರೆ ? ಅವರನ್ನೇ ಕೇಳಿ ತಿಳಿದು ಕೊಳ್ಳುವಾ. ಅವರ (ದಾಸರಾಯರ) ವಾಣಿ ಏನೆಂದರೆ—

**ನಾಚಿಕೆಗೊಳಬೇಡ । ಮನದಲಿ । ಯೋಚಿಸಿ ಕೆಡಬೇಡ ॥ಪ॥**
**ನೀಚವೇನೋ ನಮ್ಮಚ್ಯುತನೋಲಗ ।**
**ಮೆಚ್ಚಿ ಕೊಟ್ಟದೆ ನಿನಗ್ಹೆಚ್ಚಿನ ಪದವಿಯು ॥ಅ.ಪ॥**

ಈ ದೇವರ ನಾಮದಲ್ಲಿ ಮೂರು ಸೂಚನೆಗಳನ್ನು ಬುದ್ಧಿ ವಿವೇಕದಿಂದ ವಿಮರ್ಶೆಮಾಡಿ ದಾರ್ಢ್ಯಜ್ಞಾನ ಪಡೆಯುವುದು. ನಾಲ್ಕನೆಯ ಸೂಚನೆ ಕಾರ್ಯಗತಮಾಡುವ ವಿಧಾನ. (Practical)

**ಪ್ರಥಮ ವಿಚಾರ :**—ಪಾದಮಾನಿ ಜಯಂತನಿಂದಾರಂಭಿಸಿ ಶಿರಸ್ಸಿನಲ್ಲಿರತಕ್ಕ ಬ್ರಹ್ಮದೇವರ ಪರ್ಯಂತ ಸಕಲ ತತ್ವಾಭಿಮಾನಿ, ಕರ್ಮಾಭಿಮಾನಿ, ದೇವತೆಗಳು, ಎಡೆಬಿಡದೇ ಎವೆಯಿಕ್ಕದೇ ಪರಮಾತ್ಮನ ಆಜ್ಞೆಯಿಂದ ಎಲ್ಲರ ದೇಹಗಳಲ್ಲಿ ನಿಂತು ಜೀವರು ಮಾಡತಕ್ಕ ಸಕಲ ವ್ಯಾಪಾರಗಳಿಗೂ ಸಾಕ್ಷೀಭೂತರಾಗಿರುವರು. ಸಾಮಾನ್ಯವಾಗಿ ಜೀವನ ಅಥವ ಅಧಿಕಾರಿಯ ನಿತ್ಯ ವ್ಯಾಪಾರಗಳು ವಿಧ್ಯುಕ್ತವಾಗಿರುವದಕ್ಕಿಂತಲೂ ತದತಿರಿಕ್ತವಾದ ಕರ್ಮಗಳೇ ಅಧಿಕ. ನಮಗೆ ಮನುಷ್ಯ ಜನ್ಮ ಅದರಲ್ಲಿಯೂ ಉತ್ತಮ ಸಾಧನಾಧಿಕಾರವಿರುವ ಜನ್ಮ ಬರಬೇಕಾದರೆ ಅಭಿಮಾನಿ ದೇವತೆಗಳು, ಅನೇಕ ನಿಷಿದ್ಧ ಕರ್ಮಗಳೆಲ್ಲವನ್ನೂ ಕ್ಷಮಿಸಿ, ನಾವು ಒಂದೊಂದು ಸಲ ಮಾಡತಕ್ಕ ಪೂಜಾದಿಗಳಿಂದಲೋ, ಹರಿನೈವೇದ್ಯ ಭಂಜಿಸಿದಕಾರಣದಿಂದಲೋ, ವಿಷ್ಣು ಪಾದೋದಕವನ್ನೊಮ್ಮೆ ಪ್ರಾಶನ ಮಾಡಿದ್ದರಿಂದಲೋ, ಆಕಸ್ಮಿಕ ಘಟಿಸಿದ ತೀರ್ಥಯಾತ್ರೆಗಳಿಂದಲೋ, ಅವರ (ಕೀಳು) ಜನ್ಮಗಳಿಗೆ ಹೋಗದಂತೆ ಪರಮಾತ್ಮನಲ್ಲಿ ಬಿನ್ನಹಮಾಡಿ ಕೊಡಿಸಿದ ಈ ಉತ್ತಮ ಸಾಧನಾಧಿಕಾರ ಜನ್ಮವನ್ನು ಅಷ್ಟು ಲಘುವಾಗಿ ಗಣಿಸಲಾಗದು. ಆದ್ದರಿಂದ ವಿಮರ್ಶೆಮಾಡಿ ಮನೋದಾರ್ಢ್ಯ ತಂದುಕೊಂಡು ವಿಹಿತ ಕರ್ಮಾನುಷ್ಠಾನವನ್ನು ಮಾಡು. ಅದನ್ನು ನೋಡಿ ಯಾರಾದರೂ ಏನಾದರೂ ಅಂದುಕೊಂಡರೂ ಸರಿಯೇ, ಮನೋದೌರ್ಬಲ್ಯವನ್ನು ಕಡಿಮೆ ಮಾಡಿ ಸಾಧನಕ್ಕೆ ಸಿದ್ಧನಾಗು. ನಾಚಿಕೆ ಪಟ್ಟವನು ಕೆಡುವ ಸಂಭವವಿದೆ.

ತಾವು ಹೇಳುವದೆಲ್ಲ ಸರಿ ದಾಸರೇ. ನನಗೂ ಶೇಕಡಾ ಐದರಷ್ಟು ಧೈರ್ಯ ಬಂತು. ಆದರೂ ನಾಚಿಕೆ ಪೂರ್ತಿ ಹೋಗಲಿಲ್ಲ.

**ದ್ವಿತೀಯ ವಿಚಾರ:**—ಈ ಎರಡನೆಯ ವಿಚಾರವನ್ನು ಕೇಳು. ಚನ್ನಾಗಿ ವಿವೇಕದಿಂದ ಆಲೋಚಿಸು.

**"ಹರಿಹರಿ ಎಂದೋದರೋ। ಹತ್ತಿದ। ದುರಿತಗಳಿಗೆ ಬೆದರೋ॥**
**ನೀರಜಾಕ್ಷ ನಿರ್ಜರಪತಿ। ಹರಿ ಎಂದು। ಹಾರಿಚೀರಿ**
**ಭೋರಿಡು ತಲೆಕುಣಿಯೋ" ॥**

ಪಾಪಕಾರ್ಯಮಾಡಲು ಹೆದರುವದು ಸರಿ. ವಿಹಿತ ಸಾಧನ ಮಾಡುವದಕ್ಕೆ ಯಾಕೆ ಹೆದರಿಕೆ? ಕಮಲನಯನನಾದ ಶ್ರೀಹರಿಯು ದೇವತೆಗಳೊಡೆಯನೆಂದು ಮಾನಾಪಮಾನದ ಭ್ರಮೆಯಿಂದ ಬಂದ ಈ ಸೌಮ್ಯಭಯ ರೂಪವಾದ ನಾಚಿಕೆಯನ್ನು ಬಿಟ್ಟು ಗಟ್ಟಿಯಾಗಿ ಹರೀ ಎಂದು ಕೂಗು ಹರೀ ಎಂದು ಕುಣಿ.

ಇನ್ನೂ ಶೇಕಡಾ ಹತ್ತರಷ್ಟು ಧೈರ್ಯಬಂತು, ತಾವು ಹೇಳಿದ ಯುಕ್ತಿಯಿಂದ ದಾಸರೇ, ಆದರೂ ನನಗಂಟಿದ ಜಾಡ್ಯ ನಿಶ್ಶೇಷವಾಗಿ ಹೋಗಲಿಲ್ಲವಲ್ಲ!

**ತೃತೀಯ ವಿಚಾರ:** ಇನ್ನೊಂದು ವಿಚಾರ ಕೇಳು, ವಿಚಾರಶೀಲನಾಗು.

**"ಆರ ಗೊಡವೆ ಏನೋ। ನರಕದ। ದಾರಿ ತಪ್ಪಿಪರೇನೋ॥**
**ಬಾರಿ ಬಾರಿಗೆ ಸರ್ವೇಶನ। ನಾಮವ। ಸಾರಿ ಸಾರಿಗೆ**
**ಕೈಮುಗಿದು ಕೊಂಡಾಡೋ" ॥೨॥**

ಅವರು ಇವರು ನೋಡಿ ನಗುವರೆಂದು ನೀನು ಸಕಲ ವಿಹಿತ ಸಾಧನಗಳನ್ನು ಉಲ್ಲಂಘಿಸಿದರೆ ನರಕಕ್ಕೆ ಹೋಗುವಿ. ಆಗ ನೀನು ಯಾರಿಗೋಸ್ಕರ ನಾಚಿಕೆಪಟ್ಟು ಸಾಧನ ಬಿಟ್ಟೆಯೋ ಅವರೆಲ್ಲರೂ ಬಂದು ಯಮದೂತರಿಗೆ "ಇವನು ನಮಗೋಸ್ಕರ ಎಲ್ಲವನ್ನೂ ಬಿಟ್ಟ. ಅವನನ್ನು ನೀವು ಬಿಟ್ಟು ಬಿಡಿ" ಎಂದರೆ ಬಿಡುವರೇ? ಅವರಾರೂ ನೀನು ನರಕಕ್ಕೆ ಹೋಗುವುದನ್ನು ತಪ್ಪಿಸಲಾರರು ಎಂದ ಮೇಲೆ ಅವರ ಗೊಡವೆ ಯಾಕೆ? "ಸ್ಮರ್ತವ್ಯಃ ಸತತಂ ವಿಷ್ಣುಃ". ಸದಾಹರಿ ನಾಮಧ್ಯಾನ ನಿರತನಾಗು. ಹರಿಮೂರ್ತಿ ಕಂಡಲ್ಲೆಲ್ಲ ನಮಸ್ಕರಿಸು. ಈ ನಂಬಿಕೆ ಇಲ್ಲದವರನ್ನು ತಿರಸ್ಕರಿಸು.

ಇನ್ನೂ ಶೇಕಡಾ ಹತ್ತರಷ್ಟು ದಾರ್ಢ್ಯ ಬಂತು, ಆದರೆ ನಿಷ್ಕಂಪ ಪ್ರವೃತ್ತಿ ಬರಲಿಲ್ಲ ದಾಸರೇ!

**ಚತುರ್ಥ ವಿಚಾರ :—**ಇನ್ನು ಬರೀ ವಿಚಾರಸಾಕು. ಈ ವಿಷಯದಲ್ಲಿ ಸಾವಕಾಶ ಸಮಂಜಸವಲ್ಲ. ಈಗ ಹೇಳುವ ನಾಲ್ಕನೆಯ ಉಪಾಯವನು ಕೇಳು ಮತ್ತು ಕಾರ್ಯಗತ ಮಾಡು. ಸ್ವಲ್ಪಕಾಲದಲ್ಲಿಯೇ ನಾಚಿಕೆ ನಿಶ್ಶೇಷವಾಗಿ ಹೋಗುವದು.

**"ಭಕ್ತಜನರ ಕೂಡೋ। ಭವಭಯ। ಬತ್ತಿಪೋಪುದು
ನೋಡೋ॥ ಮುಕ್ತಿದಾಯಕ ನಮ್ಮ। ಪುರಂದರ ವಿಠಲನ।
ಭಕ್ತಿಯಿಂದನೀ ಪಾಡುತ ಕುಣಿಯೋ"** ॥೩॥

ಹರಿಭಕ್ತರ ಗುಂಪಿನಲ್ಲಿ ಸೇರು. ಅವರು ಹಾಡಿದರೆ ನೀನೂ ಧನಿಗೂಡಿಸು. ಅವರು ಕುಣಿದರೆ ಮೊದಲು ತಾಳಹಾಕು. ಆಮೇಲೆ ಹೆಜ್ಜೆ ಹಾಕು. ನಂತರ ಹಾಡುಗಳೇ ನಿನ್ನನ್ನು ಕುಣಿಸುತ್ತವೆ. ಭಕ್ತರೆಲ್ಲರೂ ಆಗ ತಾಳ ಹಾಕುತ್ತಾರೆ. ಪ್ರೋತ್ಸಾಹ ಕೊಡುತ್ತಾರೆ. ಆ ಗುಂಪಿನಲ್ಲಿ ನಿನ್ನನ್ನು ನೋಡಿ ನಗುವವರೇ ಇಲ್ಲ!

ದಾಸವರ್ಯರೇ, ಬಹಳ ಉಪಕಾರವಾಯಿತು. ಸುಮ್ಮನೇ ನಾಚಿಕೆಪಟ್ಟುಕೊಂಡು ಉಪಾಯಗಾಣದೇ ದುರ್ಲಭವಾಗಿ ಬಂದ ಅಧಿಕಾರಿಕ ಮನುಷ್ಯಜನ್ಮವನ್ನು ವ್ಯರ್ಥಮಾಡುತ್ತಿದ್ದೆ. ತಾವು ತಿಳಿಸಿದ ಉಪಾಯಗಳಿಂದ ಲಜ್ಜಾ ಎಂಬ ಪ್ರತಿಬಂಧಕ ದೂರವಾಯಿತು.

ಸರಿ ದಾಸರೇ, ಈಗ ಒಂದು ಪ್ರತಿಬಂಧಕ ನಿವಾರಣೆಯಾಗಿ ಅರ್ಧಕೆಲಸವಾಯಿತು. ಇನ್ನೊಂದು ಪ್ರತಿಬಂಧಕ ಭಯ. ಅದರ ನಿವಾರಣೋಪಾಯವನ್ನು ತಿಳಿಸಿದರೆ ಕೆಲಸ ಪೂರ್ತಿಯಾಗುವುದು.

ತಾವು ಈ ಮೊದಲು ಹೇಳಿದ ಉಪಾಯವನ್ನು ಭಯನಿವಾರಣೆಗೂ ಉಪಯೋಗಿಸಬಹುದೇ ದಾಸರೇ ?

ಛೇ ! ಛೇ ! ನಾಚಿಕೆ ಮತ್ತು ಭಯ ಸಮಕಕ್ಷ ಅಲ್ಲ. ಒಂದೊಂದಕ್ಕೂ ಉಪಚಾರ (Treatment) ಬೇರೆ. ಮೇಲೆ ಹೇಳಿದ್ದು ನಾಚಿಕೆಗೆ ಮಾತ್ರ.

ದಾಸರೇ, ಏಕ್ಸರೇ ಇತ್ಯಾದಿ ಏನಾದರೂ ವೈದ್ಯಕೀ ಪರೀಕ್ಷೆ ಮಾಡಿಸಲೇ ? ಅವೆಲ್ಲ ದೈಹಿಕ ವ್ಯಾಧಿಗಳಿಗೆ, ಭಯ ಮಾನಸಿಕ, ಇದು ಆಧಿ. ಇದರ ನಿವಾರಣೆಗೆ ಈಗ ಹೇಳತಕ್ಕ ಉಪಾಯ ಕೇಳು. ಅದರಂತೆ ಅನುಷ್ಠಾನ ಮಾಡು. ಭಯ ಅಚಿರಕಾಲದಲ್ಲಿಯೇ ದೂರವಾಗುವದು.

**ಅಂಜಲೇತಕೆ ಜೀವ ಅನುಗಾಲವೂ ॥**
**ಕಂಜ ನಾಭನ ಮತವ ಕೈಕೊಂಡ ಬಳಿಕ ॥ಪ॥**

ಮೊಟ್ಟ ಮೊದಲಿನ ಹೆಜ್ಜೆ ಸದ್ಗುರುಗಳಮೂಲಕ ವೈಷ್ಣವದೀಕ್ಷೆ ಕೈಕೊಳ್ಳ ಬೇಕು. ಭಯ ಎಂತಹದೋ ಅದರ ನಿವಾರಣೆಗೆ ತಕ್ಕ ಮಂತ್ರವನ್ನು ಗುರು ಗಳಿಂದ ಉಪದೇಶ ಪಡೆದುಕೋ. ಮಂತ್ರ ಜಪಿಸು.

**ನಾರಾಯಣ ಎಂಬ ನಾಲ್ಕು ಅಕ್ಷರದಿಂದ ।**
**ಘೋರ ದುರಿತಗಳನ್ನು ಕೊಲ್ಲಿಸಬಹುದು ॥**

**ಶ್ರೀರಾಮನಾಮ ಎಂಬ ಶಿಂಗಾಣಿ ತಕ್ಕೊಂಡು ।**
**ವೈರಿ ಷಡ್ವರ್ಗವನು ವಧೆ ಮಾಡಬಹುದು ॥೧॥**

ದಾಸರೇ, ಅಷ್ಟ ಮಹಾ ಮಂತ್ರಗಳಲ್ಲಿ ನಾರಾಯಣ ಅಷ್ಟಾಕ್ಷರ ಮಂತ್ರ ವೆಂದು ಪ್ರಸಿದ್ಧಿ ಇದೆ. ಈಗ ನಾಲ್ಕು ಅಕ್ಷರವೆಂದು ಹೇಳೋಣ ವಾಯಿತಲ್ಲ. ಜಪಕ್ಕೆಅಷ್ಟಾಕ್ಷರ ಭಯಾದಿ ಸಂದರ್ಭದಲ್ಲಿ "ನಾರಾಯಣ" ಎಂಬ ಸಂಬೋಧನ ರೂಪ. ಈ ನಾಮವನ್ನು ಸ್ಮರಣೆಗೆ ತಂದರೆ, ಕೂಗಿದರೆ ಸಾಕು ಬಹು ಕೆಲಸ ಸಾಧಕವಾಗುತ್ತದೆ. ಶ್ರೀ ಕೃಷ್ಣಾಮೃತ ಮಹಾರ್ಣವದಲ್ಲಿ ಶ್ರೀ ಮಧ್ವಾ- ಚಾರ್ಯರು ಏನು ಹೇಳುತ್ತಾರೆ ನೀವೇ ನೋಡಿರಿ.

**"ಆರ್ತಾವಿಷಣ್ಣಾ ಶಿಥಿಲಾಶ್ಚ ಭೀತಾ ಘೋರೇಷು ವ್ಯಾಧ್ಯಾಧಿಷು ದಹ್ಯಮಾನಾಃ । ಸಂಕೀರ್ತ್ಯ ನಾರಾಯಣ ಶಬ್ದಮಾತ್ರಂ ವಿಮುಕ್ತ ದುಃಖಾ ಸ್ಸುಖಿನೋ ಭವಂತಿ ॥"**

ಶ್ರೀ ಮದ್ಭಾಗವತೋಕ್ತ ನಾರಾಯಣವರ್ಮವನ್ನು ನೋಡಿರಿ.

**"ನಾರಾಯಣ ಮಯಂ ವರ್ಮ ಸನ್ನಹ್ಯೇಧ್ಭಯ ಆಗತೇ ।**
**ದೈವ ಭೂತಾತ್ಮ ಕರ್ಮಭ್ಯೋ ನಾರಾಯಣ ಮಯಃ ಪುಮಾನ್ ॥"**

ಆಧಿದೈವಿಕ, ಆಧಿಭೌತಿಕ ಮತ್ತು ಆಧ್ಯಾತ್ಮಿಕ ತ್ರಿವಿಧತಾಪಗಳು ಬಂದಾಗ ನಾರಾಯಣವರ್ಮ ಪಠಿಸಿರಿ ಎಂದು ಉಕ್ತವಾಗಿದೆ ಈ ಸ್ತೋತ್ರದಲ್ಲಿ.

ಭಯಪಡಿಸತಕ್ಕ ಶತ್ರುವು ಕಾಮ, ಕ್ರೋಧಾದಿ ಒಳಗಿನವನಾಗಿದ್ದರೆ "ರಾಮ ರಾಮೇತಿ ಗರ್ಜನಂ", ರಾಮನಾಮದಿಂದ ಪರಿಹಾರ. ರಾಮನಾಮ ವೆಂಬುದು ಕಾಮದಿ ಅಂತಃ ಶತ್ರುಗಳಿಗೆ ಚಪ್ಪಗೊಡಲಿ ಇದ್ದಂತೆ.

**ಶ್ರೀ ಕೇಶವ ಎಂಬ ಸಿದ್ಧ ಮಂತ್ರಗಳಿಂದ ।**
**ಬೇಕಾದ ದೋಷಗಳ ಬೇಯಿಸಬಹುದು ॥**

**ವೈಕುಂಠ ಪತಿ ಎಂಬ ವಜ್ರವನೆ ತಕ್ಕೊಂಡು ।**
**ನೂಕಿ ಬಹಯಮ ಭಟರ ನುಗ್ಗು ಮಾಡಲಿಬಹುದು ॥೩॥**

ಕಾರಣಗಳನ್ನು ಕಂಡುಹಿಡಿಯಲಾರದ ಪಾಪಶಾಪಾದಿಗಳಿಂದ ಬಂದ ಭಯಕ್ಕೆ "ಶ್ರೀ ಕೇಶವಾದಿ" ಸಿದ್ಧಮಂತ್ರಗಳು. ಅನೇಕಾವರ್ತಿ ಪ್ರಯೋಗಿಸಿ ಉಕ್ತಫಲವು ನಿಯಮೇನ ದೊರೆಯುವದು ಎಂದು ಬಹುವಕ್ತೃ ಸಂವಾದ ಇರುವ ಸಿದ್ಧ ಮಂತ್ರಗಳು. ಅರ್ಥಾತ್ ಶ್ರೀಮದಾಚಾರ್ಯರು ತಂತ್ರಸಾರ ದಲ್ಲಿ ಬೋಧಿಸಿದ ಉದ್ದೀಪ್ತವೀರ್ಯ ಮಂತ್ರಗಳು. ಸಿದ್ಧೌಷಧಿಗಳಂತೆ, ಭಯವು ಮರಣ ಸಂಬಂಧವಾಗಿದ್ದರೆ ವೈಕುಂಠಪತಿ ಎಂದು ಸ್ಮರಿಸು. ಕೂಗು. ಯಮದೂತರು ನಿನ್ನ ಬಳಿ ಸುಳಿಯಲಾರರು. ವಜ್ರಾಯುಧದಂತೆ ಈ ನಾಮ.

ಇದೇನು ದಾಸರೇ ! ಇಡೀ ಜೀವನವೆಲ್ಲ ಕೊಲಿಸುವದು, ವಧೆಮಾಡಿಸು ವದು, ಬೇಯಿಸುವದು ಮತ್ತು ಯಮಭಟರನ್ನು ನುಗ್ಗುಮಾಡುವದು ಇಷ್ಟ ರಲ್ಲಿಯೇ ಕಳೆದರೆ, ಮುಪ್ಪುಬಂದು ಸಾವಿಗೆ ಸಿದ್ಧರಾಗುತ್ತವೆ. ಶ್ರವಣ ಮನನಾದಿ ಸಾಧನ (ಬ್ರಹ್ಮ ಜಿಜ್ಞಾಸಾ) ಯಾವಾಗ ?

ಕಾತರಬೇಡ ! ಉಪಾಯವಿದೆ. ಮುಪ್ಪು ಸಾವುಗಳನ್ನು ದೂರಮಾಡ ಬೇಕಾದರೆ ಅಮೃತ ಪಾನ ಮಾಡಬೇಕು.

ಹರಿವಾಸುದೇವ ಎಂಬ ಅಮೃತ ಪಾನವಮಾಡಿ |
ಜರೆಮರಣ ಜನನಗಳ ಜಯಿಸಬಹುದು ||
ಹರುಷದಲಿ ಕೈಕೊಂಡು ಪುರಂದರ ವಿಠಲನ |
ಸರಸ ಸದ್ಗತಿಯನ್ನು ಕಡೆಗಾಣಬಹುದು || ೩ ||

ಶ್ರೀ ವಾಸುದೇವ ಮಂತ್ರವೆಂಬ ಅಮೃತ ಪಾನವ ಮಾಡಿ ಜರೆ ಮರಣ ಜನನಗಳನ್ನು ಜಯಿಸಿ, ಲಜ್ಜಾ ಮತ್ತು ಭಯವೆಂಬ ಪ್ರತಿಬಂಧಕದಿಂದ ಮುಕ್ತ ನಾಗಿ, ಶ್ರವಣಮನನಾದಿ ಸಾಧನಮಾಡಿ ಗುರೂಪದಿಷ್ಟ ಮಂತ್ರ ಜಪಧ್ಯಾನಾದಿ ಗಳಿಂದ ಸದ್ಗತಿಯನ್ನು—ಮುಕ್ತಿಯನ್ನು ಕಾಣಲು ಸಾಧ್ಯ ಎಂದು ಶ್ರೀದಾಸ ರಾಯರ ಹಿತನುಡಿಗಳು.

ಬಹಳ ಉಪಕಾರವಾಯಿತು ದಾಸರೇ. ಶಾಸ್ತ್ರಗರ್ಭಿತ ವಚನಗಳನ್ನು ತಮ್ಮ ಎರಡು ದೇವರನಾಮಗಳಲ್ಲಿ ಸುಸ್ಪಷ್ಟಪಡಿಸಿ ಲಜ್ಜಾ ಮತ್ತು ಭಯ ಗಳಿಂದೊದಗಿದ ಪ್ರತಿಬಂಧಕ ನಿವೃತ್ತಿಯ ಉಪಾಯಗಳನ್ನು ಉಪದೇಶಿಸಿ ಶ್ರವಣಾದಿ ಸಾಧನಾನುಷ್ಠಾನಗಳಿಗೆ ನಿಷ್ಕಂಪ ಪ್ರವೃತ್ತಿ ಉಂಟಾಗುವಂತೆ ಮಾಡಿದಿರಿ. ಇಂದೇ ಅಧಿಕಾರಿಗಳ ಸಮೂಹದಲ್ಲಿ ಸೇರುವೆನು. ಉಪಕಾರ ಮರೆಯೆನು.

# ಶಾಸ್ತ್ರಸರಣಿ ದಾಸವಾಣಿ

## ಭಾಗ–೨

**ಲಕ್ಷ್ಮೀನಾರಾಯಣಂ ವಂದೇ ತದ್ಭಕ್ತ ಪ್ರವರೋಹಿಯಃ ।**
**ಶ್ರೀಮದಾನಂದತೀರ್ಥಾಖ್ಯೋ ಗುರುಸ್ತಂಚನ ಮಾಮ್ಯಹಂ ॥**

ಶ್ರೀಮದಾನಂದ ತೀರ್ಥ ಭಗವತ್ಪಾದಾಚಾರ್ಯರಿಂದ ರಚಿತವಾದ ಭಾಷ್ಯಾದಿ ಗ್ರಂಥಗಳಿಗೆ ಸುಮಧ್ವವಿಜಯಕಾರರು, (ಒಂಭತ್ತನೆಯ ಸರ್ಗದಲ್ಲಿ) ಇಪ್ಪತ್ತು ಲಕ್ಷಣಗಳನ್ನು ಹೇಳಿದ್ದಾರೆ. ಅವುಗಳಲ್ಲಿ ಎರಡು ಲಕ್ಷಣಗಳು "ಬಾಲಸಂಘಮಪಿ ಬೋಧಯದ್ಭೃಶಂ ದುರ್ನಿರೂಪ ವಚನಂ ಚ ಪಂಡಿತೈಃ" ಎಂದು ಇವೆ.

ಶಾಸ್ತ್ರರೀತ್ಯಾ ಬಾಲಸಂಘ–ಅಥವಾ ಬಾಲಕರು ಎಂದರೆ ಕೇವಲ ಕ್ಷೀರವೇ ಆಹಾರವಾಗಿರತಕ್ಕ ಬಾಲ್ಯಾವಸ್ಥೆಯಲ್ಲ. ಯುವಕರು ಮತ್ತು ವಯೋವೃದ್ಧರಾದರೂ ಇತರ ಶಾಸ್ತ್ರಗಳ (ಅಂದರೆ ಪ್ರಾಚೀನ ಕಾಲದ ನ್ಯಾಯ, ವ್ಯಾಕರಣ, ಸಾಹಿತ್ಯ ಶಾಸ್ತ್ರಗಳನ್ನಾಗಲೀ ಅಥವಾ ಅರ್ವಾಚೀನ ಕಾಲದ ಭೌತ ಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಶಾಸ್ತ್ರ, ಇಂಜನಿಯರಿಂಗ್, ಮೆಡಿಕಲ್ ಶಾಸ್ತ್ರಗಳೇ ಆಗಲಿ) ಅಧ್ಯಯನ ಮಾಡಿದಾಗ್ಯೂ ವೇದಾಂತ ಶಾಸ್ತ್ರ ಅಧ್ಯಯನ ಮಾಡದೇ ಇದ್ದವರು, ಈ ಶಾಸ್ತ್ರ ವಿವಕ್ಷಾದಿಂದ ಬಾಲಸಂಘವೆಂದು ಶಾಸ್ತ್ರೀಯ ಪಾರಿಭಾಷಿಕ ಪದ. ಅಥವಾ ಇನ್ನೊಂದು ರೀತಿ "ಶ್ರವಣಧಾರಣ ಪಟುರ್ಬಾಲಃ ಎಂದೂ ಹೇಳುವದುಂಟು. ಶ್ರವಣ ಮಾಡಿದ್ದನ್ನು ಬುದ್ಧಿಯಲ್ಲಿ ಧಾರಣ ಮಾಡುವ ಸಾಮರ್ಥ್ಯ ಉಳ್ಳವನು ಎಂದರ್ಥ. (Persons of Commonsense and Intelligence) ಶ್ರೀಮದಾಚಾರ್ಯರ ಸಿದ್ಧಾಂತಗಳನ್ನು ಬಾಲ ಸಂಘಕ್ಕೆ "ಭೃಶಂ" ತತ್ವ ನಿಶ್ಚಾಯಕ ಜ್ಞಾನ ಬುದ್ಧಿಸ್ಥವಾಗುವಷ್ಟು ಬೋಧಿಸಬಹುದು. ಹಾಗೆಯೇ ಕೇವಲ ಪಾಂಡಿತ್ಯಕ್ಕಾಗಿ ಅಥವಾ ಪಾಂಡಿತ್ಯ ಬಲದಿಂದ ಶಾಸ್ತ್ರ ಓದ ತಕ್ಕವರಿಗೆ "ದುರ್ನಿರೂಪ ವಚನಂ ಚ ಪಂಡಿತೈಃ" ಈ ಶಾಸ್ತ್ರ ದುರ್ಗಮವಾಗಿದೆ. ನಿರೂಪಣವೆಂದರೆ ಪರಮತಖಂಡನಪೂರ್ವಕ ಸ್ವಮತ ಸ್ಥಾಪನ.

ಶಾಸ್ತ್ರಕಾರರು ಇಪ್ಪತ್ತೊಂದು ಪರಮತಗಳು ಎಂದು ತಿಳಿಸಿದ್ದಾರೆ. ಇವುಗಳ ಯಥಾರ್ಥ ಸ್ವರೂಪ, ತದ್ಗತ ದೋಷಗಳು ಅವುಗಳ ದೂಷಣೆ ಅಥವಾ ಖಂಡನೆ ಸ್ವಮತ ಅಥವಾ ಯಥಾರ್ಥ ವೇದಮತ ಸ್ಥಾಪನೆ. ಪುನಃ ಪರರಿಂದ ಬಂದ ಪೂರ್ವ ಪಕ್ಷಗಳು, ಅವುಗಳಿಗೆ ಖಂಡನೆ, ಸ್ವಶಿಷ್ಯ ಸಂದೇಹ, ತತ್ಪರಿಹಾರ ಇಷ್ಟೆಲ್ಲ ಮಾಡಲು ಕೇವಲ ಪಾಂಡಿತ್ಯ ಸಾಲದು. ಶ್ರೀ ತ್ರಿವಿಕ್ರಮ ಪಂಡಿತಾಚಾರ್ಯರ, ಶ್ರೀ ಪದ್ಮನಾಭ ತೀರ್ಥರ ಮತ್ತು ಶ್ರೀ ಮಟ್ಟೀಕಾ ಕೃತ್ಪಾದರ ಅಭಿಪ್ರಾಯದಲ್ಲಿ ಕೇವಲ ಪಾಂಡಿತ್ಯದಿಂದ ಕೆಲಸವಾಗದು. ಪರಮ ಗುರುಗಳ ಕಾರುಣ್ಯ ಸೇರಿದರೆ ಮಾತ್ರ ಕೆಲಸವಾಗಲು ಸಾಧ್ಯವೆಂದು ಟೀಕಾ ವಚನ. "ಪರಂ ಶ್ರೀಮತ್-ಪೂರ್ಣಪ್ರಮತಿ ಗುರುಕಾರಣ್ಯ ಸರಣೀಂ ಪ್ರಪನ್ನಾ ಮಾನ್ಯಾಸ್ಮಃ ಕಿಮುಪಿಚ ವದಂತೋऽಪಿ ಮಹತಾಂ". (ನ್ಯಾಯಸುಧಾ)

ದಾಸರಾಯರದು ಭಾಷೆ ಮಾತ್ರ ಕನ್ನಡ. ಮೂಲ ತತ್ವಗಳನ್ನು ಹೇಳತಕ್ಕ ಪದಗಳ ಶೈಲಿ ಸ್ವರಸ ಸುಂದರ. ವಿಶೇಷ ಶಾಸ್ತ್ರ ಅಧ್ಯಯನ ಮಾಡದವರೂ ಸಾಮಾನ್ಯವಾಗಿ ಅರ್ಥಮಾಡಿಕೊಳ್ಳಬಹುದು. ಅಧ್ಯಯನ ಮಾಡಿದವರು ವಿಶೇಷಾರ್ಥ ಕಾಣುತ್ತಾರೆ. ಮನನಕ್ಕೆ ಬಹಳ ಅನುಕೂಲ. "ಸ್ಮರ್ತವ್ಯಸ್ಸತತಂ ವಿಷ್ಣುಃ ವಿಸ್ಮರ್ತವ್ಯೋ ನಕರ್ಹಿಚಿತ್" ಎಂಬಂತೆ ಸಂತತ ಮಾನಸಿಕ ಅನುಸಂಧಾನಕ್ಕೆ ಪದರೂಪಗಳು ಬಹಳ ಅನುಕೂಲ.

ದಶೋಪನಿಷತ್ತುಗಳು, ಬ್ರಹ್ಮಸೂತ್ರಗಳು ಮತ್ತು ಶ್ರೀಮದ್ಭಗವದ್ಗೀತಾ ಇವುಗಳಿಗೆ ಪ್ರಸ್ಥಾನ ತ್ರಯವೆಂದು ಸಂಕೇತ. ಇವುಗಳನ್ನೂ ಇನ್ನಿತರ ಶ್ರುತಿ ಸ್ಮೃತಿಗಳನ್ನೂ ಭಾಷ್ಯ, ಟೀಕಾ-ಟಿಪ್ಪಣಿಗಳನ್ನೂ ಅನುಸರಿಸಿ ಅಧ್ಯಯನ ಮಾಡಬೇಕಾದರೆ ಪ್ರಾಥಮಿಕ ಅಧ್ಯಯನ ರೂಪವಾಗಿ ಕಾವ್ಯ, ಸಾಹಿತ್ಯ, ವ್ಯಾಕರಣ ಮತ್ತು ನ್ಯಾಯಶಾಸ್ತ್ರಗಳನ್ನು ಕೆಲಮಟ್ಟಿಗಾದರೂ ಓದಿ ಆಮೇಲೆ ಗುರು ಮುಖೇನ ವೇದಾಂತ ಗ್ರಂಥಗಳನ್ನು ಅಧ್ಯಯನ ಮಾಡಲು ಅಧಿಕಾರ ಬರುವುದು. ಮೇಲಿನ ಹಿನ್ನೆಲೆ ಇಲ್ಲದೇ ಹೋದರೆ ವ್ಯಾಸಂಗ ಬಹಳ ದಿನ ಮುಂದೆ ಸಾಗಲಾರದು. "ಶ್ರಮಏವಹಿ ಕೇವಲಂ" ಎಂದಾಗುತ್ತದೆ.

ಆದರೆ ದಾಸಸಾಹಿತ್ಯದ ಮೂಲಕ ಮಧ್ವಸಿದ್ಧಾಂತ ಜ್ಞಾನ ಪಡೆಯಬೇಕಾದರೆ ಸಚ್ಛಾಸ್ತ್ರ ಅಥವ ಪುರಾಣಾದಿಗಳನ್ನು ಕೆಲವುಕಾಲ ಶ್ರವಣ ಮಾಡಿರಬೇಕು. ಸಂಸ್ಕೃತ ಕಾವ್ಯ, ಸಾಹಿತ್ಯ, ವ್ಯಾಕರಣ ಮತ್ತು ನ್ಯಾಯಶಾಸ್ತ್ರಗಳ ಅಧ್ಯಯನ ಭಾರವನ್ನು ದಾಸರಾಯರು ಕಡಿಮೆ ಮಾಡಿದ್ದಾರೆ. ಪ್ರಾಕೃತ ಭಾಷೆಯಾದ ಕನ್ನಡ ನಮಗೆ ಚನ್ನಾಗಿ ತಿಳಿದಿದೆ ಎಂದು ಕೇವಲ ಭಾಷಾಸಾಮರ್ಥ್ಯದ ಮೇಲೆ ದಾಸಸಾಹಿತ್ಯದ ಭಾವವನ್ನರಿಯಲು ಹೋದರೆ ಶ್ರಮ ವಿಫಲವಾಗುವುದು. ಕೇವಲ ಹಿತೋಪದೇಶರೂಪ ಕೆಲವು ಪದಗಳು ತಿಳಿಯಬಹುದು. ಇನ್ನು ಕೆಲವು ಭಾಗ ತಿಳಿದಂತೆ ಭಾಸವಾಗುವವು. ತಾತ್ವಿಕ ಪದಗಳ ಮತ್ತು ಸುಳಾದಿಗಳ ಭಾವವನ್ನರಿಯಲಾಗುವುದಿಲ್ಲ. ಆದ್ದರಿಂದ ಶ್ರವಣಾದಿಗಳ ಹಿನ್ನಲೆಯಿಂದ ದಾಸರಾಯರನ್ನು ಶರಣು ಹೊಕ್ಕರೆ ಸಾಧನ ಮಾರ್ಗಕ್ಕೆ ಬಹಳ ಅನುಕೂಲ. ಶ್ರಮಸಾರ್ಥಕ ; ಯಥಾರ್ಥ ಜ್ಞಾನ ಲಾಭ.

ಮೇಲೆ ಹೇಳಿದ ಮಾರ್ಗದಲ್ಲಿ ಸಂಸ್ಕೃತದಲ್ಲಿ ವೇದಾಂತ ಅಧ್ಯಯನವಾಗದೇ ಇದ್ದಲ್ಲಿ, ಬುಭುಕ್ಷುಗಳಾದ ಅಧಿಕಾರಿಗಳಿಗೆ (ಬಾಲ ಸಂಘಕ್ಕೆ) ತತ್ವಗಳನ್ನು ತಿಳಿಯಲು ದಾಸರಾಯರ ಪದ ಪದ್ಯ ಮತ್ತು ಸುಳಾದಿಗಳನ್ನು ಬಿಟ್ಟು ಅನ್ಯ ಮಾರ್ಗವೇ ಇಲ್ಲ. ಈ ಗ್ರಂಥ ಸಮೂಹಗಳು "ಬಾಲಸಂಘಮಪಿ ಬೋಧಯಧ್ಭಲಶಂ" ಎಂಬ ಲಕ್ಷಣವನ್ನು ಜ್ಞಾಪಿಸುತ್ತವೆ. ಶಾಸ್ತ್ರಾಧ್ಯಯನ ಮಾಡಿದವರು ಶಾಸ್ತ್ರ ವಿಷಯ ಮನನ ಮಾಡಲು, ಮತ್ತು ಪ್ರಮೇಯಗಳು ಬುಧ್ಯಾ ರೂಡವಾಗಲು ಮತ್ತು ಅಧಿಕ ಸ್ಪಷ್ಟತೆ ಪಡೆಯಲು ದಾಸೋಕ್ತಿಗಳನ್ನು ಅನುಸರಿಸಬೇಕು.

ಅರ್ಥಾತ್ ದಾಸರಾಯರ ವಚನಗಳು ಶಾಸ್ತ್ರಾಧ್ಯಯನ ಮಾಡಿದವರಿಗೆ ಸಂತತಮನನರೂಪ, ಅಧಿಕ ಸ್ಪಷ್ಟೀಕರಣ ಮತ್ತು ಅಧಿಕ ದಾರ್ಢ್ಯಾರ್ಥ ದ್ಯೋತನ ಈ ರೀತಿ ಉಪಕಾರ ಮಾಡುತ್ತವೆ. "ಸುಧಾ ಓದಬೇಕು ; ಪದಾ ನೋಡಬೇಕು" ಎಂದು ವಚನವಿವೆ. "ಸುಧಾ ಓದಿಪದಾ ನೋಡು" ಎಂದೂ ಕೇಳಿದ್ದೇವೆ. ಅಧ್ಯಯನ ಮಾಡದೇ ಇದ್ದವರು ಸಚ್ಛಾಸ್ತ್ರ ಶ್ರವಣದ್ವಾರಾ ಅಧಿಕಾಯಾಸವಿಲ್ಲದೇ ತತ್ವಗಳನ್ನು ತಿಳಿದು ಸಾಧನಮಾರ್ಗದಲ್ಲಿ ಮುಂದೆ ಹೆಜ್ಜೆ ಇಟ್ಟು

ಅಧಿಕಾರಿಕ ಜನ್ಮವು ವ್ಯರ್ಥವಾಗದಂತೆ ದಾಸರಾಯರ ಗ್ರಂಥ ಸಮೂಹದ್ವಾರಾ ಉಪಕಾರ ಪಡೆಯಬಹುದು.

ಯದ್ಯಪಿ ದಾಸರಾಯರು ಶ್ರೀಮದಾಚಾರ್ಯರ ಮೂಲ ಗ್ರಂಥಗಳಿಗಾಗಲಿ ಅಥವಾ ಟೀಕಾ ಟಿಪ್ಪಣಿಗಳಿಗಾಗಲಿ ಪಂಕ್ತಿಯ ಮೇಲೆ ಕ್ರಮವಾಗಿ ವ್ಯಾಖ್ಯಾನ ಮಾಡದಿದ್ದರೂ, ತತ್ವಗಳನ್ನು ವಿಭಜಿಸಿ ಒಂದೊಂದು ಪ್ರಮೇಯವನ್ನಾಗಲಿ, ವಿಷ್ಣು ಸರ್ವೋತ್ತಮತ್ವವನ್ನಾಗಲಿ, ಜೀವರ ಅಸ್ವಾತಂತ್ರ್ಯ, ತಾರತಮ್ಯ, ಪಂಚ ಭೇದ, ಹಿತೋಪದೇಶ, ಅಯಥಾರ್ಥ ತತ್ವನಿಂದಾ, ಇತ್ಯಾದಿ ವಿಷಯಗಳನ್ನು ಆಯ್ದು ಸಣ್ಣ ಸಣ್ಣ ರೂಪಕಗಳಲ್ಲಿ ಹೃದಯಂಗಮವಾಗಿ ವರ್ಣಿಸಿ ತತ್ವಸಾರವನ್ನು ಬಾಲಸಂಘಕ್ಕೆ ತಿಳಿಸಿದ್ದಾರೆ. ಪಲ್ಲವಿ ಮತ್ತು ಅನುಪಲ್ಲವಿಗಳು ಆಯಾ ಪದಗಳಿಗೆ ಉಪಕ್ರಮ ಅಥವಾ ಪ್ರತಿಜ್ಞಾ ವಾಕ್ಯದಂತೆ. ಮುಂದಿನ ನುಡಿಗಳು ಪ್ರಮಾಣಾಧಾರಗಳಿಂದ ದೃಷ್ಟಾಂತ ಪೂರ್ವಕ ವಿಷಯ ಪುಷ್ಟೀಕರಣ. ಕೊನೆಯ ನುಡಿಯಲ್ಲಿ ಉಪಸಂಹಾರ. ಮುದ್ರಿಕೆಯ ಹರಿನಾಮದೊಂದಿಗೆ ಪದವು ಪೂರ್ಣಗೊಳ್ಳುತ್ತದೆ. ಸಾಮಾನ್ಯವಾಗಿ ಈ ರೀತಿಯನ್ನನುಸರಿಸಿದೆ ದಾಸರಾಯರ ತತ್ವಪ್ರತಿಪಾದನೆ. ಇವರಿಗೆ ಶೃತಿ, ಸ್ಮೃತಿ, ಸರ್ವಜ್ಞಾಚಾರ್ಯರ ವಚನಗಳು ಮತ್ತು ಟೀಕಾಗಳೇ ಮೂಲಭೂತ ಪ್ರಮಾಣಗಳು. ವಿಷಯ ಪುಟ್ಟದಾಗಿದ್ದರೆ ಪದದ ಮೂಲಕ ದೊಡ್ಡದಾಗಿದ್ದರೆ ಸುಳಾದಿಗಳ ಮೂಲಕ, ಕೆಲವೊಂದುಸಲ ಷಟ್ಪದಿಯ ಪದ್ಯಗಳ ಮೂಲಕ ಹೊರಹೊಮ್ಮುತ್ತದೆ. ಕವನ ಪ್ರವಾಹ, ಜ್ಞಾನ, ಧ್ಯಾನ, ಭಕ್ತಿ, ಬೋಧೆ, ಹಿತನುಡಿಗಳು, ಉಪಾಸನಾ, ಎಚ್ಚರಿಕೆ ಇತ್ಯಾದಿ ಅನೇಕ ವಿಷಯಗಳನ್ನು ಸುಲಲಿತವಾಗಿ ಹೃದಯಕ್ಕೆ ನೇರವಾಗಿ ನಾಟಿ ಕ್ರಿಯಾತ್ಮಕವಾಗುವಂತೆ ಮಾಡಿದ್ದಾರೆ.

ದಾಸರಾಯರ ಕೃತಿ ಚಮತ್ಕಾರಗಳನ್ನು ತಿಳಿಯಲು ಹರಿ ಸರ್ವೋತ್ತಮತ್ವ ಪ್ರತಿಪಾದಕ ಒಂದು ಪದವನ್ನು ನೋಡುವಾ. ಬ್ರಹ್ಮಸೂತ್ರಗಳ ಪ್ರಥಮ ಸೂತ್ರದಲ್ಲಿ ಬ್ರಹ್ಮಶಬ್ದಕ್ಕೆ, ಶ್ರೀಮದಾಚಾರ್ಯರು, ವಿಷ್ಣು ಎಂದು ತಿಳಿಸಿದರು. ಪ್ರತಿಪಾದನಾ ಸಂದರ್ಭದಲ್ಲಿ ಅವರು "ತನ್ನೋವಿಷ್ಣುಃ ಪ್ರಚೋದಯಾತ್" "ನಾಮಾನಿ ಸರ್ವಾಣಿ ಯಮಾವಿಶಂತಿ" "ಯೋಂತಃ ಸಮುದ್ರಕವಯೋವದಂತಿ" ಇತ್ಯಾದಿ ಪ್ರಮಾಣ ವಚನಗಳನ್ನು ಉದಾಹರಿಸಿದ್ದಾರೆ. ಈ ಪ್ರಮಾಣಗಳಿಂದ

ವಿಷ್ಣು ಸರ್ವೋತ್ತಮ ಎಂದು ತಿಳಿಯುತ್ತದೆ. ಈ ಮೇಲೆ ಹೇಳಿದ ಪ್ರಮಾಣ ಗಳಿಗೆ "ಏಕೋ ರುದ್ರ ಆಸೀತ್", "ಉಗ್ರೋರುದ್ರ", "ತನ್ನೋರುದ್ರಃ ಪ್ರಚೋದಯಾತ್", ಇತ್ಯಾದಿ ವಚನಗಳು ವಿರೋಧವಾಗಿ ರುದ್ರ ಸರ್ವೋತ್ತಮ ನೆಂದು ತೋರುತ್ತದೆ.

ಸರ್ವೋತ್ತಮತ್ವ ಒಬ್ಬವ್ಯಕ್ತಿಗೆ ಕೂಡೀತೇ ಹೊರತು, ಅನೇಕ ವ್ಯಕ್ತಿಗಳಲ್ಲಿ ಈ ಧರ್ಮ ಕೂಡಲಾರದು.

ಈ ಶೃತಿ ವಾಕ್ಯಗಳಲ್ಲಿ ಕಂಡುಬರುವ ವಿರೋಧವನ್ನು ಪರಿಹರಿಸಲು, ಶ್ರೀಮಧ್ವರು ಅಂಭ್ರಣೀ ಸೂಕ್ತ ಶೃತಿ ವಚನವನ್ನು ಮಧ್ಯಪ್ರವೇಶ ಮಾಡಿಸು ತ್ತಾರೆ. ಈ ಸೂಕ್ತದಲ್ಲಿ "ಯಂ ಕಾಮಯೇ ತಂ ತಮುಗ್ರಂ ಕೃಣೋಮಿ ತಂ ಬ್ರಹ್ಮಾಣಂ ತಂ ಋಷಿಂ ತಂ ಸುಮೇಧಾಂ" ಎಂದು ಇರುವದು. ಇದು ಶ್ರೀ ಲಕ್ಷ್ಮೀದೇವಿಯ ಪರವಚನ. ತನಗೆ ಇಚ್ಛೆ ಬಂದವರಿಗೆ ರುದ್ರ ಪದ ಬ್ರಹ್ಮ ಪದವಿಗಳನ್ನುಕೊಡಲು ಸಮರ್ಥಳೆಂದು ತಿಳಿಸಿದ್ದಾಳೆ. (ಇಲ್ಲಿ ಬರುವ ದೇವತೆಗಳು ಉಮಾಪತಿ ರುದ್ರ, ಚತುರ್ಮುಖ ಬ್ರಹ್ಮ). ಆಕೆಯು ತನ್ನ ಇಂಥ ಬಲಜ್ಞಾನ ಐಶ್ವರ್ಯಗಳಿಗೆ ಕಾರಣನಾದವನು "ಸಮುದ್ರಾಂತಃ ಶಾಯಿ" ಎಂದು ತಿಳಿಸು ತ್ತಾಳೆ, ಇದರಿಂದ ನಿರ್ಧಾರವಾಯಿತು ವಿಷ್ಣುವೇ ಸರ್ವೋತ್ತಮ. ಮೋಕ್ಷದಾತ. ರುದ್ರನು ಸರ್ವೋತ್ತಮನಾಗಲಾರ. ಆದ್ದರಿಂದ ಜಿಜ್ಞಾಸ್ಯ ಬ್ರಹ್ಮ ವಿಷ್ಣುವೇ. ಈ ಬ್ರಹ್ಮ ವಿಷಯಕ ಜಿಜ್ಞಾಸಾ ಕರ್ತವ್ಯ ಎಂದು ಸೂತ್ರದ ಆಶಯ. ಶ್ರೀಮದಾಚಾರ್ಯರ ಸೂತ್ರ ಭಾಷ್ಯದಲ್ಲಿ ವೀರ್ಯವತ್ತಾದ ಸುಂದರ ನಿರೂಪಣೆ ಇದೆ.

ದಾಸರಾಯರು ಸ್ಮೃತಿ ಪ್ರಮಾಣಗಳಿಂದ, ಇನ್ನೊಂದು ರೀತಿ ವಿಷ್ಣು ಸರ್ವೋತ್ತಮತ್ವವನ್ನು ಸಾಧಿಸಿರುತ್ತಾರೆ. ಹರಿ ಮತ್ತು ಹರ ಯಾವ ತಮ್ಮ ಭಕ್ತರಿಗೆ ವರಗಳನ್ನು ಕೊಟ್ಟರೋ ಅವರಿಗೆ ನಿಯಮೇನ ಅಂತ್ಯದಲ್ಲಿ ಪರಿಣಾಮ ಏನಾಯಿತು ? ಅದರ ಮೇಲೆ ಯಾರು ಉತ್ತಮರು ? ಎಂದು ನಿರ್ಧರಿಸಬೇಕೆಂದು ಹೇಳುತ್ತಾರೆ ದಾಸರಾಯರು. ಹರಿಹರರ ಮಧ್ಯದಲ್ಲಿ ಅವರ ಭಕ್ತರನ್ನು

ಪ್ರವೇಶಿಸಿ ಹರಿ ಸರ್ವೋತ್ತಮತ್ವವನ್ನು ಸಾಧನೆ ಮಾಡುತ್ತಾರೆ. ಸ್ಮೃತಿಯಲ್ಲಿ ಬರುವ ಕಥಾಭಾಗಗಳು ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿರುತ್ತವೆ. ದಾಸರಾಯರದು ನೂತನ ಮಾದರಿಯ ಯುಕ್ತ್ಯನು ಸಂಧಾನ.

**ಹರಿಯಧಿಕ ಹರನಧಿಕ ಎಂದು ಬಡಿದಾಡದಿರಿ।**
**ಹರಿ ಹರರ ಭಕುತರೇ ಇದಕೆ ಸಾಕ್ಷಿ ॥ ಪ ॥**

ಹೇ ! ಹರಿ ಹರರ ಭಕ್ತರುಗಳಿರಾ ! ಪ್ರಮಾಣಾಧಾರವಿಲ್ಲದೇ ಹರಿ ಅಧಿಕ ಹರ ಅಧಿಕ ಎಂದು ವಿವಾದ ಮಾಡಬೇಡಿರಿ. ಸ್ಮೃತಿಗಳನ್ನು ನೋಡಿರಿ. ಹರಿ ಹರರು ಕೊಟ್ಟ ವರಗಳಿಂದ ಅವರವರ ಭಕ್ತರುಗಳಿಗೇನಾಯಿತೆಂದು.

**ಹರಿಯ ಬಾಗಿಲುಕಾಯ್ದು ಬಲಿ ಭಾಗ್ಯವಂತನಾದ।**
**ಹರನ ಬಾಗಿಲಕಾಯ್ದು ಬಾಣನಳಿದ ॥**
**ಹರಿ ಒಲಿದು ಭೀಮನಿಗೆ ಪರಿಪೂರ್ಣ ಪದವಿತ್ತ।**
**ಹರನೊಲಿದ ಜರಾಸಂಧ ಹತನಾದುದರಿಯ ॥೧॥**

ಬಲಿ ಮತ್ತು ಬಾಣ ಇವರುಗಳು ಹರಿ ಹರರ ವರಗಳಿಂದ ಕ್ರಮವಾಗಿ ಉತ್ತಮ ಮತ್ತು ಅಧಮ ಫಲಗಳನ್ನು ಹೊಂದಿದರು. ಭೀಮ ಜರಾಸಂಧರಿಗೆ ಯುದ್ಧ ಸಂಧಿಸಿ ಭೀಮನು ಜರಾಸಂಧನನ್ನು ವಧೆಮಾಡಿದ. ಹರಿ ಕೊಟ್ಟವರ ಪ್ರಬಲ ಆದ್ದರಿಂದ ಭೀಮನಿಗೆ ಜಯ. ಇದರಿಂದಲೇ ಹರಿ ಸರ್ವೋತ್ತಮತ್ವ ಸಿದ್ಧವಾಯಿತು.

ದಾಸರೇ ಕೇವಲ ಎರಡು ಉದಾಹರಣೆಗಳಿಂದ ಹರಿ ಸರ್ವೋತ್ತಮತ್ವ ತತ್ವ ನಿರ್ಧರಿಸುವದು ಸರಿಕಾಣುವದಿಲ್ಲ. ಪಾಣಿನಿರೀತ್ಯಾ ಬಹುವಚನವೆಂದರೆ ಕೊನೆಯಪಕ್ಷ ಮೂರು ಉದಾಹರಣೆಗಳು ಇರಬೇಕಲ್ಲವೇ ? ಹಾಗಾದರೇನೇ ಬಹು ಪ್ರಮಾಣಗಳಿಂದ ತತ್ವ ನಿರ್ಧರಿಸಿದಂತಾಗುತ್ತದೆ.

ಆಗಲಿ. ಎರಡೇಕೆ ನಾಲ್ಕು ದೃಷ್ಟಾಂತ ಹೇಳುವೆವು.

**ಹರಿಯು ನೆನೆದು ಪ್ರಹ್ಲಾದ ಬಂದ ದುರಿತವ ಗೆದ್ದ ।**
**ಹರನೊಲಿದವನ ಪಿತ ಹತನಾದನು ॥**
**ಹರಿ ಒಲಿದ ವಿಭೀಷಣ ಪೂರ್ಣ ವರ ಪಡೆವ ।**
**ಹರನೊಲಿದ ರಾವಣನು ಹತನಾದುದರಿಂ ॥೨॥**

ಪ್ರಹ್ಲಾದನನ್ನು ನೋಡಿರಿ. ಗರ್ಭವಾಸದಲ್ಲಿರುವಾಗಲೇ ನಾರದರು ಉಪದೇಶಿಸಿದ ನಾರಾಯಣ ಮಂತ್ರ ಪ್ರಭಾವದಿಂದ ತನ್ನ ತಂದೆ ಕೊಡಿಸಿದ ಅನೇಕ ಯಾತನೆಗಳಿಂದ ಪಾರಾದನು. ಪ್ರಹ್ಲಾದನು ನಾಶವಾಗದೇ ಇದ್ದ ಸ್ಥಿತಿಯನ್ನು ನೋಡಿ, ಹತಾಶನಾದ ಹಿರಣ್ಯಕಶಿಪುವೇ ಮಗನ ವಧೆಗೆ ಉದ್ಯುಕ್ತ ನಾಗಿ, ಪ್ರಹ್ಲಾದನನ್ನು ಕುರಿತು ಆವನ ಬಲಕ್ಕೆ ಕಾರಣನಾದವನು ಯಾರೆಂದು ತೋರಿಸಲು ಅಗ್ರಹ ಮಾಡಿದನು. ಈ ಕಂಭದಲ್ಲಿರುವನೇ ಎಂದು ಕಂಭದ ಕಡೆ ಕೈತೋರಿ ಗರ್ಜಿಸಿದನು. ಅಲ್ಲಿ ಹರಿ ಇರುವನೆಂದು ಪ್ರಹ್ಲಾದನ ಖಚಿತ ಉತ್ತರ. ಖಳನು ಗದೆಯಿಂದ ಕಂಭಕ್ಕೆ ಪ್ರಹಾರ ಮಾಡಿದನು. ಕಂಭ ಸ್ಫೋಟವಾಗಿ ನರಸಿಂಹಾವತಾರವು ಕಾಣಿಸಿಕೊಂಡಿತು. ಹಿರಣ್ಯಕಶಿಪು ಸಂಹರಿಸಲ್ಪಟ್ಟನು. ತರಳ ಪ್ರಲ್ಹಾದ ಭಕ್ತಾಗ್ರೇಸರನಾದನು, ಹರಿಯ ಅನುಗ್ರಹದಿಂದ. ನೋಡಿರಿ ಹರಿನಾಮ ಪ್ರಾಬಲ್ಯ. ಬ್ರಹ್ಮನವರ ಪಡೆದ ದೈತ್ಯನೇನಾದನು ?

ಅದೇರೀತಿ ವಿಭೀಷಣನಿಗೆ ಶ್ರೀರಾಮದೇವರ ಅನುಗ್ರಹದಿಂದ ರಾಜ್ಯ ದೊರಕಿತು. ಹರನವರ ಪಡೆದ ರಾವಣ ನಾಶಹೊಂದಿದನು.

ದಾಸರೇ, ಈ ಹರ ವರಕೊಟ್ಟ ವ್ಯಕ್ತಿಗಳೆಲ್ಲ ದೈತ್ಯರು, ಅವಿವೇಕಿಗಳು, ಸಹಜ ದುರ್ಬಲರು. ಅವರವರ ಉನ್ಮತ್ತತೆಯಿಂದಲೂ ಅಚಾತುರ್ಯಗಳಿಂದಲೂ ಸೋಲು ಮತ್ತು ನಾಶವನ್ನು ಹೊಂದಿದರು. ಇವರನ್ನು ದೃಷ್ಟಾಂತವಾಗಿಟ್ಟು ಕೊಂಡು ಅಂಥ ಪ್ರಚಂಡ ಮತ್ತು ಜಗತ್ತು ಪ್ರಳಯ ಮಾಡಲು ಶಕ್ತನಾದ ಹರನ ಸ್ಥಾನವನ್ನು ಒಂದೇಸಲ ಕಡಿಮೆಮಾಡಿ ನಿರ್ಧಾರಕ್ಕೆ ದುಡುಕುವದು ಸರಿಯಲ್ಲವೆಂದು ತೋರುತ್ತದೆ.

ಒಂದು ದೃಷ್ಟಿಯಿಂದ ನೀವು ಹೇಳುವದೂ ಸರಿಯೇ. ಆದರೆ ಈಗ ಕೇಳಿರಿ. ಒಂದು ಸಂದರ್ಭದಲ್ಲಿ ನೇರವಾಗಿ ಹರನಿಗೇನಾಯಿತೆಂದು ನೋಡುವಾ.

ಹರನ ವರ ಪಡೆದ ಭಸ್ಮಾಸುರನು ಗರ್ವದಲಿ ।
ಹರನ ಶಿರದ ಮೇಲ್ಕರವನಿಡಲು ಬರಲು ॥
ಹರಿಯೇ ನೀಪೊರೆಯೆಂದು ತ್ರಿಪುರಾರಿ ಮೊರೆಯಿಡಲು ।
ವರದ ಪುರಂದರ ವಿಟ್ಠಲ ಕಾಯ್ದುದರಿಯ ॥ ೩ ॥

ಭಸ್ಮಾಸುರನಿಂದ ಅಟ್ಟಿಸಿಕೊಂಡು ಹೋಗಲ್ಪಟ್ಟ ರುದ್ರನು ವಿಷ್ಣುವಿನಿಂದ ರಕ್ಷಿಸಲ್ಪಟ್ಟದ್ದು ಪ್ರಸಿದ್ಧ ವಿಷಯುವಲ್ಲವೇ. ಈಗ ನೀವೇ ನಿರ್ಧಾರ ಮಾಡಿರಿ. ಹರಿ ಸರ್ವೋತ್ತಮ ಎಂದು ನಿರ್ವಿವಾದವಾಗಿ ನಿಶ್ಚಯವಾಯಿತಲ್ಲವೇ ? ಆದ್ದರಿಂದ ಭಕ್ತಾದಿಗಳಿರಾ ! ಶೃತಿಸ್ಮೃತ್ಯುಕ್ತವಾದ ಪ್ರಮಾಣಗಳನ್ನು ವಿಮರ್ಶೆ ಮಾಡದೇ ವಿವಾದ ಮಾಡಬೇಡಿರಿ.

ಶ್ರೀವಿಷ್ಣುವು ಸರ್ವೋತ್ತಮನಾದರೂ ನಾವು ಉಮಾಪತಿ ರುದ್ರ ದೇವನನ್ನು ಪೂರಾ ಕೈಬಿಟ್ಟೆವೆಂದು ತಿಳಿಯಬೇಡಿರಿ. ತಾರತಮ್ಯಾನುಸಾರ ರುದ್ರ ದೇವರು ಐದನೇ ಕಕ್ಷಾದಲ್ಲಿರುತ್ತಾರೆ. ಶೇಷಪದವಿಗೆ ಬಂದು ಮುಕ್ತರಾಗುವರು. ಅಹಂಕಾರ ಮತ್ತು ಮನೋಅಭಿಮಾನಿದೇವತೆ, ಆದ್ದರಿಂದ ಶ್ರೀಮದ್ಭಾಗವತದಲ್ಲಿ ಹೇಳಿರುವಂತೆ "ಪುತ್ರೇತಿ ತನ್ಮಯತಯಾ ತರವೋ ಪಿನೇದುಃ ತಂ ಸರ್ವಭೂತ ಹೃದಯಂ ಮುನಿಮಾನತೋಸ್ಮಿ"; ವ್ಯಾಸರು ಪುತ್ರರಾದ ಶುಕರನ್ನು ಸಂಭೋಧಿಸಿದರೆ ಅಲ್ಲಿದ್ದ ದ್ರುಮಲತೆಗಳು ಉತ್ತರಕೊಟ್ಟವು. ಅಹಂಕಾರ ತತ್ವಾಭಿಮಾನಿಯಾದ್ದರಿಂದ, "ತೈಲಧಾರೆಯಂತೆ ಮನಸುಕೊಡು ಹರಿಯಲ್ಲಿ ಕೈಲಾಸವಾಸ ಗೌರೀಶ ಈಶ" ಎಂದು ದಾಸರಾಯರ ಪ್ರಾರ್ಥನೆ. ಅನೇಕ ಪುರಾಣಾದಿಗಳಲ್ಲಿ ರುದ್ರದೇವರೇ ಹೇಳುತ್ತಾರೆ. **"ಅಹಂ ಭೋಗ ಪ್ರದೋವತ್ಸ ಮೋಕ್ಷದಸ್ತು ಜನಾರ್ದನಃ"** ಎಂದು. ಮೋಕ್ಷಬೇಕಾದರೆ ಜನಾರ್ದನನ ಬಳಿ ಹೋಗಿರಿ. ಬೇರೆ ಏನಾದರು ಕೇಳುವದಿದ್ದರೆ ನನ್ನಲ್ಲಿಗೆ ಬನ್ನಿರಿ ಎನ್ನುತ್ತಾರೆ ರುದ್ರದೇವರು.

ಭಕ್ತರು, ಯಾವ ದೇವತೆ ಯಾವದಕ್ಕೆ ಅಭಿಮಾನಿ ? ಎಷ್ಟು ಶಕ್ತರು ? ಈ ವಿಷಯವನ್ನು, ತಾರತಮ್ಯ ಪ್ರಕರಣಗಳನ್ನು ಚೆನ್ನಾಗಿ ತಿಳಿದು ಭಿನ್ನಭಿನ್ನ ತತ್ವ, ಕರ್ಮಜ ದೇವತೆಗಳನ್ನರಿತು ಪ್ರಾರ್ಥನೆ ಮಾಡಬೇಕು. ಯದ್ವಾತದ್ವಾ ಕೇಳಿದರೆ, ಅವರು ಕೊಡಲಾರದ್ದನ್ನು ಕೇಳಿದರೆ ಆಭಾಸವಾಗುತ್ತದೆ. ದೇವತೆಗಳು ಕುಪಿತರಾಗುವ ಸಂಭವವಿದೆ. ಅಂಚೆ ಕಛೇರಿಗೆ ಹೋಗಿ ಬೆಲ್ಲವನ್ನು ಕೇಳಿದ

ತೆರನಾಗುತ್ತದೆ. ಆದ್ದರಿಂದ ಹರಿಸರ್ವೋತ್ತಮತ್ವ ಮತ್ತು ದೇವತಾ ತಾರತಮ್ಯಾದಿಗಳನ್ನು ನಿರಂತರ ಮನನ ಮಾಡುವ ಆವಶ್ಯಕತೆಯಿದೆ ಎಂಬುದು ವಿಚಾರ.

# ಶಾಸ್ತ್ರಸರಣಿ ದಾಸವಾಣಿ

## ಭಾಗ–೩

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಬ್ರಹ್ಮಸೂತ್ರ, ಉಪನಿಷತ್ ಮತ್ತು ಗೀತಾ ಈ ಪ್ರಸ್ಥಾನತ್ರಯಗಳಿಗೆ ರಚಿಸದ ಭಾಷ್ಯಗಳಲ್ಲಿ ವಿಪುಲ ಶ್ರುತಿ, ಸ್ಮೃತಿ, ಪ್ರಮಾಣ ವಚನಗಳಿಂದ ವಿಷ್ಣು ಸರ್ವೋತ್ತಮತ್ವ ಸಾಧನೆಯನ್ನು ಸರ್ವೋತ್ಕೃಷ್ಟ ರೀತಿಯಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಈ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಮಾತ್ರವಲ್ಲ, ಅವರು ರಚಿಸಿದ ಪ್ರಕರಣ ಗ್ರಂಥ ವಾಗಲಿ ಸ್ತೋತ್ರ ಗ್ರಂಥವಾಗಲಿ, ಋುಗಾದಿ, ಭಾರತಾದಿ ಗ್ರಂಥಗಳಲ್ಲೂ ವಿಷ್ಣು ಸರ್ವೋತ್ತಮನೆಂಬ ವಿಷಯ ಸ್ಫುಟವಾಗಿ ತೋರಿಸಿದ್ದಾರೆ. ಅವರ ಬರಹ ಭಾಷೆ ಸಂಸ್ಕೃತ. ನಿರ್ದುಷ್ಟ ಪದ ಪ್ರಯೋಗ, ನಿಯಮಿತ ಪದ ಪ್ರಯೋಗ, ಅರ್ಥಗಾಂಭೀರ್ಯ ಇತ್ಯಾದಿಗಳ ಬಗ್ಗೆ ಸುಮಧ್ವ ವಿಜಯದಲ್ಲಿ "ಅಸ್ತದೂಷಣ ಮವಂಧ್ಯ ಭಾಷಣಂ ಲಕ್ಷಿತಂ ಸಕಲ ಲಕ್ಷಣೈ ಸಮಂ" ಎಂಬ ಸುಂದರ ವರ್ಣನೆ ಯಿದೆ. ಪರಂಪರಾ ಅಧ್ಯಯನ ಮಾರ್ಗದಲ್ಲಿ ಬಂದ ಗುರುಗಳಿಂದ ಟೀಕಾ, ಟಿಪ್ಪಣಿಗಳ ಸಹಾಯದಿಂದ ವ್ಯವಸಾಯ ಮಾಡಿದರೆ ಪರಮ ಗುರು ಕಾರುಣ್ಯ ದಿಂದ ತತ್ವ ತಿಳಿಯಲು ಸಾಧ್ಯ.

ಶ್ರೀ ವಿಷ್ಣುವು ಸಕಲ ಚೇತನರಾಶಿಗಳಿಂದ ಅತ್ಯಂತ ಭಿನ್ನನೂ ಮತ್ತು ಸರ್ವೋತ್ತಮನೂ ಆಗಿದ್ದಾನೆ. ಚೇತನರು ಏನೇ ಪ್ರಯತ್ನ ಮಾಡಿದಾಗ್ಯೂ ಯಾವ ಕಾಲಕ್ಕೂ ಅವನಿಗೆ ಸಮರಾಗಲಾರರು. ಅಧಿಕವಂತೂ ಶಕ್ಯವೇ ಇಲ್ಲ.

ಅವನನ್ನು ಅನುಸರಿಸಿದರೆ ಮಾತ್ರ ಒಂದಿಲ್ಲೊಂದು ದಿನ ದಯಮಾಡಿ ಈ ಚೇತನರ ದುಃಖ ನಿವೃತ್ತಿಮಾಡಿ ಆತ್ಯಂತಿಕ ಸುಖವನ್ನು ಕೊಟ್ಟಾನು. ಪ್ರತಿಸ್ಪರ್ಧಿಸಿದರೆ ಅವನಿಗೆ ಎದುರಾಗಿ ನಿಲ್ಲಲು ಯಾರಿಗೂ ಯಾವ ಕಾಲಕ್ಕೂ ಸಾಧ್ಯವಿಲ್ಲ. ಅವನು ಸರ್ವತಂತ್ರ ಸ್ವತಂತ್ರ ಮತ್ತು ಸೃಷ್ಟ್ಯಾದ್ಯಷ್ಟ ಕರ್ತೃತ್ವ, ಐಶ್ವರ್ಯವುಳ್ಳವ. ಕೆಲವು ಉತ್ತಮ ಚೇತನರಿಗೆ ಸೃಷ್ಟ್ಯಾದಿ ಕೆಲಸಗಳನ್ನು ಹಂಚಿಕೊಟ್ಟಿದ್ದಾನೆ. ಆದರೂ ಅವನಧೀನಕ್ಕೊಳಪಟ್ಟು ಕೆಲಸ, ಉಳಿದವರಿಗೆ ಅದೂ ಇಲ್ಲ.

"ಸ್ವಾಮಿಯಂತೆ ಬಂಟನೋ", ರಾಮರಿಗೆ ತಕ್ಕ ಬಂಟರೆಂದರೆ ಹನುಮರು. ಹಾಗೆಯೇ ವೇದವ್ಯಾಸರಿಗೆ ತಕ್ಕ ಬಂಟರು ಮಧ್ವರು. ಮಧ್ವರಿಗೆ ತಕ್ಕ ಬಂಟರು ಸಂಸ್ಕೃತ ವಾಙ್ಮಯದಲ್ಲಿ ಪದ್ಮನಾಭತೀರ್ಥ, ಜಯತೀರ್ಥಾದಿ ಪ್ರಭೃತಿಗಳು, ಪ್ರಾಕೃತ ವಾಙ್ಮಯದಲ್ಲಿ ಬಂಟರೆಂದರೆ ಪುರಂದರದಾಸ, ವಿಜಯದಾಸಾದಿ ಮಹನೀಯರು.

ಶ್ರೀ ವಿಷ್ಣು ಸರ್ವೋತ್ತಮತ್ವ ತತ್ವವನ್ನು ದಾಸರಾಯರು ಸ್ಮೃತಿ ದೃಷ್ಟಾಂತಗಳಿಂದ ಉಪಪಾದನೆ ಮಾಡಿದ್ದಾರೆ. ಈ ಯುಕ್ತ್ಯನುಸಂಧಾನ ವಿದ್ವಾಂಸರಿಗೂ ಅಧಿಕ ದಾರ್ಢ್ಯ ಮತ್ತು ಅಧಿಕ ಸ್ಪಷ್ಟತೆಗೊಳಿಸಿ ಮನನಶೀಲರಾಗಲು ಅನುಕೂಲ. ಪದಗಳು ಬೇಗನೇ ಮುಖೋದ್ಗತವಾಗಿ ಬಿಡುತ್ತವೆ. ಬಾಲಸಂಘಕ್ಕೆ ಅನಾಯಾಸವಾಗಿ ಬುಧ್ಯಾರೂಢವಾಗುವಂತೆ ಸಮರ್ಥನೆ ಮಾಡಿದ್ದಾರೆ. ಶ್ರುತಿ, ಸ್ಮೃತಿಗಳಲ್ಲಿ ಭಿನ್ನಭಿನ್ನ ಸಂದರ್ಭಗಳಲ್ಲಿ ಲಕ್ಷ್ಮೀ, ಬ್ರಹ್ಮ, ರುದ್ರ ಇತ್ಯಾದಿ ಪರವಚನಗಳು ಇವೆ. ಇವರುಸ ರ್ವೋತ್ತಮ ನೆಂಬ ಸಂದೇಹ ಬಂದರೆ ಅವುಗಳನ್ನು ಪರಿಹಾರ ಮಾಡಿ ಚಮತ್ಕಾರ ಯುಕ್ತಿಗಳಿಂದ, ವಿಷ್ಣು ಒಬ್ಬನನ್ನು ಬಿಟ್ಟು ಇತರ ದೇವತೆಗಳಲ್ಲಿ ಸರ್ವೋತ್ತಮತ್ವವು ಸರ್ವಥಾ ಕೂಡುವದಿಲ್ಲವೆಂದು ಅತ್ಯುತ್ತಮವಾಗಿ ಸಾಧಿಸಿದ್ದಾರೆ. ಬ್ರಹ್ಮಸೂತ್ರ ಪ್ರಥಮಾಧ್ಯಾಯ ಸಮನ್ವಯಾಧ್ಯಾಯವೆಂದು. ಈ ಸಮಗ್ರ ಅಧ್ಯಾಯದಲ್ಲಿ ಸಕಲ ವರ್ಣಾತ್ಮಕ, ಧ್ವನ್ಯಾತ್ಮಕ ಶಬ್ದಗಳು ವಿಷ್ಣುವಿನಲ್ಲಿಯೇ ಸಮನ್ವಯವಾಗುವವೆಂದೂ, ಅನ್ಯಪರವಲ್ಲವೆಂದೂಭಾಷ್ಯಕಾರರುಪ್ರತಿಪಾದನೆ ಮಾಡಿದ್ದಾರೆ.

ಈ ವಿಷಯದಲ್ಲಿ ನೋಡುವಾ ದಾಸರಾಯರ ಒಂದು ಕೃತಿ.

**ಅಂದೇ ನಿರ್ಣಯವಾದುದಕೆ । ಸಿರಿ ।**
**ಇಂದಿರಾಪತಿ ಪರದೈವವೆಂದೂ ॥ ಪ ॥**

ಬಹಳಕಾಲದ ಹಿಂದೆಯೇ ಇಂದಿರಾಪತಿ, ಸಾಕ್ಷಾತ್ ವಿಷ್ಣುವು ಸರ್ವೋತ್ತಮನೆಂದು ನಿರ್ಧಾರವಾಗಿ ಹೋಗಿದೆ. ಇದು ನಿಮಗೆ ತಿಳಿಯದೇ. ಇಲ್ಲ ಬಿಡ್ರಿ ದಾಸರೇ, ದೇವಲೋಕದ ಸಮಾಚಾರ ನಮ್ಮ ಪತ್ರಿಕೆಗಳಲ್ಲಿ ಬರುವುದೇ ಇಲ್ಲ, ನಮಗೆ ಗೊತ್ತಾಗುವ ಬಗೆ ಹೇಗೆ ? ತ್ರಿಲೋಕ ಸಂಚಾರಿಗಳಾದ ತಾವು ಬಂದಾಗಲೇ ಆ ಪರಲೋಕಗಳ ವಾರ್ತೆ ನಮಗೆ ಗೊತ್ತಾಗುವದು. ಏನಾಯ್ತು ಹೇಳೋಣವಾಗಲಿ. ಎಲ್ಲ ದೇವತೆಗಳೂ ಇದ್ದರೆ ? ದೈತ್ಯರ ಅಭಿಪ್ರಾಯವೇನು ?

**ಅಂದು ಸ್ವಯಂವರದಲಿ ಬ್ರಹ್ಮರುದ್ರಾದಿ । ಇಂದ್ರಾದಿಗಳೆಲ್ಲರ ಜರೆದು ॥ ಇಂದಿರೆ ನಿತ್ಯಾನಂದ ನಿರ್ದೋಷ ಗುಣಪೂರ್ಣ । ನೆಂದು ಮಾಲೆಯ ಹಾಕಿದಳು ॥ ೧ ॥**

ಅದು ಕ್ಷೀರ ಸಮುದ್ರ ಮಥನಕಾಲ. ಮಥನ ಮಾಡತಾ ಮಾಡತಾ ಅನೇಕ ಪದಾರ್ಥಗಳು ಬಂದವು. ಆ ಮೇಲೆ ಲಕ್ಷ್ಮಿಯೂ ಬಂದಳು. ಅದೇನು ಲೋಕಮೋಹಕ ಆಕರ್ಷಕ ಸುಂದರ ರೂಪ. ಆಕೆ ಬಂದ ಕೂಡಲೇ ಒಬ್ಬೊಬ್ಬ ದೇವತೆಗಳು ಒಂದೊಂದು ಉಡುಗೊರೆ ಕೊಟ್ಟು ಉಪಚಾರ ಮಾಡಿದರು. ದೇವೇಂದ್ರನು ಆಸನ, ಸರಸ್ವತಿ ವೈಜಯಂತಿ ಮಾಲೆ, ಸಮುದ್ರರಾಜ ನೀಲಿ ಸೀರೆ, ಇತ್ಯಾದಿಗಳನ್ನು ಕೊಟ್ಟರು. ಲಕ್ಷ್ಮೀದೇವಿಯು ಮಾಲೆಯನ್ನು ಹಿಡಿದುಕೊಂಡು ದೇವದೈತ್ಯರ ಸಮೂಹದಲ್ಲಿ ಹೊರಟಳು. ಸ್ವಯಂವರ ಪ್ರಾರಂಭವಾಯಿತು, ದೇವದೈತ್ಯರು ಎರಡು ಸಾಲಾಗಿ ನಿಂತರು. ಪ್ರತಿಯೊಬ್ಬರೂ ತಮಗೆ ಒಂದು ಅವಕಾಶ (Chance) ಇದೆ ಎಂಬ ಆಶೆಯಿಂದ, ಬೆವರು ಒರೆಸಿಕೊಂಡು, ಉಡುಪುಗಳನ್ನು ಸಾವರಿಸಿಕೊಂಡು ಲಕ್ಷ್ಮೀ ಆಗಮನವನ್ನು ನಿರೀಕ್ಷಿಸುತ್ತ ಹಸನ್ಮುಖರಾಗಿ ನಿಂತರು. ಲಕ್ಷ್ಮೀದೇವಿಯು ಪ್ರತಿಯೊಬ್ಬ ದೇವತೆಯಲ್ಲೂ ಒಂದೊಂದು ದೋಷವನ್ನು ತೋರಿಸಿದಳು. ದೈತ್ಯರ ಕಡೆಗಂತೂ ನೋಡಲೇ ಇಲ್ಲ. ಎಲ್ಲರೂ ನೋಡನೋಡುತ್ತಲೇ ವಿಷ್ಣುವು ನಿತ್ಯಾನಂದ,

ನಿರ್ದೋಷ ಮತ್ತು ಗುಣಪೂರ್ಣನೆಂದು ಮಾಲೆ ಹಾಕಿದಳು. ಬ್ರಹ್ಮರುದ್ರಾದಿ ಗಳಿಗಿಂತಲೂ ಮತ್ತು ಲಕ್ಷ್ಮೀಗಿಂತಲೂ ವಿಷ್ಣು ಉತ್ತಮನೆಂದು ನಿರ್ವಿವಾದ ವಾಯಿತು.

ಎರಡನೆಯದಾಗಿ ಪ್ರಪಂಚ ಸೃಷ್ಟಿ ಮಾಡಿದ್ದಾನೆಂದು ಪ್ರಸಿದ್ಧಿಯುಳ್ಳ ಚತುರ್ಮುಖ ಬ್ರಹ್ಮ ಸರ್ವೋತ್ತಮ ದೇವತೆ ಏನೋ ಎಂಬ ಸಂದೇಹ ಬಂದರೆ ಭಾಗವತ ದೃಷ್ಟಾಂತದಿಂದ ಪರಿಹಾರ ಮಾಡುತ್ತಾರೆ.

**ಸರಸಿಜೋದ್ಭವ ಪಾದವ ತೊಳೆಯಲು**
**ಹರಭಕ್ತಿಯಿಂದ ಹರಿಪಾದ ತೀರ್ಥವ ||**
**ಹರುಷದಿ ಸುರಮುನಿಗಳೆಲ್ಲರ ಮುಂದೆ |**
**ಧರಿಸಿದನಂದು ಶಿರಸ್ಸಿನಲಿ || ೨ ||**

ಬ್ರಹ್ಮದೇವರು ವಿಷ್ಣು ಪಾದಗಳನ್ನು ತೊಳೆದರು. ಬ್ರಹ್ಮ ದೇವರು, ರುದ್ರದೇವರು ಮತ್ತು ಇನ್ನಿತರ ದೇವತೆಗಳು, ಮುನಿಗಳು ವಿಷ್ಣು ಪಾದೋದಕ ವನ್ನು ಶಿರಸ್ಸಿನಲ್ಲಿ ಧಾರಣ ಮಾಡಿದರು. ದೇವತೆಗಳಲ್ಲಿ ಚತುರ್ಮುಖ ಬ್ರಹ್ಮ ದೇವನೇ ಹಿರಿಯ. ಅವನೂ ತನಗೊಬ್ಬ ಹಿರಿಯನಿದ್ದಾನೆಂದು ಹೇಳಿದ ಮೇಲೆ ವಿಷ್ಣುವು ಸರ್ವೋತ್ತಮನೆಂದು ಸಾಧಿಸಲು ಬೇರೆ ಏನು ಸಾಧನೆ ಬೇಕು.

ರುದ್ರದೇವರು ಸಂಹಾರ ಕರ್ತೃಗಳೆಂದು ಲೋಕ ಪ್ರಸಿದ್ಧಿ. ಪ್ರಚಂಡ ಶಕ್ತಿ, ಬಹು ಉಗ್ರ ಎಂದು ರುದ್ರದೇವರು ಸರ್ವೋತ್ತಮರೋ ಎಂದು ಸಂದೇಹ ಬಂದರೆ, — ದಾಸರಾಯರು ಎರಡು ದೃಷ್ಟಾಂತಗಳಿಂದ ಸ್ಪಷ್ಟೀಕರಣ ಮಾಡುತ್ತಾರೆ.

**ವೃಕನೆಂಬಾಸುರಗೆ ಹರವರವನೆ ಕೊಟ್ಟು |**
**ಚಕಿತನಾಗಿ ಓಡಿ ಬಳಲುತಿರೆ ||**
**ರುಕುಮಿಣಿಪತಿ ವೃಕಾಸುರನ ಭಸ್ಮವ ಮಾಡಿ |**
**ಭಕುತ ರುದ್ರನೆಂದು ಪಾಲಿಸಿದ || ೩ ||**

ವಿಷ್ಣುವಿನಿಂದ ರುದ್ರದೇವನು ಪಾಲಿಸಲ್ಪಟ್ಟ ವಿಷಯ, ಉಪಾಯದಿಂದ ಆಸುರನನ್ನು ಭಸ್ಮ ಮಾಡಿದ ವಿಷಯ ಸ್ಪಷ್ಟವಾಗಿದೆ. ಸರ್ವೋತ್ತಮತ್ವವೂ ಸ್ಪಷ್ಟವಿದೆ.

ಇನ್ನೊಂದು ಸಮಯದಲ್ಲಿ ಸಮುದ್ರ ಮಥನ ಮಾಡಿದಾಗ ಉತ್ಪನ್ನವಾದ ಹಾಲಾಹಲ ವಿಷವನ್ನು ಕುಡಿದ ರುದ್ರದೇವನ ಸ್ಥಿತಿ ಶೋಚನೀಯವಾಯಿತು. ರಾಮನಾಮ ಜಪದಿಂದ ರುದ್ರದೇವ ಮೃತ್ಯುಂಜಯನಾದ. ಹರಿಸರ್ವೋತ್ತಮತ್ವವನ್ನು ಸಿದ್ಧಪಡಿಸಿದ.

**ನಾಮತ್ರಯ ಪ್ರಭಾವದಿಂದಲಿ ಬೇಗ ।**
**ಸೋಮಧರನು ವಿಷವನು ಧರಿಸಿ ॥**
**ರಾಮನಾಮವೆಂಬ ಅಮೃತ ಪಾನದಿಂ ।**
**ಕಾಮಾರಿತಾ ಮೃತ್ಯುಂಜಯನಾದ ॥೪॥**

ಇನ್ನೊಂದು ಸಂದರ್ಭದಲ್ಲಿ ಕರಿರಾಜನನ್ನು ಸರೋವರದಲ್ಲಿ ಮೊಸಳೆ ಕಾಲು ಹಿಡಿದು ಬಹುಕಾಲ ಹಿಂಸಿಸುತ್ತಿರಲು, ಬಿಡಿಸಿಕೊಳ್ಳಲು ಪ್ರಯತ್ನಪಟ್ಟು ಬಲಹೀನನಾಗಿ, ಕೊನೆಗೆ ಕರಿರಾಜನು ಹೇ! ಆದಿಮೂಲ ರಕ್ಷಿಸು ಎಂದು ಮೊರೆಯಿಟ್ಟನು. ಆಗ ದೇವತೆಗಳು ಆ ಆರ್ತರವವನ್ನು ಕೇಳಿಸಿಕೊಂಡರೂ ಕರಿರಾಜನು ಕರೆಯತಕ್ಕ ವ್ಯಕ್ತಿಗಳು ತಾವಲ್ಲವೆಂದು ಸುಮ್ಮನೆ ಇದ್ದುಬಿಟ್ಟರು.

**ಕರಿ ಆದಿಮೂಲಗೆ ಮೊರೆಯಿಡುವದು ಕೇಳಿ ।**
**ಸುರರು ತಾವಲ್ಲವೆಂದು ಸುಮ್ಮನಿರಲು ॥**
**ಗರುಡನ ಹೆಗಲೇರಿ ಹರಿ ಬೇಗನೆ ಬಂದು ।**
**ಕರಿಯ ನಾಪತ್ತಿನಿಂದ ಬಿಡಿಸಿದನು ॥೫॥**

ಆದಿಮೂಲನೆಂಬ ನಾಮ ವಿಷ್ಣುವಿನದಾದ್ದರಿಂದ ಆತನೇ ಪ್ರತ್ಯಕ್ಷನಾದನು.

ದಾಸರೇ! ಸುರರೆಲ್ಲರೂ ಒಪ್ಪಿದಂತಾಯಿತು. ಆದರೆ ಋಷಿ ಮುನಿಗಳ ಅಭಿಪ್ರಾಯವೇನು ?

ಅವರ ಅಭಿಪ್ರಾಯವೂ ದೇವತೆಗಳಂತೆಯೇ. ಒಂದು ಸಂದರ್ಭವನ್ನು ಕೇಳಿರಿ, ವಿಷ್ಣು ಸರ್ವೋತ್ತಮತ್ವವನ್ನು ಋಷಿಗಳು ಹೇಗೆ ಸಿದ್ಧ ಮಾಡಿದರೆಂದು.

**ಹರಿ ಸಿರಿ ವಿರಿಂಚಿ ಲೋಕಗಳಿಗೆ ಪೋಗಿ ।**
**ಹರಿ ಹರ ವಿರಂಚರ ಪರಿಗಳನು ॥**
**ಹರುಷದಿ ಭೃಗುಮುನಿ ತಿಳಿದು ಬೇಗದಿ ಬಂದು ।**
**ಸರಸ್ವತಿ ತೀರದ ಋಷಿಗಳಿಗೊರೆದ ॥೬॥**

ಭೃಗು ಋಷಿಗಳು ಹರಿಸಿರಿ ವಿರಿಂಚಿಗಳ ಲೋಕಗಳಿಗೆ ಹೋಗಿ ಅವರವರ ಪರಿಗಳನ್ನು ವಿಚಾರಿಸಿ, ವಿಷ್ಣುವೇ ಪರದೈವವೆಂದು ನಿಶ್ಚಯಮಾಡಿಕೊಂಡು ಬಂದು ಸರಸ್ವತೀ ತೀರದ ಋಷಿಗಳಿಗೆ ಹೇಳಿದ ಮೇಲೆ ಯಜ್ಞ ಪ್ರಾರಂಭ ವಾಯಿತು.

ಇದೇ ರೀತಿ ಅನೇಕ, ಸಂದರ್ಭಾನುಸಾರ ಸ್ಮೃತಿ ದೃಷ್ಟಾಂತ ಗಳಿಂದ ವಿಷ್ಣು ಸರ್ವೋತ್ತಮನೆಂದು ಪ್ರತಿಪಾದನೆ ಮಾಡಿದ್ದಾರೆ. ಇನ್ನೂ ಸಂದೇಹ ಉಳಿದಿದ್ದರೆ—

**ಸಂದೇಹಾತ್ಮಾ ವಿನಶ್ಯತಿ ಎಂದೂ ।**
**ಶ್ರುತಿ ವೃಂದಗಳೆಲ್ಲ ಸಾರುತಿರೆ ॥**
**ಪುರಂದರ ವಿಠಲ ಸರ್ವೋತ್ತಮನೆಂಬಲ್ಲಿ ।**
**ಸಂದೇಹವ ಬಿಟ್ಟು ಸ್ತುತಿಸೆಲೋ ಮನುಜ ॥೭॥**

ಸ್ಮೃತ್ಯುಕ್ತ ಪ್ರಮಾಣಗಳಿಂದ ವಿಷ್ಣು ಸರ್ವೋತ್ತಮನೆಂಬ ನಿಷ್ಕೃಷ್ಟ ಹೇತುಗಳಿರಲು ಸಂದೇಹವನ್ನು ಬಿಟ್ಟು ವಿಷ್ಣುವನ್ನು ಉಪಾಸನೆ ಮಾಡಿ, ಹೇ ಅಧಿಕಾರಿಗಳೇ, ಇಹಪರಗಳಲ್ಲಿ ಆನಂದ ಹೊಂದಿ ಕೊನೆಗೆ ವಿಷ್ಣು ಪ್ರಸಾದ ದ್ವಾರಾ ಮೋಕ್ಷವನ್ನು ಹೊಂದಿರಿ, ಎಂದು ಸುಲಭ ಮಾರ್ಗದಲ್ಲಿ ದಾಸರಾಯರ ತತ್ತ್ವೋಪದೇಶ.

# ಶಾಸ್ತ್ರಸರಣಿ ದಾಸವಾಣಿ

## ಭಾಗ–೪

"ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ" ಎಂಬ ಪ್ರಥಮ ಸೂತ್ರದಿಂದಅಧಿಕಾರಿಗಳು ವಿಷ್ಣು ವಿಷಯಕ ಜಿಜ್ಞಾಸಾ (ಅಂದರೆ ಶ್ರವಣ, ಮನನ, ನಿದಿ ಧ್ಯಾನಾದಿಗಳನ್ನು) ಮಾಡೋಣದರಿಂದ, ಪರಮಾತ್ಮನ ಪ್ರಸಾದ ದ್ವಾರಾ, ಸ್ವರೂಪಾನಂದಾವಿರ್ಭಾವ ರೂಪವಾದ ಮೋಕ್ಷವನ್ನು ಹೊಂದುವರೆಂದು ತಿಳಿಯುತ್ತದೆ. ಅದ್ದರಿಂದ ಶ್ರವಣ ಮನನಾದಿಗಳು ಅಧಿಕಾರಿಗಳ ಕರ್ತವ್ಯ.

ಹೀಗೆಯೇ ಶ್ರವಣಾದಿಗಳನ್ನು ಮಾಡುತ್ತ ಮಾಡುತ್ತ ಕೆಲವು ಕಾಲಾನಂತರ ಶ್ರೀ ವಿಷ್ಣುವು ಬ್ರಹ್ಮಾಂಡದಲ್ಲಿ ಸರ್ವತ್ರ ವ್ಯಾಪ್ತನೆಂದೂ ಮತ್ತು ಅವ್ಯಕ್ತನಾಗಿರುವನೆಂದೂ ತಿಳಿಯುತ್ತದೆ. ಅವನ ಸರ್ವದಾ ವ್ಯಕ್ತಸ್ಥಾನಗಳು ಮೂರು. ಶ್ವೇತ ದ್ವೀಪ, ಅನಂತಾಸನ ಮತ್ತು ವೈಕುಂಠಗಳೆಂದು ತ್ರಿಧಾಮಗಳು. ಈ ಸ್ಥಳಗಳಲ್ಲಿ ಪರಮಾತ್ಮ ಲಕ್ಷ್ಮೀ ಮತ್ತು ಮುಕ್ತರುಗಳ ವಾಸ. ಸ್ಮೃತಿಗಳಲ್ಲಿ ಬರತಕ್ಕ ಖಗೋಳ, ಭೂಗೋಳ ವರ್ಣನೆಗಳ ಪ್ರಕಾರ ಈ ಸ್ಥಳಗಳು ಕೋಟ್ಯಂತರ ಯೋಜನ ದೂರದಲ್ಲಿವೆ. ಆ ಸ್ಥಳಗಳಿಂದ ಮುಕ್ತರು ಬೇರೆ ಬೇರೆ ಲೋಕಗಳಿಗೆ ಸ್ವೇಚ್ಛಾ ಸಂಚಾರ ಮಾಡುತ್ತಾರೆ, ಪುನಃ ಸ್ವಸ್ಥಾನಗಳಿಗೆ ಹೋಗುತ್ತಾರೆ. ಅವರಿಗೆ ಹೊರಗೆ ಹೋಗಲು ಮತ್ತು ಒಳಗೆ ಬರಲು ಯಾವ ನಿರ್ಬಂಧವೂ ಇಲ್ಲ. ಆದರೆ ಅಮುಕ್ತರು ಮಾತ್ರ ಆ ಮುಕ್ತ ಸ್ಥಾನಗಳಿಗೆ ಹೋಗುವಂತಿಲ್ಲ.

ಕೆಲವು ಸಾರೆ ದೈತ್ಯರು ವರ ಬಲದಿಂದ ಉದ್ಧಟರಾದರೆ, ಲೋಕಗಳನ್ನು ಅತಿಯಾಗಿ ಪೀಡಿಸಿದರೆ, ಬ್ರಹ್ಮಾದಿ ದೇವತೆಗಳು ಈ ತ್ರಿಧಾಮಗಳಲ್ಲೊಂದಕ್ಕೆ ಹೋಗಿ ಬಹಿರ್ಭಾಗದಲ್ಲಿಯೇ, ಅಂದರೆ ಅಮುಕ್ತ ಸ್ಥಾನದಲ್ಲಿಯೇ ನಿಂತು, ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ. ಅಲ್ಲಿಯೇ ಅವರಿಗೆ ದರ್ಶನಕೊಟ್ಟು ಲೋಕಗಳಲ್ಲಿ ಆಗತಕ್ಕ ಕಷ್ಟನಷ್ಟಗಳನ್ನು ತಿಳಿಸಿದಾಗ ತಾನೇ ಭೂಲೋಕದಲ್ಲಿ ಅವತಾರ ಮಾಡುವುದಾಗಿ ತಿಳಿಸುತ್ತಾನೆ. ದುಷ್ಟಶಿಕ್ಷಾ, ಸಜ್ಜನೋದ್ಧಾರ,

ಧರ್ಮಸಂರಕ್ಷಣ ಮಾಡುವದಾಗಿ ಅವನ ಸಂಕಲ್ಪ. ಪರಮಾತ್ಮನ ಈ ನಿರ್ಧಾರ ಅವನ ವಾಣಿಯಿಂದಲೇ ಖಚಿತವಾಗುತ್ತವೆ. "**ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥**".

ಜಗತ್ತಿಗೆ, ಮಾತಾ, ಪಿತಾ, ರಕ್ಷಕ, ಗುರು, ಮೋಕ್ಷದಾತಾ, ಕರುಣಾ ಸಮುದ್ರ ಇತ್ಯಾದಿಗಳಾಗಿ ("ಹರಿರೇವ ಪರೋ ಹರಿರೇವ ಗುರು ಹರಿರೇವ ಜಗತ್ ಪಿತೃಮಾತೃ ಗತಿಃ") ಅವನ ಸಂಬಂಧ. ಶ್ರುತಿ ಸ್ಮೃತಿಗಳನ್ನು ಚಿರಕಾಲ ಶ್ರವಣಮಾಡಿ ಪರಮಾತ್ಮನ ನಿರ್ವ್ಯಾಜ ಸಂಬಂಧ ಅನಿಮಿತ್ತೋಪಕಾರಗಳನ್ನು ತಿಳಿದಮೇಲೆ ಅವನನ್ನು ಕಾಣಬೇಕೆಂಬ ಹಂಬಲವುಂಟಾಗುತ್ತದೆ. ಇಂಥ ಆಶೆ ಆಕಾಂಕ್ಷೆಗಳನ್ನು ಬಹುಕಾಲ ತಡೆಯಬೇಕಾಗುತ್ತದೆ. ಆಪತ್ತು ವಿಪತ್ತುಗಳಲ್ಲಿ, ತಾಳ್ಮೆಮೀರಿ ಭಾಧೆ ಒದಗಿದಾಗ ಪರಮಾತ್ಮನು ಕೋಟಿ ಯೋಜನ ದೂರವಿರುವದು ಸಹಿಸದು, ಭಕುತರಿಗೆ ಅಷ್ಟು ದೂರದಿಂದ ಪರಮಾತ್ಮ ತನ್ನ ಕೆಲಸ ಬಿಟ್ಟು ನಮಗೋಸ್ಕರ ಬರುವನೇ ? ನಮ್ಮಂತೆ ಎಷ್ಟೋ ಜನ ಕೂಗುತ್ತಲೇ ಇರುತ್ತಾರೆ.

ಬಹು ಜನರ ಅನುಭವದಲ್ಲಿರುವ ವಿಷಯವೆಂದರೆ, ತೀವ್ರರೋಗದಿಂದ ಆರ್ತರಾಗಿ ಬಳಲುವ ರೋಗಿಗಳನ್ನು ನೋಡಿ ವೈದ್ಯರಿಗೆ ಅಭ್ಯಾಸವಾಗಿ ಬಿಡುತ್ತದೆ. ಅವರು ಯಾವ ಪ್ರತಿಕ್ರಿಯೆಯನ್ನೂ ತೋರುವದೂ ಇಲ್ಲ ; ತೀವ್ರ ನೋಡುವದೂ ಇಲ್ಲ. ಅವರದೂ ಒಂದು ದೊಡ್ಡ ಸರತಿಯ ಸಾಲು (Queue). ಪರಮಾತ್ಮನು ಹೀಗಲ್ಲ. ಒಂದೊಂದು ಸಲ ತೀವ್ರಭವಭಾಧೆ ಆವರಿಸಿದಾಗ ದಿಕ್ಕು ತೋಚದ ಅನಿಸಿಕೆಗಳು. ಕೇಳಿಸಿತೋ ಇಲ್ಲವೋ ? ಒದಗುವನೋ ? ತಡವಾಗುವದೋ ? ಅನೇಕ ಹೊಯ್ದಾಟಗಳು ನಮ್ಮ ಮನಸ್ಸನ್ನು ಮುತ್ತುತ್ತವೆ.

ಹೀಗೆ ಅನೇಕ ಆಕಾಂಕ್ಷೆ, ನಿರಾಶೆ, ಕಾತರ, ಕಳವಳ, ಅಪನಂಬಿಕೆ, ಸಂದೇಹ ಇತ್ಯಾದಿಗಳಿಂದ ಮನೋವ್ಯಾಕುಲವಾದಾಗ, ಆಯಿತು ದಾಸರಾಯರ ದರ್ಶನ. ಇಂಥ ವಿಚಿತ್ರ ಸ್ಥಿತಿಗೀಡಾದ ಮನೋಖಿನ್ನತೆಯನ್ನು ತಿಳಿಸಿದ ಮೇಲೆ, ದಾಸರು ಸಂದೇಹ ಪರಿಹಾರಕವಾದ ಒಂದು ಆಶ್ವಾಸನೆ ನೀಡುತ್ತಾರೆ.

ಭಾಗವತಾದಿ ಗ್ರಂಥಗಳಲ್ಲಿ ನಿರೂಪಿಸಲ್ಪಟ್ಟ ಖಗೋಳ, ಭೂಗೋಳ ವರ್ಣನೆಗಳು ಸರ್ವಜ್ಞರಾದ ಶ್ರೀ ವೇದವ್ಯಾಸರಿಂದ ರಚಿಸಲ್ಪಟ್ಟ ಕಾರಣ ಪ್ರಾಮಾಣಿಕವೇ. ಮುಕ್ತಸ್ಥಾನಕ್ಕೆ ನಾವು ಹೋಗಬೇಕಾದರೆ ಅಷ್ಟು ದೂರ ವಿರುವದು ಖಚಿತ. ಆದರೆ ಪರಮಾತ್ಮನು ಬರಬೇಕಾದರೆ ಅವನಿಗೆ ದೂರವಿಲ್ಲ. ತತ್ಕಾಲದಲ್ಲಿ ತತ್‌ಸ್ಥಳಗಳಿಗೆ ಬಂದು ಬಿಡುತ್ತಾನೆ. ಅವನು ದೇಶಾತೀತ, ಕಾಲಾತೀತ. ಪರಮಾತ್ಮನ ದೃಷ್ಟಿಯಿಂದ, ಸ್ಮೃತಿ ದೃಷ್ಟಾಂತಗಳಿಂದ, ಅನುಭವಿ ಭಗವದ್ಭಕ್ತರ ದೃಷ್ಟಿಯಿಂದ ವೈಕುಂಠ ಎಷ್ಟು ದೂರವೆಂದರೆ ದಾಸ ರಾಯರು ಹೇಳುತ್ತಾರೆ, ಆ ದೂರವನ್ನು ಯೋಜನೆಗಳಲ್ಲಿ ಅಳತೆ ಮಾಡಬೇಡಿರಿ. ಅನುಭವ ಕೇಳಿರಿ.

**ಒಂದೇ ಕೂಗಳತೆ । ವೈಕುಂಠ ।**
**ಸಂದೇಹವಿಲ್ಲವೋ ಸಾಧು ಸಜ್ಜನರಿಗೆ ॥**

ಸ್ಮೃತಿಗಳನ್ನು ಪರಿಶೀಲಿಸಿ ಬಹು ದೃಷ್ಟಾಂತ ಸಂವಾದದಿಂದ ತತ್ವ ನಿಶ್ಚಯ ಜ್ಞಾನವನ್ನು ಪಡೆದ ಸಾಧುಸಜ್ಜನರಿಗೆ ವೈಕುಂಠದ ದೂರ **ಒಂದೇ ಕೂಗಳತೆ.**

ಹೌದೇ ದಾಸರೇ !

ನಾವು ಮುಂದೆ ಹೇಳತಕ್ಕ ಸ್ಮೃತಿ ದೃಷ್ಟಾಂತಗಳನ್ನು ವಿಮರ್ಶೆ ಮಾಡಿ ಶೋಧಿಸಿ ನೋಡಿರಿ. ನಿಮ್ಮ ಸಂದೇಹ ಕಾತರಗಳು ಮಾಯವಾಗುವವು.

**ಸರಸಿಯೊಳಿ ಆನೆ ಪೊರೆ ಎಂದು ಕರೆಯಲು ।**
**ತ್ವರಿತದಿಂ ಬಂದೂ ಪೊರೆದೆ ॥**
**ನರಹರಿ ಕೃಷ್ಣ ಕಾಯೆಂದು ಚೀರಲು ।**
**ತರಳಪ್ರಲ್ಹಾದಗೆ ಕಂಭದಿಂದಲಿ ಬಂದೇ ॥೧॥**

ಗಜರಾಜ ಮತ್ತು ಪ್ರಹ್ಲಾದ ರಾಜ ಇಬ್ಬರೂ ಭಿನ್ನ ದೇಶಕಾಲಗಳಲ್ಲಿ ಭೂಲೋಕದಿಂದ ಆಪತ್ಕಾಲದಲ್ಲಿ ಶ್ರೀ ಹರಿಯನ್ನು ಕೂಗಿದರಷ್ಟೇ. (ಟೆಲಿಗ್ರಾಂ ಇಲ್ಲ, ವೈರ್‌ಲೆಸ್ ಇಲ್ಲ). ಆ ಕೂಗಿಗೇ ಬಂದೊದಗಿದ ಶ್ರೀ ವಿಷ್ಣು. ಅಂದ ಮೇಲೆ ಒಂದೇ ಕೂಗಳತೆ ಅಲ್ಲವೇ, ಭೂಲೋಕದಿಂದ ವೈಕುಂಠ.

ಇವರಿಬ್ಬರೇನೇ ದಾರರೇ ಕೂಗಿ ಪರಮಾತ್ಮನ್ನ ಕರೆಸಿದವರು ? ಪರಮಾತ್ಮ ಆಕಸ್ಮಿಕ ಆ ಸ್ಥಳಕ್ಕೆ ಬರುವುದಕ್ಕೂ, ಅವರು ಕೂಗುವುದಕ್ಕೂ ಏಕಸಮಯವಾಗಿ ಕಾಕತಾಳೀಯ ನ್ಯಾಯದಂತಾಗಿರಲಿಕ್ಕಿಲ್ಲ ತಾನೆ ?

ಅಂಥ ಸಂದೇಹ ನಿವಾರಣೆ ಅತಿ ಸುಲಭ. ಕೂಗಿ ಕರೆಸಿದ ಭಕ್ತರು ಲೆಕ್ಕವಿಲ್ಲದಷ್ಟು ಜನ ಇದ್ದಾರೆ. ನಾವು ಇಲ್ಲಿ ಇನ್ನೂ ಕೆಲವರ ವಿಷಯ ತಿಳಿಸುವೆವು, ಕೇಳಿರಿ.

**ಅಂಬರೀಷ ದ್ವಾದಶಿ ವ್ರತಮಾಡಲು |**
**ದೊಂಬಿಮಾಡಿದ ದೂರ್ವಾಸಮುನಿ ||**
**ಕುಂಭಿಣಿ ಪತಿಕೃಷ್ಣ ಕಾಯೆಂದು ಕರೆಯಲು |**
**ಬೆಂಬತ್ತಿ ಚಕ್ರದಿಮುನಿ ಶಾಪವಕಳೆದೆ ||೨||**

ಅಂಬರೀಷ ಮಹಾರಾಜನು ತಾನೊಬ್ಬನಲ್ಲ, ತನ್ನ ರಾಜ್ಯದಲ್ಲಿ ಎಂಟು ವರ್ಷದ ಮೇಲ್ಪಟ್ಟವರೆಲ್ಲರೂ ಏಕಾದಶೀ ವ್ರತ ಮಾಡಬೇಕೆಂದು ಶಾಸನ ಮಾಡಿದ್ದನು. ಅದೇನು ಧರ್ಮನಿಷ್ಠೆ ! ದೂರ್ವಾಸರು ವ್ರತಭಂಗ ಮಾಡಲು ಬಂದರು. ದೂರ್ವಾಸ ಮುನಿಗಳನ್ನು ರಾಜನು ಗೌರವದಿಂದ ಬರಮಾಡಿಕೊಂಡು, ಸಂತೋಷ ವ್ಯಕ್ತಪಡಿಸಿ, ಪಾರಣೆಯ ಸಮಯ ಮೀರುವದರೊಳಗೆ ಸ್ನಾನಮಾಡಿ ಸಿದ್ಧರಾಗಿ ಬರಬೇಕೆಂದು ಪ್ರಾರ್ಥಿಸಲು, ದೂರ್ವಾಸ ಮುನಿಗಳು ಶಿಷ್ಯರೊಡನೆ ಸ್ನಾನಕ್ಕೆ ಹೋದರು. ಪಾರಣೆಯ ಸಮಯ ಮೀರುತ್ತ ಬಂತು ದೂರ್ವಾಸರು ಬರಲೇ ಇಲ್ಲ. ರಾಜನು ವಿಧ್ಯುಕ್ತವಾದ ತೀರ್ಥಪಾರಣೆಯನ್ನು ಮಾಡಿದನು. ಅವನು ಮಾಡಿದ್ದೇನೂ ತಪ್ಪಿಲ್ಲ. "ಶ್ರುತಿ ಸ್ಮೃತೀ ಹರೇ ರಾಜ್ಞಾ", ಪ್ರಮಾಣಗಳನ್ನನುಸರಿಸಿ ತೀರ್ಥ ಪಾರಣೆ ಮಾಡಿದನು.

ಏಕ ಸಂದರ್ಭದಲ್ಲಿ ವಿರುದ್ಧ ವಿಚಾರದ್ವಯಗಳು ರಾಜನನ್ನು ಆವರಿಸಿದವು. ದೂರ್ವಾಸರ ಕೋಪತಾಪಗಳಿಗೆ ಹೆದರಿ, ಹರಿಯ ಆಜ್ಞೆ ಉಲ್ಲಂಘನೆಮಾಡಿ, ಪಾರಣೆಯನ್ನು ಬಿಡಬೇಕೇ ? ಅಥವಾ ಹರಿಯ ಆಜ್ಞಾರೂಪವಾದ ಸ್ಮೃತಿ ಪ್ರಮಾಣಗಳನ್ನನುಸರಿಸಿ ತೀರ್ಥ ಪಾರಣೆಮಾಡಿ ಹರಿ ಪ್ರೀತಿ ಪಡೆಯುವುದು ಲೇಸೋ ? ಏಕಾದಶೀ ವ್ರತವೇ ಹರಿ ಪ್ರೀತಿಗಾಗಿ, ದ್ವಾದಶಿ ಪಾರಣೆಯೂ ಅದರಂಗವೇ, ಎಂಬ ನಿಶ್ಚಯ ಬಲದಿಂದ ದ್ವಿತೀಯ ಪಕ್ಷವನ್ನವಲಂಬಿಸಿದ ರಾಜನು, ಶ್ರೀ ಹರಿ ಪ್ರೀತಿರಸ್ತು ಎಂದು ತೀರ್ಥಪಾರಣೆ ಮಾಡಿದನು.

ದೂರ್ವಾಸರು ಸ್ನಾನಮಾಡಿ ಬಂದರು. ತೀರ್ಥ ಪಾರಣೆಯಾದದ್ದು ತಿಳಿಯಿತು. ಶಾಪ ಕೊಟ್ಟೇ ಬಿಟ್ಟರು. ಜಟೆ ಅಪ್ಪಳಿಸಿದ ಕೂಡಲೆ ಬೆಂಕಿಯಂತೆ ಒಬ್ಬ ಕಾಲ ಪುರುಷನು ಬಂದು ರಾಜನನ್ನು ಬಾಧೆಪಡಿಸಲಾರಂಭಿಸಿದನು. ಅಂಬರೀಷ ಮಹಾರಾಜನು ತಾಳಲಾರದೆ ಶ್ರೀ ಕೃಷ್ಣನನ್ನು ಪ್ರಾರ್ಥಿಸಿದನು. ಕೂಗಿದನಷ್ಟೇ, ಏಕಾದಶಿ ಉಪವಾಸ ಮಾಡಿದ ರಾಜ ಇನ್ನೆಷ್ಟು ಗಟ್ಟಿಯಾಗಿ ಕೂಗಿಯಾನು. ತಕ್ಷಣವೇ ಶ್ರೀ ಹರಿ ಚಕ್ರಕ್ಕೆ ಆಜ್ಞೆ ಮಾಡಿದ. ಚಕ್ರ ದೂರ್ವಾಸರನ್ನು ಬೆನ್ನಟ್ಟಿತು, ಎಲ್ಲಿ ಹೋದರೂ ಬಿಡಲಿಲ್ಲ. ಶ್ರೀ ಕೃಷ್ಣನ ಹತ್ತಿರ ಹೋದರೂ ಪ್ರಯೋಜನವಾಗಲಿಲ್ಲ. ಅಂಬರೀಷನ ಬಳಿಗೆ ಹೋಗಿ ಕ್ಷಮೆ ಬೇಡೆಂದನು ಶ್ರೀ ಕೃಷ್ಣ. ಆ ಪ್ರಕಾರ ದೂರ್ವಾಸರು ಅಂಬರೀಷ ರಾಜನ ಹತ್ತಿರ ಬಂದು ಕ್ಷಮೆ ಕೇಳಿದರು. ಚಕ್ರವು ಸ್ವಸ್ಥಾನಕ್ಕೆ ಹೋಯಿತು. ನೀವೇ ನೋಡಿ, ಅಂಬರೀಷ ಮಹಾರಾಜ ಶ್ರೀ ಹರಿಯನ್ನು ಮೊರೆಹೊಕ್ಕ. ಶ್ರೀ ಕೃಷ್ಣಾ ಎಂದು ಕೂಗಿದನಷ್ಟೇ, ಇಲ್ಲಿ ಹರಿ ಬರಲಿಲ್ಲ, ಪರಿಹಾರ ಕಳಿಸಿದ, ಕೂಗು ಕೇಳಿದ್ದರಿಂದ ತಾನೇ ಪರಿಹಾರ. ಮೊದಲಿನಂತೆ ಕಾಕತಾಳೀಯ ನ್ಯಾಯದಂತಲ್ಲ.

ಇನ್ನೊಂದು ಬಹಳ ತೀವ್ರ ನೊಂದ ಸಂದರ್ಭವೆಂದರೆ, ದುಶ್ಶಾಸನ ಸಭೆಯಲ್ಲಿ, ಪಗಡೆ ಆಟದಲ್ಲಿ ಸೋತ ಪಾಂಡವರ ಸತಿಯನ್ನು ಅವಮಾನ ಮಾಡಲು ಸೀರೆ ಸೆಳೆಯಲುದ್ಯುಕ್ತನಾದ. ದ್ರೌಪತಿದೇವಿಯು ಸಭೆಯಲ್ಲಿದ್ದವರನ್ನೆಲ್ಲ ಹೆಸರು ಹಿಡಿದು ಬಿಡುಗಡೆಗಾಗಿ ಅರಚಿದಳು. ಯಾರೂ ಬಿಡಿಸಲು ಮುಂದೆ ಬರಲಿಲ್ಲ. ಪತಿಗಳೈವರೂ ಬರುವಂತೆ ಇರಲಿಲ್ಲ. ಕೊನೆಗೆ ವಿಶೇಷವಾಗಿ ಶ್ರೀ ಕೃಷ್ಣನನ್ನೇ ಪ್ರಾರ್ಥಿಸಿದಳು. ಕೂಗಿದಳಷ್ಟೆ, ಅಲ್ಲಿಂದಲೇ ಅಕ್ಷಯ ವಸ್ತ್ರವಿತ್ತು ಮಾನ ರಕ್ಷಣೆ ಮಾಡಿದನು ಸ್ವಾಮಿ. "ಸೆಳೆಯುತಿದ್ದನು ಖಳನು ಬೆಳೆಯುತಿದ್ದವು ಸೀರೆ...." ಎನ್ನುತ್ತಾರೆ ದಾಸರು ಉದಯರಾಗ ಒಂದರಲ್ಲಿ. ದ್ರೌಪತೀದೇವಿಯು ಕೂಗು ಕೇಳಿದ್ದರಿಂದಲೇ ಬಂತು ಅಕ್ಷಯವಸ್ತ್ರ, ಪರಿಹಾರ.

ದ್ರುಪದರಾಜನ ಪುತ್ರಿ ಆಪತ್ತುಕಳೆಯೆನೆ ।
ಕೃಪೆಯಿಂದ ಅಕ್ಷಯವಸ್ತ್ರವಿತ್ತೇ ॥
ಕೃಪಣ ವತ್ಸಲಸ್ವಾಮಿ ಪುರಂದರ ವಿಠಲನ ।
ಗುಪಿತದಿ ನೆನೆವರ ವದನವೈಕುಂಠ ॥೩॥

ಗಜರಾಜ, ಪ್ರಹ್ಲಾದರಾಜ, ಅಂಬರೀಷ ರಾಜ, ದ್ರೌಪದಿದೇವಿಯರು ಕೂಗಿದರಷ್ಟೇ. ಪರಮಾತ್ಮ ಸಮಯಕ್ಕೆ ಒದಗಿದ್ದರಿಂದಲೂ ಮತ್ತು ವೈಯಕ್ತಿಕ ಬಾರದಿದ್ದಾಗ ಪರಿಹಾರ ಕಳಿಸಿದ್ದರಿಂದಲೂ, ಕೂಗು ಕೇಳಿಸಿದ್ದು ಖಚಿತ. ಕಾರ್ಯ ನೋಡಿ ಕಾರಣವನ್ನು ಊಹಿಸಿರಿ (ಇದೇ ಕಾರಣಾನುಮಾನವಲ್ಲವೇ, ಅದೆಷ್ಟು ದೃಷ್ಟಾಂತಗಳು ! ). ಇವರು ಕೂಗಿದಂತೆ ಕೂಗಿದರೆ ಪರಮಾತ್ಮನಿಗೆ ಕೇಳಿಸದೆ ಇರದು. ಅವನು ಬಂದೇ ಬರುವನು. ಈಗ ನೀವೇ ಹೇಳಿರಿ ಎಷ್ಟು ದೂರವಿರುವುದು ವೈಕುಂಠ ?

ಕೊನೆಯದಾಗಿ ದಾಸರಾಯರು, ವಿಪರ್ಯಯ ಪರ್ಯವಸಾನವೆಂಬ ತರ್ಕ ಭಂಗಿಯಿಂದ ವ್ಯಾಪ್ತಿ ತೋರಿಸುತ್ತಾರೆ. ಯಾವುದು ವೈಕುಂಠವೋ ಅದು ಶ್ರೀ ಹರಿಯ ಆವಾಸ ಸ್ಥಳ. ಯಾವ ಸಜ್ಜನರ ವದನದಲ್ಲಿ ನಾರಾಯಣ ಇದ್ದಾನೋ ಅದೇ ವೈಕುಂಠ.

"ಯತ್ರ ವೈಕುಂಠಃ ತತ್ರ ನಾರಾಯಣಃ ಆಸ್ತ್ಯೇವ ।
ಯತ್ರ ನಾರಾಯಣಃ (ಸಜ್ಜನವದನೆ) ತತ್ರಾಪಿ
ವೈಕುಂಠಸ್ಯಾತ್" ॥

೩೦

# ಶಾಸ್ತ್ರಸರಣಿ ದಾಸವಾಣಿ

## ಭಾಗ-೫

ಶ್ರೀ ಪರಮಾತ್ಮನು ಅನಂತಕಲ್ಯಾಣ ಗುಣಪೂರ್ಣನೆಂದೂ ಮತ್ತು ಸಕಲ ದೋಷವಿವರ್ಜಿತನೆಂದೂ ಶ್ರುತಿ ಸ್ಮೃತಿಗಳು ಸಾರಿಸಾರಿ ಪದೇಪದೇ ಉಪಪಾದನ ಮಾಡುತ್ತವೆ. ಇವುಗಳಲ್ಲಿ ಒಂದೊಂದು ಗುಣವೂ ಪೂರ್ಣವಾಗಿದೆ. ಈ ಅನಂತ ಕಲ್ಯಾಣಗುಣಗಳಲ್ಲಿ ಜೀವಸಂಘ ವಿವಕ್ಷಾದಿಂದ ಪರಮಾತ್ಮನ ಕರುಣಾಪೂರ್ಣ ಗುಣವು ಬಹಳ ವೈಶಿಷ್ಟ್ಯಪೂರ್ಣವಾದದ್ದು. ಶ್ರೀಮದಾಚಾರ್ಯರು ಪರಮಾತ್ಮನ ಕರುಣಾಪೂರ್ಣಗುಣವನ್ನು ಸ್ತೋತ್ರ ಮಾಡಿದ್ದಾರೆ.

"ಅವನ ಶ್ರೀಪತಿರಪ್ರತಿರಧಿಕೇಶಾದಿಭವಾದೇ । ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯಮೇತೆ" ॥ (ದ್ವಾದಶಸ್ತೋತ್ರ ಅಧ್ಯಾಯ ೧೦)

ಅವರರು ಉತ್ತಮರನ್ನು ಆಶ್ರಯಿಸಬೇಕಾದರೆ ಉತ್ತಮರಲ್ಲಿ ಈ ಕಾರುಣ್ಯ ಗುಣದ ಅವಶ್ಯಕತೆ-ಇದೆ. ಉತ್ತಮರು ಅವರವರಲ್ಲಿ ಕ್ರೌರ್ಯ, ಕಾಠಿಣ್ಯ ಅಕ್ಷಮ ಭಾವಗಳನ್ನು ವ್ಯಕ್ತಪಡಿಸಿದರೆ ಅವರು ಉತ್ತಮರನ್ನು ಅನುಸರಿಸಲಾರರು. ಅಲ್ಪಕಾಲ ಭಯದಿಂದ ಹಿಂಬಾಲಿಸಬಹುದು. ಈ ತರಹದ ಭಯೋತ್ಪಾದನೆಯಿಂದ ಉಂಟಾದ ಸಂಬಂಧಗಳು ತೀವ್ರ ಕಳಚಿ ಹೋಗುತ್ತವೆ.

ಪರಮಾತ್ಮನು ತನ್ನನ್ನು ನಂಬಿ ಆರಾಧಿಸುವವರಲ್ಲಿ ಮುಖ್ಯವಾಗಿ ಅನಿಮಿತ್ತ ಕಾರುಣ್ಯಗುಣಗಳನ್ನು ವ್ಯಕ್ತಪಡಿಸುತ್ತಾನೆ. ಇಂಥ ಕಾರುಣ್ಯಕ್ಕೆ ಪಾತ್ರರಾದ ಭಕ್ತರನ್ನು ಶ್ರವಣಾದಿ ದ್ವಾರಾತಿಳಿದು ಪರಮಾತ್ಮನನ್ನು ಸಜ್ಜೀವರುಗಳು ಆರಾಧಿಸುತ್ತಾರೆ. ದುರ್ಜನರಿಗೆ ಮತ್ಸರ. ಇನ್ನು ಕೆಲವರು ಉದಾಸೀನ ಧರ್ಮದಲ್ಲಿರುತ್ತಾರೆ. ಪರಮಾತ್ಮನು ತನ್ನ ನಂಬಿದ ಎಲ್ಲರಲ್ಲಿ ಸ್ವಪರದ್ವಾರಾ ಒಂದು ಆಶಾಕಿರಣವನ್ನು ಮೂಡಿಸುತ್ತಾನೆ. "ಜಾನಾತಿ, ಇಚ್ಛತಿ, ಯತತೇ" ಎಂಬ ಕ್ರಮಾನುಸಾರವಾಗಿ ಒಂದು ಸಲ ತಿಳಿದ ಮನಸ್ಸು ದಿನೇದಿನೇ ಪರಮಾತ್ಮನ ವಿಷಯದಲ್ಲಿ ಅಧಿಕಸ್ನೇಹ, ಸ್ನೇಹದಲ್ಲಿ ದಾರ್ಢ್ಯ ಸಂಪಾದಿಸಲು ಪ್ರಯತ್ನ ಮಾಡುತ್ತದೆ.

ದಾಸರಾಯರೂ ಸಹ ಪರಮಾತ್ಮನ ಕಾರುಣ್ಯಗುಣವನ್ನು ಬಹಳವಾಗಿ ಕೊಂಡಾಡಿದ್ದಾರೆ. ಹರಿಕಥಾಮೃತಸಾರದಲ್ಲಿ ಶ್ರೀ ಜಗನ್ನಾಥದಾಸರು ಒಂದು ಸಂಧಿಯನ್ನೇ ಈ ಕರುಣಾಗುಣಕ್ಕೆ ಮೀಸಲಾಗಿಟ್ಟಿದ್ದಾರೆ. ಸಂಧಿಯ ಹೆಸರೇ "ಕರುಣಾಸಂಧಿ". ಇದೇ ಎರಡನೆಯ ಸಂಧಿ. "ಏನು ಕರುಣಾನಿಧಿಯೋ ಹರಿ ಮತ್ತೇನು ಭಕ್ತಾಧೀನನೋ", ಎಂದು ಅವರ ಸ್ತುತಿ, ಮತ್ತು ಉದ್ಗಾರ. ಪರಮಾತ್ಮನ ಅನಿಮಿತ್ತೋಪಕಾರ ರೂಪಕಾರುಣ್ಯಕ್ಕೆ ಭಕ್ತನ ಹೃದಯಕರಗಿ ಆನಂದಾಶ್ರುಗಳು ನಯನದ್ವಾರಾ ಕೋಡಿಯಾಗಿ ಹರಿಯುತ್ತವೆ.

ಭಾಗವತವು ಭಕ್ತಿ ಪ್ರಧಾನ ಗ್ರಂಥ. ಭಕ್ತನ ಭಕ್ತಿಮೂಲ ಪರಮಾತ್ಮನ ಕಾರುಣ್ಯ ಸ್ಮೃತಿಗಳ ಮೂಲಕ ಈ ಕರುಣಾಪೂರ್ಣ ಗುಣವನ್ನು ಶ್ರವಣಮನನ ಮಾಡಿ ಭಕ್ತಿ-ದಾರ್ಢ್ಯ ಉಕ್ಕಿಬಂದ ಶ್ರೀದಾಸರಾಯರು ಅಂದಿನಿಂದಲೇ ನಿನ್ನನ್ನು ನಂಬಿರುವೆನು ಸ್ವಾಮೀ ಎಂದು ಸ್ತುತಿಸುತ್ತಾರೆ ಶ್ರೀ ಹರಿಯನ್ನು.

**ಅಂದಿಂದ ನಾನಿನ್ನ ನೆರೆ ನಂಬಿದೆನೊ ಕೃಷ್ಣ |**
**ತಂದೆ ಗೋವಿಂದ ಮುಕುಂದ ಸಂದಸ ಕಂದ ||**

ಹೇ ಕೃಷ್ಣ, ಗೋವಿಂದ, ತಂದೆ ನಿನ್ನನ್ನು ಅಂದಿನಿಂದಲೇ ಧೃಡವಾಗಿ ಸಂಪೂರ್ಣವಾಗಿ ನಂಬಿದ್ದೇನೆ.

ಎಂದಿನಿಂದ ದಾಸರೇ !

ಅಂದು ಭಾಗವತ ಕಥಾಶ್ರವಣ ಮಾಡುವಾಗ ಬಂದ ಪ್ರಸಂಗವನ್ನು ಕೇಳಿ ;

**ಬಲವಂತ ಉತ್ತಾನ ಪಾದರಾಯನ ಕಂದ |**
**ಮಲತಾಯಿ ನೂಕಲು ಅಡವಿಯೊಳಗೆ ||**
**ಜಲಜಾಕ್ಷ ನಿನ್ನನು ಕುರಿತು ತಪವಿರಲಾಗಿ |**
**ನೀನವಗೆ ಧೃವ ಪಟ್ಟ ಕಟ್ಟಿದ್ದು ಕೇಳಿ || ೧ ||**

ಧೃವರಾಯ ಸಣ್ಣ ಬಾಲಕ, ಏನೊ ಹುಡುಗ ಸ್ವಭಾವ ಸಿಟ್ಟು ಮಾಡಿ-ಕೊಂಡು ಕಾಡಿಗೆ ಬಂದಿದ್ದಾನೆ. ಸಿಟ್ಟು ಇಳಿದ ಮೇಲೆ ಮನೆಗೆ ಹೊಗುತ್ತಾನೆಂದು

ಉಪೇಕ್ಷೆ ಮಾಡಲಿಲ್ಲ, ಅವನ ತಪಸ್ಸಿಗೆ ಮೆಚ್ಚಿ ಬಾಲಕನಿಗೆ ಸ್ಥಿರವಾದ ಧ್ರುವ ಪಟ್ಟಗಟ್ಟಿದ್ದು ಕೇಳಿ ಶ್ರವಣ ಮಾಡಿ, ಪರಮಾತ್ಮನ ಕಾರುಣ್ಯ ಗುಣ ಕಥನ ಕೇಳಿ ಅಂದಿನಿಂದ ಕೃಷ್ಣಾ ನಿನ್ನನ್ನೇ ನೆರೆ ನಂಬಿದೆ.

ಪರಮಾತ್ಮನಲ್ಲಿ ನಂಬಿಕೆ ಹುಟ್ಟಿಸುವ ಪ್ರಸಂಗ ಇದು ಒಂದೇಯೋ ದಾಸರೇ !

ಅದೇಕೆ ? ಅವಸರ ಪಡಬೇಡಿರಿ, ಲೆಖ್ಖವಿಲ್ಲದಷ್ಟು ಪ್ರಸಂಗಗಳಿವೆ. ಅಸಂಖ್ಯಾತ ಭಗವದ್ಭಕ್ತರು ಕರುಣಾಭಾಗಿಗಳಾಗಿ ಬಿಟ್ಟಿದ್ದಾರೆ.

**ನಕ್ರಂಗೆ ಗಜರಾಜ ಸಿಕ್ಕಿ ಸರಸಿಯೊಳು ।**
**ದುಃಖದಿ ಶ್ರೀಹರಿ ಸಲಹೆನ್ನಲು ॥**
**ಚಕ್ರದಿನೆಗಳ ಕಂಠವ ತರಿದು ಭಕ್ತನ ।**
**ವಕ್ತ್ರವ ಪರಿದಾದಿ ಮೂಲನೆಂಬುದ ಕೇಳಿ ॥ ೨ ॥**

ಇಲ್ಲಿಯೂ ಅಷ್ಟೇ. ಅನೇಕ ವನ್ಯಪ್ರಾಣಿಗಳು ಹುಟ್ಟುತ್ತವೆ ಮತ್ತು ಸಾಯುತ್ತವೆ. ವನ್ಯಪ್ರಾಣಿ ಎಂದು ಉದಾಸೀನವಿಲ್ಲ. ಗಜರಾಜ ಕರೆದಾಗ ಕೃಷ್ಣಪರಮಾತ್ಮನಿಗದೇನವಸರ? ರುಕ್ಮಿಣೀದೇವಿಯರಿಗೆ, ಪಕ್ಕದಲ್ಲಿರುವರಿಗೆ ಸಹ ಒಂದುಮಾತು ಹೇಳಿ ಹೋಗಲೂ ಸಹ ಸಮಯವಿಲ್ಲದಂತಾಯ್ತು. ("ಮಡದಿ ಯೊಡನುಡಿಯದಲೆ ಸಂಗಡ ಎಡಬಲದವರ ಕಡೆಗೆನೋಡದೆ । ತಡೆಯದಲೆ ನೀನೊದಗಿ ಕರಿಯತೊಡರು ಬಿಡಿಸದೆ ಕಡು ದಯಾನಿಧೇ ॥ ವರದಾ ಕಂಚಿ ವರದಾ" ॥ ಎನ್ನುತ್ತಾರೆ ಗೋಪಾಲವಿಠಲರು.) ಸೃಷ್ಟಿಕರ್ತನಾದ ಭಗವಂತನಿಗೆ ತನ್ನಿಂದ ಸೃಷ್ಟರಾದ ಯಾವಪ್ರಾಣಿಗಳಲ್ಲೂ ಉಪೇಕ್ಷೆ ಇಲ್ಲ. ಸರ್ವರಿಗೂ ಸರ್ವದಾ ಆತನ ರಕ್ಷೆ ಕರುಣೆಗಳು ಸಿದ್ಧವಾಗಿದೆ ಎಂಬ ತತ್ವದ್ಯೋತಕ ಭಾಗವತ ಕಥಾಶ್ರವಣ ಕೇಳಿದಂದಿನಿಂದ (ಶ್ರವಣಮಾಡಿದಂದಿನಿಂದ) ಈ ನಿರ್ಧಾರಕ್ಕೆ ಬಂದಿದ್ದೇನೆ.

ಇದರಲ್ಲಿ ಇನ್ನೊಂದು ಸೋಜಿಗವಿದೆ. ಏನೆಂದರೆ, ಕರಿರಾಜನು ಆದಿಮೂಲ ರಕ್ಷಿಸು ಎಂದು ಮೊರೆಇಟ್ಟಾಗ ಇತರ ದೇವತೆಗಳಿಗೆ ಆ ಆರ್ತರವಕೇಳಿದರೂ

ಯಾರೂ ರಕ್ಷಿಸಲು ಮುಂದೆಬರಲಿಲ್ಲ. ಕೇಳಿದರೂ ಕೇಳದಂತಿದ್ದರು, ಯಾಕೆಂದರೆ ಗಜರಾಜ ಕರೆಯುತ್ತಿರುವ ವ್ಯಕ್ತಿಯು ತಾವಲ್ಲವೆಂದು ತಿಳಿದು, ಧ್ವನಿ ಕೇಳಿದರೂ ಯಾರೂ ಬರಲಿಲ್ಲ. ಆದಿಮೂಲನೇ ಬಂದು ರಕ್ಷಿಸಿದನೆಂಬ ಕಥಾ ಶ್ರವಣ ಮಾಡಿ ಅಂದಿನಿಂದಲೇ ನೆರೆನಂಬಿದೆ.

ಇನ್ನೊಂದು ಸಂದರ್ಭ ಭಾರತ ಕಥಾಶ್ರವಣ.

**"ದ್ರುಪದನ ಸುತೆಯು ದುಶ್ಶ್ಯಾಸನನು ಸಭೆಯೊಳು |**
**ಕಪಟದಿ ಸೀರೆಯ ಸೆಳೆಯುತಿರೆ ||**
**ಸುಪರ್ಣವಾಹನ ಕೃಷ್ಣ ಸಲಹೆಂದರಬಲೆಯು |**
**ಅಪಮಾನದಿಂ ಕಾಯ್ದ ಶ್ರೀಹರಿ ಎಂಬದು ಕೇಳಿ" || ೩ ||**

ಇದೊಂದು ಅತ್ಯಂತ ದುರಂತ ಸಮಯ. ಇಂಥ ಸಮಯಕ್ಕೊದಗುವನು ಹರಿಯೊಬ್ಬನೆಂದೇ ಜನಜನಿತವಾಯಿತು. ಹೀನಕಾರ್ಯವೆಸಗಲು ತೊಡಗಿದ ಕೌರವನ ಸಭೆ ಭಗವಂತನು ಭಕ್ತರಿಗೆ ತೋರಿಸಿದ ಅಪಾರ ಕಾರುಣ್ಯ ರಕ್ಷಣೆಯನ್ನು ಕಣ್ಣಾರೆ ಕಂಡು ನಾಚಿತು ಮತ್ತು ನಡುಗಿತು.

ಇನ್ನೊಂದು ಸಂದರ್ಭ ಭಾಗವತ ಕಥಾ ಶ್ರವಣ.

**"ಹರಿನಾರಾಯಣ ಎಂದು ಪ್ರಲ್ಹಾದ ಒರೆಯಲು |**
**ದುರುಳದಾನವ ಅವನೊಳು ಮುನಿದು ||**
**ಕರೆ ನಿನ್ನೊಡೆಯನ ಎಂದು ಗರ್ಜಿಸೆ ನರ |**
**ಹರಿ ಬಂದು ಒಡನೆಯೇ ಕಾಯ್ದನೆಂಬುದ ಕೇಳಿ" || ೪ ||**

ಭಕುತನಿಗಾಗಿ ತತ್ಕಾಲದಲ್ಲಿ ಕಂಭದಿಂದ ಒದಗಿದ ರೂಪ. ಇದೊಂದು ವಿಶೇಷರೂಪ. ಬ್ರಹ್ಮದೇವರ ವರವನ್ನು ಕಾಯ್ದು, ಭಕುತನನ್ನು ಕಾಯ್ದು ದುಷ್ಟ ದಾನವನನ್ನು ಸಂಹಾರ ಮಾಡಿದ ರೂಪ.

ಪುನಃ ಇನ್ನೊಂದು ಭಾಗವತ ಸಂದರ್ಭ.

"ಅಂಬರೀಷಗೆ ದೂರ್ವಾಸ ಶಾಪವಕೊಡೆ ।
ಅಂಬುಜಲೋಚನ ಚಕ್ರದಿಂದ ॥
ಬೆಂಬತ್ತಿ ಮುನಿಶಾಪವ ಪರಿಹರಿಸಿದ ।
ಕಂಬು ಚಕ್ರಧರ ಹರಿ ಎಂಬುದ ಕೇಳಿ" ॥ ೫ ॥

ಸಂದರ್ಭ ಸ್ಪಷ್ಟವಾಗಿ ವರ್ಣಿತವಾಗಿದೆ.

ಮತ್ತೊಂದು ಸಂದರ್ಭ ರಾಮಾಯಣ ಕಥಾ ಸಂದರ್ಭ.

"ಛಲಬೇಡ ರಾಮನ ಲಲನೆಯ ಬಿಡು ಎಂದು ।
ತಲೆ ಹತ್ತರವಗೆ ಪೇಳಲು ತಮ್ಮನ ॥
ಬಳಲಿಸಿ ಹೊರಡಿಸಲವನಿನ್ನ ಮೊರೆಹೋಗೆ ।
ಸಲೆ ವಿಭೀಷಣಗೆ ಲಂಕೆಯನಿತ್ತುದ ಕೇಳಿ" ॥ ೬ ॥

ಮದೋನ್ಮತ್ತ ರಾವಣನ ಸಂಹಾರಮಾಡಿ ವಿಭೀಷಣನಿಗೆ ಲಂಕಾರಾಜ್ಯ ಪಟ್ಟವನ್ನು ಕಟ್ಟಿದ್ದು.

ಕೊನೆಯದಾಗಿ ವೆಂಕಟೇಶ ಮಹಾತ್ಮೆ.

"ಸುರನರನಾಗಲೋಕದ ಭಕ್ತ ಜನರನ್ನು ।
ಪೊರೆಯಲೋಸುಗ ವೈಕುಂಠದಿಂದ ॥
ಸಿರಿಸಹಿತದಲೆ ಬಂದು ಶೇಷಾಚಲದಿನಿಂದು ।
ಪುರಂದರವಿಠಲ ನಿನ್ನಯ ಚರಣವ ಕಂಡು" ॥ ೭ ॥

ಹೀಗಿದೆ ಪರಮಾತ್ಮನ ನಿರ್ವ್ಯಾಜ ಕಾರುಣ್ಯ. ಶ್ರೀಹರಿಯದು ಯಾವಾಗಲೂ ಅನಿಮಿತ್ತ ಬಾಂಧವ್ಯವೇ. ಯಾಕೆಂದರೆ ಜೀವರುಗಳಿಂದ ಆತ ಏನೂ ಅಪೇಕ್ಷಿಸುವುದಿಲ್ಲ. "ಪೂರ್ಣಕಾಮಸ್ಯ ಕಾಸ್ಪೃಹಾ", ಪೂರ್ಣ ಕಾಮನಾದವನಿಗೆ ಬೇರೆ ಏನು ಇಚ್ಛೆ ? ಜೀವರುಗಳಾದರೂ ಆತನಿಗೆ ಏನು ತಾನೇ ಮಾಡಲು ಅಥವಾ ಕೊಡಲು ಸಮರ್ಥರು ? ಬ್ರಹ್ಮಾಂಡವೆಲ್ಲ ಅವನದೇ. ಹೀಗೆ

ಅವನಿಂದ ಕರುಣೆ ಪಡೆದವರು,, ಪಡೆಯಲಿಚ್ಛಿಸುವವರು ಅವನ ಮಹಾತ್ಮೆಯನ್ನು ತಿಳಿದು ಅವನಲ್ಲಿ ದೃಢತರ ಸ್ನೇಹ ಮಾಡಿ, ಆತನ ಪ್ರೀತಿಗಾಗಿ ಸಕಲ ವ್ಯಾಪಾರಗಳನ್ನು ಮಾಡಿ ಅವನಿಗೊಪ್ಪಿಸಿ, ಆತನ ಸ್ಮರಣೆಯಲ್ಲಿದ್ದು ಈ ಭವ ಬಂಧನದಿಂದ ಪಾರಾಗುವದೇ ಸದುಪಾಯವೆಂದು ಪುರಂದರದಾಸಾರ್ಯರು ಶಾಸ್ತ್ರಪದ್ಧತಿಯಿಂದ ತೋರಿದ ಹೆದ್ದಾರಿ. ಇಲ್ಲಿಗೆ ಐದು ಭಾಗ ಸಮಾಪ್ತಿ.

॥ ಹರಿಃ ಓಂ ॥

೨

# ಶ್ರೀಪುರಂದರೋಪನಿಷತ್

ಉಪನಿಷತ್ ಎಂದರೆ ಅಧ್ಯಾತ್ಮಪ್ರಧಾನವಾದ ವಿದ್ಯೆ. ಇದು ರಹಸ್ಯ ವಿದ್ಯೆಯೂ ಆಗಿದೆ. ಈ ಉಪನಿಷತ್ತುಗಳು ಅಪೌರುಷೇಯ ವಾಕ್ಯ ಸಮೂಹ ವೆಂದು ಪ್ರಸಿದ್ಧಿ ಇದೆ.

ಇಂಥ ರಹಸ್ಯವಿದ್ಯೆಯನ್ನು ಅಥವಾ ಭಗವತ್ಸಾಕ್ಷಾತ್ಕಾರ ಪ್ರಯೋಜಕ ತತ್ತ್ವಸಾದ ದ್ವಾರಾ ಮುಕ್ತಿದಾಯಕ ವಿದ್ಯೆಯನ್ನು ವಕ್ತ್ರಾನುಕೂಲ್ಯವಿರುವ ಗುರುಗಳು ಶ್ರೋತ್ರಾನುಕೂಲ್ಯವಿರುವ ಶಿಷ್ಯರಿಗೆ ಪ್ರಸಂಗಾನುಕೂಲ್ಯಾನುಸಾರ ವಾಗಿ ಬೋಧಿಸುತ್ತಾರೆ. ಇದೇ ಬ್ರಹ್ಮಜಿಜ್ಞಾಸಾಕರ್ತವ್ಯತ್ವೇನ ವಿಧಿಸಿರು ವುದು. ಈ ವಿದ್ಯೆ ಪಡೆದ ಶಿಷ್ಯರು ಅತಿ ಶೀಘ್ರದಲ್ಲಿಯೇ ಭಗವತ್ ಸಾಕ್ಷಾ ತ್ಕಾರ ಹೊಂದುತ್ತಾರೆ. ಐಹಿಕ ಆಮುಷ್ಮಿಕ, ಎಲ್ಲ ತರಹದ ಪ್ರಯೋಜನ ಗಳು ಲಭ್ಯವಾಗುತ್ತವೆ. "ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ", ಭಗವಾನ್ ಶ್ರೀನಿಕೇತನನು ಒಲಿದ ಮೇಲೆ ಯಾವದು ಲಭಿಸಲಿಕ್ಕಿಲ್ಲ.

ಈ ಅಧ್ಯಾತ್ಮ ವಿದ್ಯೆಯು ಲೌಕಿಕ ಅಥವಾ ಆಧುನಿಕ ವಿದ್ಯಾಶಿಕ್ಷಣಕ್ರಮ ಕ್ಕಿಂತಲೂ ಅತ್ಯಂತ ಭಿನ್ನವಾಗಿದೆ. ಲೌಕಿಕ ವಿದ್ಯೆಯಿಂದ ಲೌಕಿಕ ಪ್ರಯೋಜನ ಮಾತ್ರವಿರುತ್ತದೆ. ಆದರೆ ಆಧ್ಯಾತ್ಮವಿದ್ಯೆಯಿಂದ ಇಹಪರ ಎರಡು ಕಡೆಗೆ ಸೌಖ್ಯ ಪಡೆಯಬಹುದು.

ಶ್ರೀಪುರಂದರದಾಸರ ಕೃತಿಗಳಲ್ಲಿ ಅಂದರೆ ಅವರ ಪದ ಪದ್ಯ ಸುಳಾದಿ ಗಳಲ್ಲಿ ಉಪನಿಷತ್ ವಿದ್ಯೆಯ ಸಾರವಿದೆ ಎಂದು ಮೊದಲು ಗುರುತಿಸಿದ ಮಹಾನುಭಾವರು ಶ್ರೀವ್ಯಾಸಮುನಿಗಳು. ಶ್ರೀವ್ಯಾಸರಾಜರ ಕಾಲದಲ್ಲಿ ಅವರ ವ್ಯಾಸಪೀಠದಲ್ಲಿ ಶಾಸ್ತ್ರಗ್ರಂಥಗಳ ಜೊತೆಗೆ ಪುರಂದರ ಕೃತಿಗಳು

ಸಮಸ್ಥಾನವನ್ನು ಪಡೆದಿದ್ದವು. ಮಠದ ಶಿಷ್ಯರು ಎಷ್ಟು ಸಲ ಪುರಂದರ ಕೃತಿಗಳನ್ನು ತೆಗೆದುಹಾಕಿದರೂ ಅವು ಪುನಃ ಪುನಃ ವ್ಯಾಸಪೀಠದ ಮೇಲೆಯೇ ಅಲಂಕೃತವಾದವೆಂದು ಹೇಳುತ್ತಾರೆ. ಈ ಕೌತುಕವನ್ನು ಕಂಡ ಮತ್ತು ಕೃತಿಗಳ ಅಂತರಾರ್ಥವನ್ನು ಅರಿತ ಶ್ರೀ ವ್ಯಾಸರಾಜರು, ಪುರಂದರದಾಸರ ಕೃತಿಗಳನ್ನು "ಪುರಂದರೋಪನಿಷತ್" ಎಂದು ಕರೆದರು ಮತ್ತು ಗೌರವಿಸಿದರು. ಅರ್ಥಾತ್ ಇವರು ರಚನೆಮಾಡಿದ ಪದ ಪದ್ಯ ಸುಳಾದಿಗಳಲ್ಲಿ ಅಧ್ಯಾತ್ಮ ಪ್ರಧಾನ ವಿದ್ಯೆ ಅಥವಾ ರಹಸ್ಯ ವಿದ್ಯೆ ಅಡಗಿದೆ ಎಂಬುದನ್ನು ತಿಳಿಯಪಡಿಸಿದರು.

ಅವರ ಕೃತಿಗಳಲ್ಲಿ ಅಡಗಿರುವ ಉಪನಿಷತ್/ಶಾಸ್ತ್ರರಹಸ್ಯವನ್ನು ಅರಸಬೇಕು, ಯೋಚಿಸಬೇಕು, ಅರಿಯಬೇಕು ಮತ್ತು ಶಾಸ್ತ್ರಗಳಲ್ಲಿ **ಅತಿದೇಶಸಮಾಡಬೇಕು.** ಆಗಾಗುತ್ತದೆ ನಮಗೆ ಪುರಂದರೋಪನಿಷತ್ತಿನ ಅನುಭವ ಮತ್ತು ಶಾಸ್ತ್ರಜ್ಞಾನಜನ್ಯ ಆನಂದ ಅಥವಾ ಜ್ಞಾನಾನಂದವೆನ್ನಿರಿ.

ಅವರ ಕೃತಿಗಳಲ್ಲಿ ಕೆಲವು ನೇರವಾಗಿ ಉಪನಿಷತ್ತಿನ ಅರ್ಥ ಹೇಳಿರುವದು ತಿಳಿಯುವದು. ಇನ್ನು ಕೆಲವು ಸಂದರ್ಭದಲ್ಲಿ, ಬಳಸಿಕೊಂಡು/ಪರಂಪರಾ ಉಪನಿಷದಾರ್ಥ ಹೇಳುತ್ತಾರೆ. ಮೊದಲೊಂದು ನೇರ ಉಪನಿಷದಾರ್ಥವನ್ನು ಅವರ ಉಗಾಭೋಗಗಳಲ್ಲಿ ಕಾಣುವಾ. ನಂತರ ಶಾಸ್ತ್ರವನ್ನು ಬಳಸಿ ಉಪನಿಷತ್ತಿಗೆ ಹೋಗುವಾ.

**ಮೊದಲನೆಯ ವಿಚಾರ :—ಕಠೋಪನಿಷತ್ತಿನಿಂದ :—**

**ಯದಿದಂ ಕಿಂಚ ಜಗತ್ ಸರ್ವಂ ಪ್ರಾಣಏಜತಿ ನಿಃಸೃತಮ್ ।**
**ಮಹದ್ಭಯಂ ವಜ್ರಮುದ್ಯತಮ್ ಯಏತ ದ್ವಿದುರ-**
**ಮೃತಾಸ್ತೇ ಭವಂತಿ ॥**
**ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ ।**
**ಭಯಾದಿಂದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ ॥**

ಪರಮಾತ್ಮನು ಜಗತ್ಸರ್ಜಕ ಮತ್ತು ಚಾಲಕ. ಮಹಾಬಲಶಾಲಿ. ವಜ್ರಾಯುಧವಿದ್ದಂತೆ. ದೇವತೆಗಳೆಲ್ಲ ಅವನ ಭಯದಿಂದ ಹೆದರಿ ನಡುಗುತ್ತಾರೆ. ಅವನ ಭಯದಿಂದ ಅಗ್ನಿಯು ಜ್ವಲಿಸುತ್ತಾನೆ, ಸೂರ್ಯನು ಪ್ರಕಾಶಿಸುತ್ತಾನೆ. ಅವನ ಭಯದಿಂದಲೇ ಇಂದ್ರ, ವಾಯು ಮತ್ತು ಯಮ ಈ ಐದು ದೇವತೆಗಳೂ, ಅತಿ ತ್ವರೆಯಿಂದ ಮತ್ತು ದಕ್ಷತೆಯಿಂದಲೂ ಕೆಲಸಮಾಡುತ್ತಾರೆ.

ಇದು ಮೇಲಿನ ಉಪನಿಷದ್ವಾಕ್ಯಗಳ ಸಾಮಾನ್ಯಾರ್ಥ. ಈಗ ನೋಡುವಾ ದಾಸರಾಯರ ಕೃತಿಗಳನ್ನು—ಉಗಾಭೋಗಗಳನ್ನು :—

ಚಂದಿರನಿಗೊಂದುಕ್ಷಣ ನಿಂದಿರಲಿಕ್ಕಿಂಬಿಲ್ಲ ।
ಇಂದ್ರಾದಿಗಳಿಗೆ ಕುಳ್ಳಿರಲಿಕ್ಕೊತ್ತಿಲ್ಲ ।
ಒಂದು ಕ್ಷಣವಾದರೂ ಸೂರ್ಯಾದಿಗಳಿಗೆ ।
ನಿಂದು ತುರಿಸಿಕೊಳ್ಳಲು ಹೊತ್ತಿಲ್ಲ ।
ಪುರಂದರ ವಿಠಲರಾಯ ಕಟ್ಟರಸು ಕಾಣಿರೋ ॥

— — —

ಧರೆ ಅಂಜುತಲಿದೆ ಗಿರಿ ಅಂಜುತಲಿದೆ ।
ಸರಿತ್ಸಮುದ್ರಗಳಂಜಿ ಬೆಟ್ಟಾಗುತಿದೆ ।
ಮರುತ ಪಾವಕ ಅಂಜಿ ಚರಿಸಿ ದಹಿಸುತಿದೆ ।
ಮರಬಳ್ಳಿಗಳು ಫಲವನೀವುತಲಿವೆ ।
ಪುರಂದರವಿಠಲ ನೀನೆಂಥ ಅರಸೋ ॥

ಹೀಗಿದೆ ಎರಡು ಕಠೋಪನಿಷತ್ತಿನ ಎರಡು ಶ್ಲೋಕಗಳ ಪುರಂದರದಾಸರ ಭಟ್ಟಿಸಾರ. ಭೂಲೋಕದಲ್ಲಿ ವಾರದಲ್ಲೊಂದು ದಿನ ವಿರಾಮ ಎಲ್ಲರಿಗೂ ಇದೆ. ಆದರೆ ಈ ಮೇಲೆ ಹೇಳಿದ ದೇವತೆಗಳದು ಅತ್ಯವಶ್ಯಕ ಕಾರ್ಯಗಳಲ್ಲಿ ನೇಮಕ ಮಾಡಿರುವದರಿಂದ ವಿರಾಮರಹಿತ ಕೆಲಸ ಇವರದು.

ಎರಡನೆಯ ವಿಚಾರ :—

ಇನ್ನೊಂದು ದೇವರನಾಮ ನೋಡುವಾ. ಮೇಲೆ ನೋಡಲು ಅಂಥ ಭಾರೀ ಕಾಣುವದಿಲ್ಲ. ಗುರುಪದೇಶ ಸಾಮಾನ್ಯ ವರ್ಣನೆ. ಆದರೆ ಅದರಲ್ಲಿ ಅಡಗಿರುವ ಅರ್ಥವು ವ್ಯಂಜಕವಾಗಬೇಕಾದರೆ ಶಾಸ್ತ್ರಸಂಬದ್ಧತ್ವವನ್ನು ಮೊದಲು ಅರಸುವಾ. ನಂತರ ಶಾಸ್ತ್ರಕಾರರೇ ನಮ್ಮನ್ನು ಉಪನಿಷತ್‌ಗಳಿಗೆ ಕರೆದೊಯ್ಯುತ್ತಾರೆ.

**ಗುರುವಿನ ಗುಲಾಮನಾಗುವ ತನಕ ।**
**ದೊರೆಯದಣ್ಣ ಮುಕುತೀ ॥ ಪ ॥**
**ಪರಿಪರಿ ಅನೇಕ ಶಾಸ್ತ್ರಗಳೋದಿ**
**ವ್ಯರ್ಥವಾಯಿತು ಭಕುತೀ ॥ ಅ. ಪ. ॥**

ಗುರುವಿಗೆ ಸರ್ವಾತ್ಮನಾ ವಿಧೇಯನಾಗಿ ಶರಣಾಗತನಾಗಿ ಅವರ ಪ್ರಸನ್ನತೆಯನ್ನು ಪಡೆದು ಅವರು ಕೊಟ್ಟ ಅಧ್ಯಾತ್ಮವಿದ್ಯೆಯಿಂದ ಭಗವಂತನ ಸಾಕ್ಷಾತ್ಕಾರ ಪಡೆದು ತದ್ವಾರಾ ಮುಕ್ತಿ ಲಭ್ಯ.

ಸ್ವಪ್ರಯತ್ನದಿಂದ ಅನೇಕ ಶಾಸ್ತ್ರಗಳನ್ನು ಯುಕ್ತಿಯಿಂದ ಸಾಧಿಸಿ ತನ್ಮೂಲಕ ಭಕ್ತಿಯನ್ನು ಮಾಡಿದರೆ ಹರಿ ಒಲಿಯನು, ಮುಕ್ತಿ ದೊರಕದು, ಎಂಬುದು ಸಾಮಾನ್ಯವಾಗಿ ತೋರುವ ಅರ್ಥ.

ಇಂಥ ಪ್ರಸಂಗಗಳನ್ನು ಲೌಕಿಕ ಉತ್ತಮವಾದ ವಿದ್ಯೆಗಳಲ್ಲಿಯೂ ಕಾಣಬಹುದು. ಒಬ್ಬರಿಗೊಬ್ಬರು ಅಷ್ಟು ಸುಲಭವಾಗಿ ವಿದ್ಯೆಯನ್ನು ಸರಹಸ್ಯವಾಗಿ ಹೇಳಿಕೊಡುವುದಿಲ್ಲ. ಗುರುವು ಶಿಷ್ಯನ ವಿಧೇಯತೆ, ಬುದ್ಧಿ ಸಾಮರ್ಥ್ಯ, ಗುರು ಭಕ್ತಿ ಇತ್ಯಾದಿ ಉತ್ತಮ ಗುಣಗಳನ್ನು ನೋಡಿ ಪ್ರಸನ್ನಚಿತ್ತರಾದರೆ ಮಾತ್ರ ಶಿಷ್ಯನ ಅಭ್ಯುದಯಕ್ಕಾಗಿ ರಹಸ್ಯಗಳನ್ನು ತಿಳಿಸುತ್ತಾರೆ. ಇಲ್ಲದೇ ಹೋದರೆ ರಹಸ್ಯವು ಗೂಢವಾಗಿಯೇ ಉಳಿಯುವುದು. ಉದಾ :– ಶಸ್ತ್ರವಿದ್ಯೆ, ಅಸ್ತ್ರ-ವಿದ್ಯೆ, ಪಾಕಶಾಸ್ತ್ರ, ವೈದ್ಯಕೀಯ, ಯಾಂತ್ರಿಕವಿದ್ಯೆ, ಮಲ್ಲವಿದ್ಯೆ, ಈಜಾಡುವುದು, ಕೃಷಿ, ಗಾಯನ, ಉತ್ತಮ ಆಟಗಳು ಇತ್ಯಾದಿಗಳಲ್ಲಿಯೂ ಸಹ ಶಿಷ್ಯನು ಗುರುಗಳ ಅಧೀನನಾಗಿ ಮನ ಒಲಿಸದಿದ್ದರೆ ಅವರು ವಿದ್ಯೆಯ ರಹಸ್ಯಗಳನ್ನು ಹೇಳಲಾರರು. ಸಾಮಾನ್ಯವಾಗಿ ಹೇಳಬಹುದು, ಪರಿಣಿತಿ (Expertisation) ಬೇಕಾದರೆ ಗುರುಗಳನ್ನು ಒಲಿಸಬೇಕು. ಐಹಿಕ ವಿದ್ಯೆಗಳಿಗೇ ಗುರುಗಳ ಅವಶ್ಯಕತೆ ಇಷ್ಟಿರಬೇಕಾದರೆ ಉತ್ತಮೋತ್ತಮವಾದ ಮೋಕ್ಷವಿದ್ಯೆಗೆ ಗುರುಗಳನ್ನು ಅದೆಷ್ಟು ಒಲಿಸಬೇಕು.

ಆಲ್ರೀ, "ಗುರುವಿನ ಗುಲಾಮನಾಗುವ ತನಕ । ದೊರೆಯದಣ್ಣ ಮುಕುತೀ ॥" ಎಂದು ಹೇಳಿದರಲ್ಲ ದಾಸಾರ್ಯರು. ಮುಕುತಿಕೊಡುವವನ್ಯಾ

ಹರಿ ಅಲ್ಲವೇ, ಅಂದಮೇಲೆ ಗುರುವಿನ ಗುಲಾಮ ಯಾಕೆ ಆಗಬೇಕು. ಒಂದೇ ಸಲ ಹರಿಗೇ ಗುಲಾಮರಾಗಿ ಬಿಡುವಾ, ಎಂದೆನಿಸಬಹುದು. ಆದರೆ ಭಗವತ್ಸಾಕ್ಷಾತ್ಕಾರದ್ವಾರಾ ಮೋಕ್ಷಲಭ್ಯ. ಈ ಭಗವತ್ಸಾಕ್ಷಾತ್ಕಾರ ಆಗಬೇಕಾದರೆ ಅದು ಗುರುವಿನ ಉಪದೇಶದ ಮೂಲಕವೇ ಸಾಧ್ಯ. ಹರಿಯು ನಮಗೆ ನೇರವಾಗಿ ಸಿಗಲಾರ. ಸಿಕ್ಕರೆ ಗುರುಗಳ ಮೂಲಕವೇ. ಇದನ್ನು ದಾಸರಾಯರು ಬಹಳ ನಿರ್ಧಾರವಾಣಿಯಲ್ಲಿ ಹೇಳಿದ್ದಾರೆ.

ಈ ಪದದ ಪಲ್ಲವಿಯನ್ನು "ಗುರುವಿನ ಗುಲಾಮನಾಗುವ ತನಕ। ದೊರೆಯದಣ್ಣ ಮುಕುತಿ," ಒಂದುಸಲ ನೋಡಿ, ಶಾಸ್ತ್ರಗ್ರಂಥಗಳ ಕಡೆಗೆ ಒಂದು ಸಲ ಕುತೂಹಲದಿಂದ ವೀಕ್ಷಿಸಿದರೆ, ಪ್ರಾಯಶಃ ದಾಸಾರ್ಯರ ಮನಸ್ಸಿನ ಹಿನ್ನೆಲೆಯಲ್ಲಿ ನಿರ್ಣಾಯಕ ಶಾಸ್ತ್ರವಾದ ಬ್ರಹ್ಮಸೂತ್ರದ **"ಪ್ರದಾನಾಧಿಕರಣವೂ"** ಹಾಗೆಯೇ ಅನುಪಲ್ಲವಿಯನ್ನು "ಪರಿಪರಿ ಅನೇಕ ಶಾಸ್ತ್ರಗಳೋದಿ ವ್ಯರ್ಥವಾಯಿತು ಭಕುತೀ" ಒಂದುಸಲ ನೋಡಿ ಸೂತ್ರಗಳ ಕಡೆ ವೀಕ್ಷಿಸಿದರೆ, ಹಿನ್ನೆಲೆ **"ಲಿಂಗಭೂಯಸ್ತ್ವಾಧಿಕರಣವೂ"** ಪ್ರಧಾನ ವಿಚಾರ ಕಾರಣವಾಗಿವೆ ಎಂದು ತಿಳಿಯುತ್ತದೆ. ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಬ್ರಹ್ಮಸೂತ್ರದ ಭಾಷ್ಯದಲ್ಲಿ ಈ ಎರಡು ಸೂತ್ರಗಳನ್ನು ಅಥವಾ ಅಧಿಕರಣಗಳನ್ನು (ಇವೆರಡು ಏಕಸೂತ್ರಿ ಅಧಿಕರಣಗಳು) ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ಎರಡು ಉಪನಿಷತ್ತುಗಳನ್ನು ಉದಾಹರಿಸಿದ್ದಾರೆ. ಛಾಂದೋಗ್ಯ ಮತ್ತು ಬೃಹದಾರಣ್ಯಕ. ಅಂದರೆ ದಾಸಾರ್ಯರವಾಣಿಗೆ ಶಾಸ್ತ್ರಮೂಲ–ಉಪನಿಷತ್ ಮೂಲ ಇದ್ದದ್ದು ನಮಗೆ ವಿದಿತವಾಗುತ್ತಲಿದೆ. ಅದೂ ಶ್ರೀವ್ಯಾಸರಾಜರ ದಯದಿಂದ.

ಈಗ ಈ ಎರಡು ಅಧಿಕರಣಗಳು (ಸೂತ್ರಗಳು) ಏನು ಹೇಳುತ್ತವೆ. ಅವುಗಳು ದಾಸರಾಯರ "ಗುರುವಿನ ಗುಲಾಮನಾಗುವ ತನಕ...." ಎಂಬದೇವರನಾಮಕ್ಕೆ ಹೇಗೆ ಅನ್ವಯಿಸುತ್ತವೆ, ಅವುಗಳ ಸಾರವನ್ನು ದಾಸರಾಯರು ತಮ್ಮ ದೇವರನಾಮದಲ್ಲಿ ಹೇಗೆ ಭಟ್ಟಿ ಇಳಿಸಿದ್ದಾರೆ ಎಂಬುದನ್ನು ಅವಲೋಕನ ಮಾಡುವಾ.

ಮೊದಲನೆಯದಾಗಿ "ಓಂ ಪ್ರದಾನವದೇವಹಿ ತದುಕ್ತಂ ಓಂ" ಭಾಷ್ಯಃ :– ನ ಚ ಶ್ರವಣಾದಿ ಮಾತ್ರೇಣ ಬ್ರಹ್ಮದೃಷ್ಟಿರ್ಭವತಿ । ಕಿಂತು ಸೇತಿಕರ್ತವ್ಯೇನ । ಯಥಾಗುರು ದತ್ತಂ ತಥೈವಭವತಿ । ಆಚಾರ್ಯ ವಾನ್ ಪುರುಷೋವೇದ । ಇತಿ ಹ್ಯುಕ್ತಮ್ ॥

ಸೂತ್ರದೀಪಿಕಾ:—ಪ್ರದಾನದತ್–ಸಮ್ಯಕ್ ಪ್ರೀತಿಪೂರ್ವಕಂ ಗುರುಪದೇಶಯುಕ್ತಮೇವ ಶ್ರವಣಾದಿಕಂ ಜ್ಞಾನಸಾಧನಮ್ ನ ಕೇವಲಂ । ಕುತಃ ಹಿ ಯತಃ । ತದುಕ್ತಂ ತಸ್ಯಜ್ಞಾನಸ್ಯ ಗುರುಪ್ರಸಾದಾಧೀನತ್ವಂ ಆಚಾರ್ಯವಾನಿತಿ (ಛಾಂ. 6. 14/2) ಶ್ರುತಾಉಕ್ತ ಮಿತ ಇತ್ಯರ್ಥಃ ॥

ಗುರುಗಳು ಶಿಷ್ಯರಿಗೆ ಪ್ರೀತಿಪೂರ್ವಕವಾಗಿ ಮತ್ತು ಪ್ರಸನ್ನಚಿತ್ತರಾಗಿ ಅನುಗ್ರಸಹಿತಕ್ಕ ಉಪದೇಶದಿಂದ ಮತ್ತು ಮಾಡಿಸತಕ್ಕ ಶ್ರವಣಮನನಾದಿ ಗಳಿಂದಲೂ ಭಗವತ್ಸಾಕ್ಷಾತ್ಕಾರಕ್ಕೆ ಪ್ರಯೋಜನವಾಗುತ್ತದೆ. ಯಾಕೆಂದರೆ ಛಾಂದೋಗ್ಯ ಶ್ರುತಿಗಳಲ್ಲಿ ಹೇಳಿದ ಪ್ರಕಾರ, "ಆಚಾರ್ಯವಾನ್ ಪುರುಷಃ", ಭಗವತ್ಸಾಕ್ಷಾತ್ಕಾರವು ಗುರುಪ್ರಸಾದಾಧೀನವಾಗಿದೆ. ಯಾರೆಂದರವರಿಂದ ಅಧ್ಯಾತ್ಮ ಶ್ರವಣಾದಿಗಳನ್ನು ಮಾಡಿದರೆ ಭಗವತ್‌ಸಾಕ್ಷಾತ್ಕಾರರೂಪ ಪ್ರಯೋಜನವಾಗಲಾರದು, ಆದರೂ ಶ್ರವಣಾದಿಗಳನ್ನು ಮಾಡುತ್ತಿರಬೇಕು. ಅದರಿಂದಲೂ ಕೆಲವು ಲಾಭಗಳಿವೆ. ಮುಂದೆ ಹೇಳುತ್ತಾರೆ. ಇತಿ

ಇಷ್ಟು ಹೇಳಿದಮೇಲೆ ಒಂದು ಆಕಾಂಕ್ಷೆ ಬರುತ್ತದೆ. ಅಲ್ಲರೀ, ಗುರು ಪ್ರಸಾದ ಬಲವತ್ತರವೋ ಅಥವ ಶಿಷ್ಯನ ಪ್ರಯತ್ನ ಬಲವತ್ತರವೊ ? ಅಥವಾ ಸಮ ಸಮವೋ ? ಯಾವುದಾದರೊಂದಕ್ಕೆ ಆಧಿಕ್ಯವಿದೆಯೇ ? ಎಂಬ ಪ್ರಶ್ನೆಗೆ ಶಾಸ್ತ್ರಕಾರರ ಉತ್ತರ:—

ಓಂ ಲಿಂಗಭೂಯಸ್ತ್ವಾತ್ತದ್ಧಿ ಬಲೀಯಸ್ತದಪಿ ಓಂ (3.3.೪೫) ಭಾಷ್ಯಃ–ಗುರುಪ್ರಸಾದಃ ಸ್ವಪ್ರಯತ್ನೋವಾ ಬಲವಾನಿತಿ ನಿಗದ್ಯತೆ । ಋಷಭಾದಿಭ್ಯೋವಿದ್ಯಾಂ ಜ್ಞಾತ್ವಾಪಿ ಸತ್ಯಕಾಮೇನ ಭಗವಾನ್‌ತ್ವ

ಮೇವ ಮೇ ಕಾಮೇ ಬ್ರೂಯಾತ್ (ಛಾ.೪.೮.೩) । ಶ್ರುತಂ ಹ್ಯೇವಮೇ ಭಗವದೃಶೇಭ್ಯಃ ಆಚಾರ್ಯಾದ್ಧ್ಯೇವ ವಿದ್ಯಾವಿದಿತಾ ಸಾಧಿಷ್ಠಂ ಪ್ರಾಪಯತಿ (ಛಾ.೪.೯.3) । ಇತಿ ವಚನಾತ್ । "ಅತ್ರ ಹ ನ ಕಿಂಚಿನ ವೀಯಾಯ" ಇತ್ಯನುಜ್ಞಾನಾದುಪಕೋಸಲ ವಚನಾಚ್ಚ। ಲಿಂಗಭೂಯಸ್ತ್ವಾದ್ಗುರು ಪ್ರಸಾದ ಏವಬಲವಾನ್ । ತರ್ಹಿ ತಾವತಾಲಮಿತಿ ನಮಂತವ್ಯಂ। "ಶ್ರೋತವ್ಯೋ ಮಂತವ್ಯಃ" (ಬೃ.೪.೪.೫) ಇತ್ಯಾದೇಸ್ತದಪಿ ಕರ್ತವ್ಯಂ । ನಾರಾಹೇಚ । ಗುರುಪ್ರಸಾದೋಬಲವಾನ್ । ನ ತಸ್ಮಾದ್ಬಲವತ್ತರಂ । ತಥಾಪಿ ಶ್ರವಣಾದಿಶ್ಚ ಕರ್ತವ್ಯೋಮೋಕ್ಷಸಿದ್ಧಯೇ ॥ ಇತಿ ॥

ಸೂತ್ರದೀಪಿಕಾ :— ತತ್-ಗುರುಪ್ರಸಾದ ಪೂರ್ವಕ ಪ್ರದಾನ ಮಾತ್ರಮ್ । ಬಲೀಯಃ ಅತಿಶಯೇನ ಬಲವತ್ । ಕುತಃಲಿಂಗ ಭೂಯಸ್ತ್ವಾತ್ । ವೃಷಭ ಹಂಸಜಲ ವಾಯಸ ರೂಪೇಭ್ಯೋ ವಾಯ್ವಗ್ನಿ ವರುಣೇಭ್ಯಃ ಶ್ರುತವಿದ್ಯೆ ಸತ್ಯಕಾಮೇನ ಗುರು-ಪ್ರದಾನಾದಿ ರೂಪ ಲಿಂಗ ಬಾಹುಲ್ಯದರ್ಶನಾತ್ ತಥಾಪಿ ತದಪಿ ಶ್ರವಣಾದಿಕಮಪಿಕಾರ್ಯಮ್। ಕುತಃ ಶ್ರೋತವ್ಯ ಇತಿ (ಬೃ.೪.೪.೫) ಶ್ರುತೇರಿತ್ಯರ್ಥಃ । ಹಿಶಬ್ದಃ ಶ್ರುತಿ ಸೂಚಕಃ ॥

ಅಧ್ಯಾತ್ಮಕ್ಷೇತ್ರದಲ್ಲಿ ಗುರುಪ್ರಸಾದ ಬಲವತ್ತರವೋ ಅಥವಾ ಶಿಷ್ಯನ ಪ್ರಯತ್ನವೇ ಬಲವತ್ತರವೋ ಎಂಬಪ್ರಶ್ನೆಗೆ ಉತ್ತರವನ್ನು ಶ್ರೀಬಾದರಾಯಣರು "ಓಂ ಲಿಂಗಭೂಯಸ್ತ್ವಾತ್...." ಎಂಬ ಸೂತ್ರದಿಂದ ತಿಳಿಸಿದರು. ಇದನ್ನು ಭಾಷ್ಯಕಾರರು ವಿವರಿಸುತ್ತಾರೆ. ಸತ್ಯಕಾಮ ಜಾಬಾಲನಿಗೆ ಗುರುಕುಲ ವಾಸ ಮಾಡುತ್ತಿದ್ದಾಗ ವೃಷಭ ಹಂಸಜಲವಾಯಸ ರೂಪದಿಂದ ವಾಯು ಅಗ್ನಿವರುಣ ಬ್ರಹ್ಮಾದಿಗಳಿಂದ ಬ್ರಹ್ಮವಿದ್ಯೆಯು ಉಪದೇಶವಾದಾಗ್ಯೂ, ಆಚಾರ್ಯರಿಂದ ತಿಳಿದ ವಿದ್ಯೆಯೇ ಭಗವದ್ದರ್ಶನಕ್ಕೆ ಕಾರಣವೆಂದು ತಿಳಿದು, ಗುರುಗಳನ್ನು ವಿದ್ಯೋಪದೇಶ ಮಾಡಬೇಕೆಂದು ಪುನಃ ಪ್ರಾರ್ಥಿಸಿದನು. ಅದೇ ರೀತಿ ಸತ್ಯ-ಕಾಮನ ಶಿಷ್ಯನಾದ ಉಪಕೋಸಲನಿಗೂ ಅಂಥದೇ ಅನುಭವ, ಅಗ್ನಿಗಳು ಅವನಿಗೆ ಗುರುಕುಲದಲ್ಲಿರುವಾಗ ಉಪದೇಶ ಮಾಡಿದರೂ. ಬ್ರಹ್ಮವಿದ್ಯೆ ಗುರು ಗಳಿಂದಲೇ ಲಭ್ಯವಾದರೆ ಭಗವತ್ಸಾಕ್ಷಾತ್ಕಾರ ಪ್ರಯೋಜಕವೆಂದು ತಿಳಿದ ಆ

ವಿದ್ಯಾರ್ಥಿಯು ಗುರುವಾದ ಸತ್ಯಕಾಮನನ್ನೇ ಉಪದೇಶಮಾಡಲು ಪ್ರಾರ್ಥಿಸಿದನು. ಇವೆರಡು ಉಲ್ಲೇಖಗಳೂ ಛಾಂದೋಗ್ಯ ಉಪನಿಷತ್ತಿನಲ್ಲಿವೆ. ಆದಾಗ್ಯೂ ಶ್ರವಣಾದಿಗಳನ್ನು ಮಾಡಬೇಕು ಎಂದು ವೇದಗಳ ಆದೇಶ.

"ಆತ್ಮಾರೆ ದ್ರಷ್ಟವ್ಯೋ ಶ್ರೋತೃವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ" ಬೃಹದಾರಣ್ಯಕ ; ಹೇ ಸಂಸಾರ ಬದ್ಧನಾದ ಜೀವನೇ ಒಂದು ವೇಳೆ ಭಗವತ್ ಸಾಕ್ಷಾತ್ಕಾರ ಪಡೆಯಬೇಕೆಂಬ ಇಚ್ಛೆ ಇದ್ದರೆ, ಶ್ರವಣಾದಿಗಳನ್ನು ಮಾಡಿ ಪ್ರತಿಬಂಧಕ ಸಾಮಗ್ರಿಯನ್ನು ಕಳೆದುಕೋ, ನಂತರ ಗುರುಪದೇಶದಿಂದ ಸಾಕ್ಷಾತ್ಕಾರ ಹೊಂದುವಿ.

"ಲಿಂಗಭೂಯಸ್ತ್ವಾತ್...." ಎಂದು ಹೇಳಿದ್ದರಿಂದ ಈ ವಿಷಯವಾಗಿ ಭಾಷ್ಯಕಾರರು ಎರಡು ಉದಾಹರಣೆ ತೋರಿಸಿದ್ದರೂ ಇನ್ನೂ ಬಹಳ ಇವೆ. ಉಪನಿಷತ್‌ಗಳಲ್ಲಿ ಉಲ್ಲೇಖ ಮಾಡಿದ ಅತಿಶಯ ಗುರುಭಕ್ತಿ ಮಾಡಿದಂಥ ಶಿಷ್ಯರು ಅನೇಕರಿದ್ದಾರೆ.

ಮೇಲೆ ಹೇಳಿದ ಇಬ್ಬರು ವ್ಯಕ್ತಿಗಳು, ಸತ್ಯಕಾಮ ಉಪಕೋಸಲ ಗುರುಗಳ ಸೇವೆಯನ್ನು ಹೇಗೆ ಮಾಡಿದರು, ದಾಸರಾಯರ ಮಾತಿನಂತೆ ಅವರಿಬ್ಬರೂ ತಮ್ಮ ತಮ್ಮ ಗುರುಗಳಿಗೆ **ಗುಲಾಮರಂತೆ** ಹೇಗಿದ್ದರು. ಈ ಸಂದರ್ಭದಲ್ಲಿ **ಗುಲಾಮರೆಂದರೆ** ಅವರ ಅಭಿಪ್ರಾಯವಿಷ್ಟೇ. ಶಿಷ್ಯನು ಗುರುಗಳಿಗೆ ಪ್ರತ್ಯುತ್ತರ ಕೊಡದೇ, ಸರ್ವಾತ್ಮನಾ ವಿಧೇಯನಾಗಿ, ವಿನೀತನಾಗಿ ಅವರ ಆಜ್ಞಾವನ್ನು ಸಂಪೂರ್ಣ ಶಿರಸಾವಹಿಸಿ, ಶ್ರದ್ಧಾಭಕ್ತಿಗಳಿಂದ ಪ್ರೀತಿ ಪಡಿಸಿ, ಕುಟಿಲ ವಂಚನೆರಹಿತನಾಗಿ ಕೇವಲ ಸದ್ಗುಣಗಳಿಂದ ಗುರುಗಳನ್ನು ಪ್ರಸನ್ನಪಡಿಸುವ ವಿಧಾನವನ್ನೇ **ಗುಲಾಮ** ಎಂದು ಪ್ರಯೋಗ ಮಾಡಿದ್ದಾರೆ.

ಮೊದಲು ಸತ್ಯಕಾಮನ ಗುರುಕುಲ ವಾಸವನ್ನು ಗಮನಿಸುವಾ.

ಸತ್ಯಕಾಮನು ಬಾಲಕನಾಗಿದ್ದಾಗ ಅವನ ಸ್ನೇಹಿತರೆಲ್ಲ ಗುರುಕುಲಕ್ಕೆ ಹೋಗುವುದನ್ನು ಗಮನಿಸಿದನು. ಅವನಿಗೂ ಗುರುಕುಲ ವಾಸ ಮಾಡಿ ವಿದ್ಯೆ ಕಲಿಯಬೇಕೆಂದೆನಿಸಿತು. ತಾಯಿಯನ್ನು ಕೇಳಿದನು ತನ್ನ ಗೋತ್ರವೇನೆಂದು.

ತಾಯಿ ಹೇಳಿದಳು "ತಾನು ಯುವತಿಯಾಗಿದ್ದಾಗ ಅನೇಕ ಮನೆಗಳಲ್ಲಿ ಪರಿಚರ್ಯಾದಿ ವೃತ್ತಿಯನ್ನು ಮಾಡಿ ಉಪಜೀವನ ಮಾಡುತ್ತಿದ್ದೆನು. ಆಗ ನಿನ್ನ ಜನನವಾಯಿತು. ನಿನ್ನ ಗೋತ್ರ ಇಂಥದೇ ಎಂದು ನಿರ್ದಿಷ್ಟವಾಗಿ ನನಗೆ ತಿಳಿಯದು. ನಿನ್ನ ಹೆಸರು ಸತ್ಯಕಾಮ. ನನ್ನ ಹೆಸರು ಜಾಬಾಲಾ. ಆದ್ದರಿಂದ ನೀನು ಸತ್ಯಕಾಮ ಜಾಬಾಲ. ಗುರುಗಳಿಗೆ ಹಾಗೇಯೇ ತಿಳಿಸು."

ಸತ್ಯಕಾಮನು ಗುರುಕುಲಕ್ಕೆ ಹೋದನು. ಅಲ್ಲಿ ಹಾರಿದ್ರುಮತ ಗೌತಮರೆಂಬ ಗುರುಗಳು-ಬ್ರಹ್ಮಜ್ಞಾನಿಗಳು ಗುರುಕುಲ ನಡೆಸುತ್ತಿದ್ದರು. ಬಾಲಕನ ಗುರುಕುಲವಾಸದ ಆಸೆಯನ್ನು ತಿಳಿದ ಅವರು, ಅವನ ಗೋತ್ರವನ್ನು ಕೇಳಿದರು. ತಾಯಿ ತಿಳಿಸಿದ ಹಾಗೆಯೇ ಗುರುಗಳಿಗೆ ಎಲ್ಲ ಸಂಗತಿ ಅರುಹಿದನು. ಗೌತಮರೆಂದರು "ಮಗೂ ಸತ್ಕುಲ ಪ್ರಸೂತನಾಗದೇ ಇದ್ದರೆ ಇಂಥ ಕಡು/ಕಠೋರ ಸತ್ಯವನ್ನು ನೀನು ನುಡಿಯುತ್ತಲೇ ಇರಲಿಲ್ಲ" ಎಂದು ನುಡಿದರು. ಬಾಲಕನನ್ನು ಗುರುಕುಲಕ್ಕೆ ಸೇರಿಸಿಕೊಂಡರು. ತತ್ಕಾಲದಲ್ಲಿ ಅವನಿಂದ ಅರಣಿಯನ್ನು ತರಿಸಿ ಅದನ್ನುಪಡೆದು ಅವನಿಗೆ ಪ್ರಾಥಮಿಕ ವಿಧಿ, ನಿತ್ಯ ಕರ್ಮಾನುಷ್ಠಾನವನ್ನು ಉಪದೇಶಿಸಿದರು. ಬಾಲಕನಿಗೆ ಗುರುಕುಲ ಸೇರಿದ್ದು ಪರಮಾನಂದವಾಯಿತು.

ಆಯಿತು ಮೊದಲನೆಯ ಪಾಠ ಮೊದಲನೆಯ ದಿನ. ಇನ್ನು ಮಾರನೆಯ ದಿನದಿಂದ ಸತ್ಯಕಾಮನಿಗೆ ಯಾವ ಪಾಠಪ್ರವಚನಗಳು ಪ್ರಾರಂಭವಾಗುವವೆಂದು ತಡೆದುನೋಡಬೇಕು. ಅವನು ವ್ಯಾಕರಣ, ನ್ಯಾಯ, ವೇದ, ವೇದಾಂತ, ಮೀಮಾಂಸ ಅಥವಾ ಇತರ ಬ್ರಹ್ಮವಿದ್ಯೆಯಲ್ಲಿ ಉತ್ತಮ ಶಿಕ್ಷಣ ಹೊಂದಿ ಪರಿಣಿತನಾಗುವನೆಂದು ತಾಯಿ ಜಾಬಾಲಿಯ ಮತ್ತು ನಮ್ಮೆಲ್ಲರ ನಿರೀಕ್ಷೆ. ಅಲ್ಲವೇ!

ಮಾರನೇಯ ದಿನ ಗೌತಮರು ಬಾಲಕ ಸತ್ಯಕಾಮನನ್ನು ಹತ್ತಿರ ಕರೆದು ತಮ್ಮ ನಾಲ್ಕುನೂರು ಗೋಧನವನ್ನು ಅವನಿಗೆ ತೋರಿಸಿದರು. ಎಲ್ಲ ಹಸುಗಳೂ ಬಡಕಲಾಗಿಬಿಟ್ಟಿವೆ. ಕೇವಲ ಎಲುಬು ಚರ್ಮ ಹತ್ತಿಕೊಂಡಿವೆ. ನಿಸ್ಸತ್ವವಾಗಿವೆ. ಹೊಟ್ಟೆ ತುಂಬ ಮೇಯ್ದು ಅದೆಷ್ಟು ದಿನಗಳಾದವೋ, ಕ್ಷಾಮಕಾಲದ ಪ್ರಾಣಿಗಳಂತಿವೆ ಎಲ್ಲ ಗೋವುಗಳು. ಸತ್ಯಕಾಮನಿಗೆ ಗೋವುಗಳನ್ನು ರಕ್ಷಣೆ ಮಾಡಲು ಆಜ್ಞೆ ಆಯಿತು. ಸತ್ಯಕಾಮನು ಒಂದು ಸಲ ಗೋವುಗಳ ಕಡೆಗೆ ನೋಡಿ ಅತ್ಯಂತ ಗೌರವ ಭಕ್ತಿಗಳಿಂದ ಗುರ್ವಾಜ್ಞೆಯನ್ನು ಶಿರಸಾವಹಿಸಿದನು.

"ವಿದ್ಯೆ ಕಲಿಯಲು ಗುರುಕುಲಕ್ಕೆ ಸೇರಿದ ನನಗೆ ಈ ದನ ಕಾಯುವ ಕೆಲಸವೇ ?" ಎಂದು ಸತ್ಯಕಾಮನು ಜಿಗುಪ್ಸೆ ಪಡಲಿಲ್ಲ. ಹಿಂದೆ ಮುಂದೆ ನೋಡಲಿಲ್ಲ. ತತ್ಕಾಲದಲ್ಲಿ ಆಜ್ಞೆಯನ್ನು ಅಂಗೀಕರಿಸಿದನು ಅತ್ಯುತ್ಸಾಹದಿಂದ.

ಅಷ್ಟೇ ಅಲ್ಲ, ಅವನು ಅತ್ಯಂತ ವಿನಮ್ರತೆಯಿಂದ, ಉತ್ಸಾಹದಿಂದ, ಭಕ್ತಿ ಭಾವ ತುಂಬಿದ ಮಾತಿನಲ್ಲಿ ಹೇಳಿದ, "ಗುರುಗಳೇ ತಮ್ಮ ಆಜ್ಞೆಯನ್ನು ಶಿರಸಾವಹಿಸಿದ್ದೇನೆ. ಈ ಗೋವುಗಳ ಸಂಖ್ಯೆ ಒಂದು ಸಾವಿರಕ್ಕೆ ಮೀರುವವರೆಗೂ ಅರಣ್ಯವಾಸದಿಂದ ಹಿಂತಿರುಗುವುದಿಲ್ಲವೆಂದು" ತನ್ನ ನಿರ್ಧಾರವನ್ನು ಸಂತೋಷ ದಿಂದ ಗುರುಗಳಿಗೆ ತಿಳಿಸಿ ಅವರ ಅನುಮತಿ ಪಡೆದು ಹಸುಗಳ ಗುಂಪಿನೊಂದಿಗೆ ಕಾಡಿಗೆ ಹೊದನು. ಅಲ್ಲಿ ಹುಲ್ಲುಗಾವಲು ಜಲಾಶಯ ಇರತಕ್ಕ ಪ್ರಶಸ್ತವಾದ ಸ್ಥಳ ಒಂದನ್ನು ಹುಡುಕಿ ಅನೇಕ ವರ್ಷಗಳ ಕಾಲ ಗುರ್ವಾಜ್ಞೆ ಪರಿಪಾಲನೆ ಯಲ್ಲಿಯೇ, ಗೋಧನ ರಕ್ಷಣೆಯಲ್ಲಿಯೇ ಕಳೆದನು. ಗುರುಕುಲಕ್ಕೆ ಮರಳಿ ಬರುವ ವಿಚಾರವೇ ಅವನಿಗಿದ್ದಂತೆ ಕಾಣಲಿಲ್ಲ.

ಛಳಿ ಮಳೆ ಗಾಳಿ ತಾಪ ಈ ಎಲ್ಲ ಕಾಲಿಕ ದೇಶಿಕ ವೈಪರೀತ್ಯಗಳನ್ನು ಲಕ್ಷಿಸದೇ ಅನೇಕ ವರ್ಷ ಸಂತೋಷದಿಂದ ಸ್ವಾಭಾವಿಕವಾಗಿಯೇ ನಿಸರ್ಗದಜೊತೆಗೆ ಬೆರೆತು ಒಂದಾಗಿಬಿಟ್ಟಿದ್ದನು. ಗೋವುಗಳನ್ನು ಅತ್ಯಂತ ಜಾಗರೂಕತೆಯಿಂದ ಕಾಲ ಕಾಲಕ್ಕೆ ಹುಲ್ಲು ನೀರುಗಳನ್ನೊದಗಿಸಿ ರಕ್ಷಣೆ ಮಾಡಿದನು, ಗುರೂಕ್ತದಿಶೆಯಲ್ಲಿ ನಿತ್ಯಕರ್ಮಾನುಷ್ಠಾನ ಮತ್ತು ಗೋಸೇವೆ ತದ್ವಾರಾ ಗುರುಸೇವೆ, ಇಷ್ಟೇ ಅವನ ದಿನವಿಡಿ ವರ್ಷಾನುಗಟ್ಟಲೇ ಕೆಲಸ ಮತ್ತು ಜೀವನ. ಅಲ್ಲದೇ ಸಾವಿರ ಗೋಸಂಖ್ಯೆ ಯಾವಾಗ ಆದೀತೋ ಗುರುಗಳ ಮನೆಗೆ ಯಾವಾಗ ಹೋದೇನೋ ಎಂಬ ಕಾತರವೂ ಅವನಿಗಿರಲಿಲ್ಲ. ಅತ್ಯಂತ ಶಾಂತ ಮತ್ತು ಸಮಸ್ಥಿತಿಯಲ್ಲಿದ್ದನು. ಆ ಸ್ಥಳವನ್ನು ಬಿಟ್ಟು ಮರಳಿ ಅವನಿಗೆ ಊರಿಗೆ ಹೋಗಲು ಮನಸ್ಸೇ ಬರಲಿಲ್ಲ, ಗುರುಗಳ ಆಜ್ಞೆಯನ್ನು ಮತ್ತು ಅವರಿಗೆ ತಾನು ತಿಳಿಸಿದ ನಿರ್ಧಾರವನ್ನು ದಕ್ಷತೆಯಿಂದ ಹೇಗೆ ಸಾಧಿಸಬೇಕೆಂಬುದೇ ಅವನ ತಲೆಯು ತುಂಬಾ ವಿಚಾರ, ಗುರುಗಳ ಪ್ರಸನ್ನತೆಯೇ ಮುಖ್ಯ ಗುರಿ.

ಲೋಕದಲ್ಲಿ ವಿದ್ಯೆ ಹತ್ತದೇ ಹೋದರೆ, ಹುಡುಗರನ್ನು, ಕೊನೆಯು ಮಾರ್ಗವೆಂದು ತಿಳಿದು ದನಕಾಯುಲು ಕಳಿಸುತ್ತಾರೆ, ಆದರೆ ಈ ಸತ್ಯಕಾಮನ

ಸಂದರ್ಭದಲ್ಲಿ ಹಾಗಿಲ್ಲ, ವಿದ್ಯೆ ಸಂಪಾದನೆಗೂ ದನಕಾಯುವದಕ್ಕೂ ಯಾವ ನೇರ ಸಂಬಂಧವಿಲ್ಲ. ವಿದ್ಯೆ ಕಲಿಯಲು ಬಂದ ಸತ್ಯಕಾಮನಿಗೆ ಗೋರಕ್ಷಣೆ ವಿಧಿಸಿದಾಗ ಅವನು ತನ್ನ ಇಚ್ಛೆ-ಅನಿಚ್ಛೆ, ಇಷ್ಟ-ಅನಿಷ್ಟ ಈ ಸ್ವಾತಂತ್ರ್ಯಗಳನ್ನು ದೂರವಿಟ್ಟು ಗುರುವಿಗೆ ಸಂಪೂರ್ಣ 'ಗುಲಾಮ' ನಾಗಿ ಬಿಟ್ಟನು ಸತ್ಯಕಾಮ. ಅವನ ತಾಯಿಯೂ ಇದೇನು ವಿದ್ಯೆ ಕಲಿಯಲು ಕಳಿಸಿದ ಮಗನನ್ನು ದನ ಕಾಯಲು ಹಾಕಿದರು, ಎಂದು ಆಕೆ ಅಳುಕಲಿಲ್ಲ. ಮನೆಗೆ ಮರಳಿ ಕರೆಯಲಿಲ್ಲ. ಗುರುಕುಲಕ್ಕೆ ಸೇರಿಸಿ ಆಕೆಯೂ ತನ್ನ ಅಧಿಕಾರವನ್ನು ಕಳಕೊಂಡಳು. ಅಂತೆಯೇ ಅನ್ನುತ್ತಾರೆ 'ಗುಲಾಮ', ಗುರುಗಳ ಸೇವೆಮಾಡಿ ಕೃತಾರ್ಥನಾಗಲಿ. ಅವರು ಹೇಗೆ ಅನುಗ್ರಹ ಮಾಡಿದರೆ ಅದೇ ವಿಹಿತ ಎಂದುಕೊಂಡು ಸಮಾಧಾನ ತಾಳಿದಳು.

ಗುರ್ವಾಜ್ಞೆಯನ್ನು ಈಡೇರಿಸುವ ಧ್ಯೇಯ ಸಾಧನೆಯಲ್ಲಿ ನಿರತನಾದ ಸತ್ಯಕಾಮನ ಮನಸ್ಸು ನಿರ್ಮಲ, ಏಕೋಭಾವನೆ, ಕೃತ್ರಿಮ ವಿಚಾರಗಳು ಅವನನ್ನು ಸೋಂಕಲಿಲ್ಲ. ಏನು ಕಷ್ಟದ ಕೆಲಸವೆಂಬ ಜಿಗುಪ್ಸೆ ತಲೆದೋರಲಿಲ್ಲ. ಕಾರ್ಯದಲ್ಲಿ ಬೇಸರವಾಗಲಿ, ಆಲಸ್ಯವಾಗಲಿ ತೋರಲಿಲ್ಲ. ಅಂತೂ ಸತ್ಯಕಾಮನ ಗುರುಭಕ್ತಿ. ಶ್ರದ್ಧೆ, ಮನೋದಾರ್ಢ್ಯ, ಕರ್ತವ್ಯನಿಷ್ಠತೆ, ವಿಧೇಯತೆ, ವಿನಯ, ಗೋವುಗಳಲ್ಲಿ ಸಹಜ ಪ್ರೀತಿ, ಕಾಲವೈಪರೀತ್ಯಗಳನ್ನು ಸಹಿಸುವುದು ಅಥವಾ ದ್ವಂದ್ವ ಸಹಿಷ್ಣುತೆ, ದೇಹಾಭಿಮಾನ ಪರಿತ್ಯಾಗ, ಶಮ, ದಮ, ನಿತ್ಯಕರ್ಮದಲ್ಲಿ ನಿಷ್ಠೆ-ಕಾಲೋಚಿತ ಅನುಷ್ಠಾನ ಇವುಗಳನ್ನು ನೋಡಿ ದೇವತೆಗಳೇ ಕರುಣೆಯಿಂದ ಧರಾತಳಕ್ಕಿಳಿದರು. ಹೀಗಿದೆ ಮನುಷ್ಯನ ಪ್ರಾಮಾಣಿಕತೆಯ ಬೆಲೆ.

ವಾಯುದೇವರು ಋಷಭನಲ್ಲಿ ಪ್ರವಿಷ್ಟನಾಗಿ ಮಾತನಾಡಿದರು. "ಹೇ, ಬಾಲ ಸತ್ಯಕಾಮ, ನಾವೀಗ ಒಂದುಸಾವಿರ ಸಂಖ್ಯೆಗಿಂತ ಹೆಚ್ಚಾಗಿದ್ದೇವೆ. ನೀನು ಗುರುಗಳಿಗೆ ಹೇಳಿದ ನಿರ್ಧಾರವು ನೆರವೇರಿತು. ಇಚ್ಛೆ ಪೂರ್ಣವಾಯಿತು. ನಡೆ ಗುರುಕುಲಕ್ಕೆ ತೆರಳುವಾ. ನಿನ್ನ ಗುರುಭಕ್ತಿಯು ಅತ್ಯಂತ ಉತ್ಕೃಷ್ಟವಾದದ್ದು. ನಿನ್ನ ಮೇಲಿನ ಪ್ರೇಮದಿಂದ ನಿನಗೆ ಒಂದು ಪಾದ ಬ್ರಹ್ಮವಿದ್ಯೆಯನ್ನು ತಿಳಿಸುತ್ತೇನೆ", ಎಂದಿತು. ಅದೇಪ್ರಕಾರ ಋಷಭನು ಸತ್ಯಕಾಮನಿಗೆ ಸಂಜೆ ಅಗ್ನಿಕಾರ್ಯವಾದ ಮೇಲೆ ಬ್ರಹ್ಮಜ್ಞಾನವನ್ನು ಕೊಟ್ಟನು. ಹೀಗೆಯೇ

ಮುಂದಿನ ಒಂದೊಂದು ದಿನಗಳಲ್ಲಿ ಅಗ್ನಿ, ಹಂಸ, ವಾಯುಸ ರೂಪಗಳಲ್ಲಿ ಕ್ರಮ ವಾಗಿ ಅಗ್ನಿ, ಬ್ರಹ್ಮ, ವರುಣ ಪ್ರತಿಯೊಬ್ಬರೂ ಸತ್ಯಕಾಮನಿಗೆ ಪಾದೈಕ ವಿದ್ಯೆಯನ್ನು ಹೇಳಿಕೊಟ್ಟರು. ನಾಲ್ಕುಪಾದ ವಿದ್ಯೆ-ಅಂದರೆ ಪೂರ್ಣ ವಿದ್ಯೆ ದೊರೆಯಿತು.

ನಂತರ ಸಾವಿರಕ್ಕೂ ಮೇಲ್ಪಟ್ಟ ಗೋವುಗಳೊಡನೆ ಸತ್ಯಕಾಮನು ಗುರುಕುಲಕ್ಕೆ ಹಿಂತಿರುಗಿದನು.

ಗೌತಮರಿಗೆ ಗೋವುಗಳೊಡನೆ ಬಂದ ಸತ್ಯಕಾಮನನ್ನು ನೋಡಿ ಸಂತೋಷವಾಯಿತು. ಅವನ ಮುಖದ ಮೇಲಿನ ಬ್ರಹ್ಮವರ್ಚಸ್ಸನ್ನು ಗುರುತಿಸಿ, "ಹೇ, ಸತ್ಯಕಾಮ ನೀನು ಈಗ ಬ್ರಹ್ಮಜ್ಞಾನಿಯಂತೆ ವರ್ಚಸ್ವಿಯಾಗಿದ್ದೀಯೆ. ನಿನಗೆ ಯಾರಾದರೂ ಬ್ರಹ್ಮವಿದ್ಯೆಯನ್ನು ಉಪದೇಶ ಮಾಡಿದರೇನು?" ಎಂದು ಕೇಳಿದರು.

ಸತ್ಯಕಾಮನು ಸತ್ಯವನ್ನೇ ಹೇಳಿದನು. "ಗುರುಗಳೇ, ನನಗೆ ಮನುಷ್ಯೇತರರು (ದೇವತೆಗಳು) ಋಷಭ, ಅಗ್ನಿ, ಹಂಸ ಮತ್ತು ವಾಯುಸ ರೂಪದವರು ವಿದ್ಯೆಯನ್ನು ಹೇಳಿದರು. ಆದರೆ ಅದು ಹೆಚ್ಚು ಪ್ರಯೋಜಕವಲ್ಲ. ಯಾಕೆಂದರೆ, ನನಗೆ ತಾವು ಗುರುಗಳು. ನನಗೆ ತಾವೇ ಬ್ರಹ್ಮವಿದ್ಯೆಯನ್ನುಪದೇಶಿಸಬೇಕೆಂದು ಪ್ರಾರ್ಥಿಸಿದನು."

ದೇವತೆಗಳು ತಿಳಿಸಿದ ವಿದ್ಯೆಯನ್ನೇ ಗುರುಗಳಾದ ಗೌತಮರು ಪ್ರಸನ್ನಚಿತ್ತರಾಗಿ ಸತ್ಯಕಾಮನಿಗೆ ಉಪದೇಶವನ್ನು ಮಾಡಿದರು. ಅವನ ವಿದ್ಯೆ ಸಂಪೂರ್ಣವಾಯಿತೆಂದು ಹೇಳಿ ಅನುಗ್ರಹಿಸಿ, ಅವನನ್ನು ಸ್ವಗೃಹಕ್ಕೆ ಕಳುಹಿಸಿ ಕೊಟ್ಟರು. ಇಂಥ ವಿದ್ಯೆಯಿಂದ ಭಗವತ್ಸಾಕ್ಷಾತ್ಕಾರ ಅಚಿರಕಾಲದಲ್ಲಿಯೇ ಲಭ್ಯ. ಹೀಗೆ ಸತ್ಯಕಾಮನು "ಗುರುವಿನ ಗುಲಾಮನಾಗಿ" ಜನ್ಮ ಸಾರ್ಥಕ ಮಾಡಿಕೊಂಡನು. ಆದ್ದರಿಂದ ಅನ್ನುತ್ತಾರೆ ದಾಸಾರ್ಯರು "ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ".

ಸ್ವಪ್ರಯತ್ನ ಬಲವತ್ತರವೋ ಅಥವಾ ಗುರೂಪದೇಶ ಬಲವತ್ತರವೋ ಎಂಬ ಶಂಕಾವನ್ನು ಈ ಸಂದರ್ಭ ನಿವಾರಿಸಿಕೊಟ್ಟಿತು. "ಗುರುಪ್ರಸಾದೋ

ಬಲವಾನ್‌ನ ತಸ್ಮಾತ್ ಬಲವತ್ತರಂ" ಎಂಬ ಮಾತನ್ನೂ ಅನುಭವಕ್ಕೆ ತಂದು ಕೊಟ್ಟನು ಸತ್ಯಕಾಮ.

ಈ ಸಂದರ್ಭದಲ್ಲಿ ಗರುಡ ಪುರಾಣದ ಇನ್ನೊಂದು ಇಂಥ ವಾಕ್ಯವನ್ನು ಸ್ಮರಿಸಿಕೊಳ್ಳಬೇಕು

**ಮುಕ್ತಿದಾ ಗುರವಾಗೇಕಾ ಸರ್ವಾವಿದ್ಯಾವಿಡಂಬಿನೀ ।**
**ಕಾಷ್ಟಭಾರ ಸಹಸ್ರೇಷು ಏಕೋ ಸಂಜೀವನಂ ಪರಂ ॥ಗಾರುಡೆ॥**

ಗುರುಗಳಿಂದ ಉಪದಿಷ್ಟವಾದ ಒಂದು ಉಪದೇಶ ಮುಕ್ತಿದಾಯಕ-ವಾಗುತ್ತದೆ. ರಾಶಿರಾಶಿ ಗ್ರಂಥಗಳನ್ನೋದಿ ಪಾಂಡಿತ್ಯವನ್ನು ಪಡೆಯಬಹುದು, ಆದರೆ ಅದರ ಪ್ರಯೋಜನ ಅಲ್ಪ. ಹರಿ ದೊರೆಯನು, ಹಾಗೆಯೇ ಅನೇಕ ರಾಶಿಗಟ್ಟಲೆ ಕಟ್ಟಿಗೆಗಳಲ್ಲಿ ಪ್ರಾಣ ಉಳಿಸಲು ನಮಗೆ ಬೇಕಾದದ್ದು ಒಂದು ಸಂಜೀವಿನಿಕಡ್ಡಿ ಮಾತ್ರ, ಉಳಿದ ಕಟ್ಟಿಗೆಯು ಕೇವಲ ಇಂಧನಕ್ಕೆ ಉಪಯೋಗ, ಹೀಗಿದೆ ಗುರುಪದೇಶದ ಪ್ರಾಮುಖ್ಯತೆ.

ಅಲ್ಲರೀ, ಈ ಸತ್ಯಕಾಮನ ಉದಾಹರಣೆ ಒಂದರಿಂದ ಹೇಗೆ ನಿರ್ಧಾರಕ್ಕೆ ಬರುವುದು, ಎಂಬ ಆಕಾಂಕ್ಷೆ ಬಂದರೆ "ಓಂ ಲಿಂಗಭೂಯಸ್ತ್ವಾತ್ತದ್ಧಿ ಬಲೀಯಸ್ತದಪಿ ಓಂ" ಎನ್ನುತ್ತಾರೆ ಸೂತ್ರಕಾರರು, ಇಂಥ ಉದಾಹರಣೆಗಳು ಉಪನಿಷತ್ತಿನಲ್ಲಿ ಬಹಳ ಇವೆ. ಭಾಷ್ಯಕಾರರು ಉಪಕೋಸಲನ (ಛಾ. ಉಪನಿಷತ್ತಿನ) ಉದಾಹರಣೆಯನ್ನೂ ಗ್ರಹಣ ಮಾಡಿದ್ದಾರೆ. ಈಗ ಉಪಕೋಸಲನು ಗುರುಗಳಿಗೆ ಗುಲಾಮನಾಗಿ ವಿದ್ಯೆಯನ್ನು ಹೇಗೆ ಪಡೆದುಕೊಂಡ ಎಂಬುದನ್ನು ಛಾಂದೋಗ್ಯ ಉಪನಿಷತ್ತಿನಿಂದ ತಿಳಿಯುವಾ.

ಉಪಕೋಸಲನೂ ಬಾಲಕನಾಗಿದ್ದಾಗ ಸತ್ಯಕಾಮರ ಗುರುಕುಲಕ್ಕೆ ಸೇರಿದನು, ಅವನು ಸೇರಿದ ಮೇಲೆ ಅವನಿಗೆ ಪ್ರಾಥಮಿಕ ನಿತ್ಯ ಧರ್ಮ ಕರ್ಮಾನುಷ್ಠಾನಗಳನ್ನು ತಿಳಿಸಿದ ಮೇಲೆ, ಅವನಿಗೆ ಒಂದು ಕಾರ್ಯವನ್ನು ವಿಧಿಸಿದರು. ಗುರುಗಳಿಗೆ ಬೇಕಾದ ಅಗ್ನಿಪರಿಚರ್ಯಾದಿ ವೃತ್ತಿ. ಉಪಕೋಸಲನು ಅಗ್ನಿಪರಿಚರ್ಯಾದಿ ವೃತ್ತಿಯನ್ನು ಗುರುಗಳ ಆಜ್ಞೆಯಂತೆ

ಶಿರಸಾವಹಿಸಿ ಸರ್ವಾತ್ಮನಾ ಅವರಧೀನವಾಗಿ, ಎದುರು ಮಾತನಾಡದೆ, ವಿಧೇಯನಾಗಿ, ವಿನೀತನಾಗಿ, ಬ್ರಹ್ಮಚರ್ಯಾಶ್ರಮ ಧರ್ಮನಿರತನಾಗಿ, ಅತಿಶಯ ಭಕ್ತಿ ಶ್ರದ್ಧೆಗಳಿಂದ "ಗುಲಾಮ"ನಂತೆ ಎನ್ನುವಾ ಸೇವೆ ಮಾಡಿದನು.

ಹನ್ನೆರಡು ವರ್ಷ ಮುಗಿದ ನಂತರ, ಅವನ ಜೊತೆ ಗುರುಕುಲಕ್ಕೆ ಸೇರಿದ ಸಹಪಾಠಿಗಳು, ಗುರುಪದೇಶ ಮತ್ತು ಆಜ್ಞೆಯನ್ನು ಪಡೆದು ಸ್ವಗೃಹಗಳಿಗೆ ತೆರಳಿದರು, ಉಪಕೋಸಲನಿಗೆ ಮಾತ್ರ ಇನ್ನೂ ಕೆಲಕಾಲ ಕಳೆದರೂ ಉಪದೇಶವೂ ಸಿಗಲಿಲ್ಲ ಅಪ್ಪಣೆಯೂ ಸಿಗಲಿಲ್ಲ. ಉಪಕೋಸಲನಿಗೆ ಸಮಸ್ಯೆಯೂ ಆಯಿತು ಮತ್ತು ಜಿಗುಪ್ಸೆಯೂ ಆಯಿತು.

ಸತ್ಯಕಾಮನ ಪತ್ನಿ, ಉಪಕೋಸಲನು ಮಾಡಿದ ಸೇವೆಯನ್ನು ಶ್ಲಾಘಿಸಿ ಅವನಿಗೂ ಉಪದೇಶ ಮತ್ತು ಅಪ್ಪಣೆ ಕೊಡಲು ಶಿಫಾರಸ್ಸು ಮಾಡಿದಳು. ಗುರುಗಳು ಈ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದೆ ಕೆಲಸದ ಮೇಲೆ ಗ್ರಾಮಾಂತರಕ್ಕೆ ಹೋಗಿಬಿಟ್ಟರು.

ಉಪಕೋಸಲನಿಗೆ ಜಿಗುಪ್ಸೆಯಾಗಿ ಭೋಜನವನ್ನೇ ತೊರೆದನು. ಗುರುಪತ್ನಿಯು ಸಮಾಧಾನ ಹೇಳಿ ಊಟ ಮಾಡುವಂತೆ ತಿಳಿಸಿದರು,

ಅದೇ ಸಮಯದಲ್ಲಿ ಅಗ್ನಿಗಳು ಮಾತಾಡಿಕೊಂಡವು. ಉಪಕೋಸಲನು ಗುರೂಕ್ತವಾದ ಅಗ್ನಿ ಪರಿಚರ್ಯಾದಿ ಕಾರ್ಯಗಳನ್ನು ಕ್ರಮಬದ್ಧವಾಗಿಯೂ ಶ್ರದ್ಧೆಯಿಂದಲೂ ಮಾಡಿದ್ದಾನೆ, ನಾವೇ ಅವನಿಗೆ ಉಪದೇಶ ಮಾಡುವಾ, ಎಂದು ಗಾರ್ಹಪತ್ಯ, ಅನ್ವಹಾರ್ಯ ಮತ್ತು ಆವಹನೀಯ ಅಗ್ನಿಗಳು ಬ್ರಹ್ಮೋಪದೇಶವನ್ನು ಮಾಡಿ, ಇದನ್ನೇ ನಿಮ್ಮ ಗುರುಗಳು ನಿನಗೆ ಉಪದೇಶ ಮಾಡುತ್ತಾರೆ, ಎಂದುಹೇಳಿದರು.

ಸ್ವಲ್ಪದಿನಗಳಾದ ಮೇಲೆ ಸತ್ಯಕಾಮನು ಸ್ವಗ್ರಾಮಕ್ಕೆ ಮರಳಿ ಬಂದನು. ನೋಡುತ್ತಾನೆ, ಉಪಕೋಸಲನ ಮುಖದಲ್ಲಿ ಬ್ರಹ್ಮ ವಿದ್ಯೆಯ ವರ್ಚಸ್ಸು. "ಉಪಕೋಸಲ ನಿನಗೆ ಯಾರಾದರೂ ಬ್ರಹ್ಮವಿದ್ಯೆಯನ್ನು ಉಪದೇಶ ಮಾಡಿದರೇ" ಎಂದು ಕೇಳಿದ ಸತ್ಯಕಾಮ,

"ನನಗಿನ್ನಾರು ಬ್ರಹ್ಮವಿದ್ಯೆಯನ್ನು ಹೇಳುತ್ತಾರೆ, ಈ ಅಗ್ನಿಗಳೇ ಈಗ ಈ ರೂಪದಲ್ಲಿವೆ. ಆಗ ಮಾತಾನಾಡುತ್ತಿದ್ದವು" ಎಂದ ಉಪಕೋಸಲ. "ಆದರೆ ತಾವು ನನಗೆ ಗುರುಗಳು. ತಾವೇ ನನಗೆ ಬ್ರಹ್ಮವಿದ್ಯೆಯನ್ನುಪದೇಶಿಸ ಬೇಕೆಂದು" ಪ್ರಾರ್ಥಿಸಿಕೊಂಡನು.

ಅದೇರೀತಿ ಸತ್ಯಕಾಮನು ಬ್ರಹ್ಮವಿದ್ಯೆಯನ್ನುಪದೇಶ ಮಾಡಿ, ಅನು-ಗ್ರಹಿಸಿ ಸ್ವಗೃಹಕ್ಕೆ ತೆರಳಲು ಅಪ್ಪಣೆ ಕೊಟ್ಟನು. ಉಪಕೋಸಲನು ಸಹ "ಗುರುಪ್ರಸಾದೋ ಬಲವಾನ್...." ಎಂಬುದನ್ನೇ ದೃಢಿಕರಿಸಿದ.

ಆದ್ದರಿಂದ ಅಧ್ಯಾತ್ಮಪ್ರಪಂಚದಲ್ಲಿ ಸ್ವಪ್ರಯತ್ನವು ಹೆಚ್ಚು ಲಾಭದಾಯಕ ವಲ್ಲ. ಯಾಕೆಂದರೆ ಭಗವತ್ಸಾಕ್ಷಾತ್ಕಾರವು ಅವಿದ್ಯಾಪಟಲರಹಿತರಾದ ಗುರುಗಳ ಉಪದೇಶಾಧೀನ "ಗುರುಪ್ರಸಾದೋ ಬಲವಾನ್".

ಸ್ವಪ್ರಯತ್ನದಿಂದ ಭಗವತ್‌ಸಾಕ್ಷಾತ್ಕಾರವೂ, ಪೋಸ್ಟಲ್ ಅಧ್ಯಯನ ಸಹಾಯದಿಂದ ಈಜು (Swimming) ಕಲಿಯುವುದು ಎರಡೂ ಒಂದೇ. ವ್ಯಕ್ತಿ ಕೆಳಗೆ ಹೋಗುವನೇ ಹೊರತು ಮೇಲೇಳಲಾರ.

ಈ ದೇವರನಾಮದ ಪಲ್ಲವಿ ಅನುಪಲ್ಲವಿಗಳಲ್ಲಿ ಹೇಳಿದ ವಿಷಯವನ್ನೇ ಅಥವಾ ಉಪಕ್ರಮ ಮಾಡಿದ ವಿಷಯವನ್ನೇ ಮುಂದಿನ ಮೂರು ನುಡಿಗಳಲ್ಲಿ ಪುಷ್ಟೀಕರಣ ಮಾಡಿ ಉಪನಿಷತ್ ಹಿನ್ನೆಲೆಯಿಂದ ಸಮರ್ಥನೆ ಮಾಡುತ್ತಾರೆ.

**ಪರಿಪರಿ ಅನೇಕ ಶಾಸ್ತ್ರಗಳೋದಿ**
**ವ್ಯರ್ಥವಾಯಿತು ಭಕುತಿ || ಅ. ಪ. ||**

ಮೇಲಿನ ಉದಾಹರಣೆಗಳಿಂದ ಸ್ವಪ್ರಯತ್ನದಿಂದ ಗ್ರಂಥಗಳನ್ನೋದಿ ಭಗವತ್ಸಾಕ್ಷಾತ್ಕಾರ ಮಾಡಲು ಸಾಧ್ಯವಿಲ್ಲೆಂಬುದೂ ತಿಳಿಯಿತು, ಎಷ್ಟು ಕಾಲ ಅಂಥ ಭಕುತಿ ಮಾಡಿದರೂ ಫಲ ದೊರೆಯದೇ ವ್ಯರ್ಥವಾಗುತ್ತದೆ.

ಮುಂದಿನ ಮೂರು ನುಡಿಗಳು ಹೀಗಿವೆ.

ಆರುಶಾಸ್ತ್ರಗಳೋದಿದರಿಲ್ಲ ।
ಮೂರಾರ್ ಪುರಾಣವ ಪಠಿಸಿದರಿಲ್ಲ ॥
ಸಾರ ಕಥೆಗಳ ಕೇಳಿದರಿಲ್ಲ ।
ಧೀರನಾಗಿ ತಾ ಪೇಳಿದರಿಲ್ಲ ॥ ೧ ॥

ಗುರುಗಳ ಸಹಾಯವಿಲ್ಲದ ಶಾಸ್ತ್ರವಿದ್ಯೆ, ಪಠಣ ಪಾರಾಯಣಾದಿಗಳು ಮತ್ತು ಶ್ರವಣ ಮನನಾದಿಗಳು ವ್ಯರ್ಥಶ್ರಮ, ಸಾರ್ಥಕವಾಗುವುದಿಲ್ಲ. ಆದರೂ ಶ್ರವಣಾದಿಗಳನ್ನು ಸಾಮಾನ್ಯ ಜ್ಞಾನಕ್ಕಾಗಿ ಮಾಡುತ್ತಿರಬೇಕು.

ಕೊರಳೊಳು ಮಾಲೆಯ ಧರಿಸಿದರಿಲ್ಲ ।
ಬೆರಳೊಳು ಜಪಮಣಿ ಎಣಿಸಿದರಿಲ್ಲ ॥
ಮರಳನಾಗಿ ಶಾರೀರಕೆ ಬೂದಿಯ ।
ಒರೆಸಿಕೊಂಡು ತಾ ತಿರುಗಿದರಿಲ್ಲ ॥ ೨ ॥

ತತ್ವವನ್ನರಿಯದೇ, ಗುರುಪದೇಶದಿಂದ ವಿದ್ಯೆ ಪಡೆಯದಿದ್ದವನು, ಭವ್ಯ ನಾಗಿ ಲಾಂಛನಾದಿಗಳನ್ನು ಧರಿಸುವುದು, ಜಪಮಣಿಗಳನ್ನು ಎಣಿಸುವದು ಧರಿಸುವುವು ಇವೆಲ್ಲವೂ ಕೇವಲ ನಾಟಕೀಯವೇ. ತಾತ್ಕಾಲಿಕ ಬೆಲೆ, ಮುಕ್ತಿಗೆ ಸಾಧನವಾಗಲಾರವು.

ನಾರಿಯ ಭೋಗ ಅಳಿಸಿದರಿಲ್ಲ ।
ಶಾರೀರಕೆ ಸುಖವ ಬಿಡಿಸಿದರಿಲ್ಲ ॥
ನಾರದವರದ ಪುರಂದರವಿಠಲನ ।
ಸೇರಿಕೊಂಡು ತಾ ಪಡೆಯುವ ತನಕ ॥ ೩ ॥

ಉಪದೇಶ ವಿಹೀನನಾದವನ, ಜ್ಞಾನ ಭಕ್ತಿಗಳಿಲ್ಲದವನ ವೈರಾಗ್ಯವೂ ಕೂಡ ಹೆಚ್ಚಿಗೆ ಪ್ರಯೋಜನಕ್ಕೆ ಬಾರದು, ಪ್ರಯಾಸಮಾತ್ರ ಆದೀತು. ಗುರೂ ಪದೇಶಯುಕ್ತನಾಗಿ, ಗುರುವಿನ ಗುಲಾಮನಾಗಿ, ಜ್ಞಾನ ಭಕ್ತಿ ವೈರಾಗ್ಯ ಸಾಧನಾದಿಗಳಿಂದ ಶ್ರೀಹರಿಯ-ಪುರಂದರ ವಿಠಲನ ಸಾಕ್ಷಾತ್ಕಾರ ಪಡೆಯಬೇಕು.

ಭಗವತ್ಸಾಕ್ಷಾತ್ಕಾರವಿಲ್ಲದೇ ಮೋಕ್ಷವಿಲ್ಲ, ಭಗವತ್ಸಾಕ್ಷಾತ್ಕಾರವಾದವನು ನಿಯಮೇನ ಮೋಕ್ಷ ಹೊಂದುತ್ತಾನೆ.

ಗುರೂಪದೇಶ ಸಾಧ್ಯ—ಭಗವದ್ದರ್ಶನ—ಮೋಕ್ಷ.

ಭಗವದ್ದರ್ಶನವಾದ ಮೇಲೆ ಮೋಕ್ಷದ ಗೋಡವೆಯೇಕೆ, ಅದು ನಿಯಮೇನ ಲಭ್ಯ. ಆದ್ದರಿಂದ ಪುರಂದರದಾಸರ ಅಮೃತವಾಣಿ—

**"ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ"**

ಅವರು ಗುರೂಪದೇಶದ ಬಗ್ಗೆ ಹೇಳಿದ ಇನ್ನೆರಡು ವಾಕ್ಯವನ್ನು ಸ್ಮರಿಸಿ ಲೇಖನವನ್ನು ಮುಗಿಸುವಾ.

**ಗುರೂಪದೇಶವಿಲ್ಲದ ಜ್ಞಾನ ।**
**ಗುರೂಪದೇಶವಿಲ್ಲದ ಯೋಗ ।**
**ಗುರೂಪದೇಶವಿಲ್ಲದ ಕ್ರಿಯೆಗಳು ।**
**ಉರುಗನ ಉಪದೇಶದಂತೆ ಕಾಣಿರೋ ।**
**ಗುರು ವ್ಯಾಸರಾಯರೇ ಕರುಣದಿಂದೆನಗೆ ।**
**ವರ ಮಹಾಮಂತ್ರಗಳ ಉಪದೇಶಿಸಿದರು ।**
**ಪುರಂದರವಿಠಲನೇ ಪರನೆಂದರುಹಿ ।**
**ದುರಿತ ಭಯವನೆಲ್ಲ ಪರಿಹರಿಸಿದವರಾಗಿ ॥**

ಗುರೂಪದೇಶದ ಬಗ್ಗೆ ಪುರಂದರದಾಸರ ವಿಚಾರ ಸರಣಿ, ಮಹತ್ವ, ಅನುಭವ ಇವುಗಳೆಲ್ಲ ಪ್ರಾಚೀನ ಮಾರ್ಗದಲ್ಲಿಯೇ ಇದ್ದವು. ಬ್ರಹ್ಮಸೂತ್ರ, ಉಪನಿಷತ್ತುಗಳು, ಶಾಸ್ತ್ರಭಾಗಗಳನ್ನು ವಿಚಾರಮಾಡಲಾಗಿ ಶ್ರೀವ್ಯಾಸರಾಜರು ನುಡಿದಮಾತು, ಪುರಂದರದಾಸರ ಕೃತಿಗಳು—ಪುರಂದರೋಪನಿಷತ್ ಎನ್ನುವುದು ಉತ್ಪ್ರೇಕ್ಷೆ ಅಲ್ಲ, ಅನ್ವರ್ಥಕನಾಮ ಯಥಾರ್ಥ. ಭಕ್ತಕೋಟಿಗೆ ಮಾರ್ಗದರ್ಶನ ಮಾಡಿದ್ದಾರೆ, ಮಹಾನುಭಾವರಾದ ಪುರಂದರದಾಸರು. ಅವರ ಚರಣಗಳಿಗೆ ನಮೋನಮೋ ಎನ್ನುತ್ತ ಈ ವಿಚಾರವನ್ನು ಮುಗಿಸುವಾ.

ಹರಿಃ ಓಂ ||

ಶ್ರೀ

# ಶ್ರೀಮದ್ಧರಿಕಥಾಮೃತಸಾರದ

## ಪಲ್ಲವಿ ಮತ್ತು ಆದ್ಯಪದ್ಯ ಅನುವಾದ

**ಹರಿಕಥಾಮೃತಸಾರ ಗುರುಗಳ । ಕರುಣದಿಂದಾಪನಿತು ಪೇಳುವೆ ।**
**ಪರಮ ಭಗವದ್ಭಕ್ತರಿದನಾದರದಿ ಕೇಳುವದು || ಪ ||**

ಹರಿಕಥಾಮೃತಸಾರ :— ಈ ಶೀರ್ಷಿಕೆಯ ಗ್ರಂಥದಲ್ಲಿ ಅಡಕವಾಗ ತಕ್ಕ ವಿಷಯುಗಳನ್ನು ಅಥವಾ ಗ್ರಂಥವನ್ನು, ಗುರುಗಳ ಕರುಣದಿಂದ —ಗುರುಗಳ ಅನುಗ್ರಹದಿಂದ ಅಥವಾ ಕೃಪಾಬಲದಿಂದ, ಆಪನಿತು ಪೇಳುವೆ—ಯಥಾಮತಿ ವರ್ಣಿಸಿ ಹೇಳುವೆ ಅಥವಾ ಗ್ರಂಥರಚನೆ ಮಾಡುವೆ, ಪರಮಭಗವದ್ಭಕ್ತರು ಭಗವಂತನಲ್ಲಿ ಪರಮಭಕ್ತಿ ಉಳ್ಳವರು, ಇದನಾದರದಿ ಕೇಳುವುದು—ಈ ಗ್ರಂಥ ಗತ ವಿಷಯುಗಳನ್ನು ಶ್ರದ್ಧಾಭಕ್ತಿಯಿಂದ ಉಪನ್ಯಾಸರೂಪವಾಗಿ ಕೇಳುವದು ಮತ್ತು ಗ್ರಂಥದ್ವಾರಾ–ಓದುವದು–ಪಠಣಮಾಡುವದು. ಇದು ಸಾಮಾನ್ಯ ತೋರತಕ್ಕ ಅನ್ವಯಾರ್ಥ.

ಶ್ರೀಜಗನ್ನಾಥದಾಸರಿಂದ ವಿರಚಿತವಾದ **"ಹರಿಕಥಾಮೃತಸಾರ"** ವೆಂಬ ಪ್ರಾಕೃತ-ಭಾಷೆಯಂತಿರುವ ಕೃತಿರತ್ನವು ಅನೇಕ ತತ್ವವಿಷಯುಗಳನ್ನು ತಿಳಿಸತಕ್ಕ ಶಾಸ್ತ್ರಗ್ರಂಥವಾದ್ದರಿಂದ ಇದರಲ್ಲಿ ಸರ್ವಪದಗಳೂ ಸಾರ್ಥಕವಾಗಿವೆ. ಅನುಚಿತ ಪದಗಳಿಗಾಗಲಿ ಅಥವಾ ವ್ಯರ್ಥವಿಶೇಷಣಗಳಿಗಾಗಲಿ ಈ ಗ್ರಂಥದಲ್ಲಿ ಅವಕಾಶವೇ ಇಲ್ಲ.

ಪ್ರಕೃತ, ಪಲ್ಲವಿ ಪದ್ಯದಲ್ಲಿ ಗ್ರಂಥಕರ್ತರು ಉಪಯೋಗಿಸಿದ ಎರಡು ವಿಶೇಷಣಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಶ್ರೀಮನ್ಮಧ್ವಶಾಸ್ತ್ರಗ್ರಂಥ ಗಳ ಹಿನ್ನೆಲೆಯಲ್ಲಿ (ಶಾಸ್ತ್ರಗಳೆಂಬ ಸುಲೋಚನವನ್ನು ಉಪಯೋಗಿಸಿ) ನೋಡಲು ಯತ್ನಿಸುವಾ. ಈ ಎರಡು ವಿಶೇಷಣಗಳು ಯಾವವೆಂದರೆ ಮೊದಲ ನೆಯದು "ಗುರುಗಳ ಕರುಣದಿಂದ" ಎರಡನೆಯದು "ಪರಮಭಗವದ್ಭಕ್ತರು".

ಶ್ರೀಮದಾಚಾರ್ಯರ ಗ್ರಂಥಗಳಿಗೆ ಪ್ರಧಾನವ್ಯಾಖ್ಯಾನ ಕರ್ತೃಗಳಾದ ಶ್ರೀಮಜ್ಜಯತೀರ್ಥಮುನಿಗಳು ತಮ್ಮ ಗ್ರಂಥಗಳಲ್ಲಿ ತಿಳಿಸಿದ್ದೇನೆಂದರೆ— ಶ್ರೀಮದಾಚಾರ್ಯರ ಗ್ರಂಥಗಳಿಗೆ ವ್ಯಾಖ್ಯಾನಮಾಡಲು ಕೇವಲ ನ್ಯಾಯ ವ್ಯಾಕರಣ ಸಾಹಿತ್ಯಾದಿ ಪುಸ್ತಕ-ಪಾಂಡಿತ್ಯವಿದ್ದರೆ ಸಾಲದು. ಮುಖ್ಯವಾಗಿ, ಯಥಾರ್ಥತತ್ವಗಳು ತಿಳಿಯಬೇಕಾದರೆ ಗುರುಕಾರುಣ್ಯದ ಅತ್ಯವಶ್ಯಕತೆ ಇದೆ ಎನ್ನುತ್ತಾರೆ.

**ನ ಶಬ್ದಾಬ್ಧೌ ಗಾಢಾ ನ ಚ ನಿಗಮ ಚರ್ಚಾಸು ಚತುರಾ |**
**ನಚ-ನ್ಯಾಯೆ ಪ್ರೌಢಾ ನಚ ವಿದಿತ ವೇದ್ಯಾ ಅಪಿವಯಂ ||**
**ಪರಂ ಶ್ರೀಮತ್ ಪೂರ್ಣಪ್ರಮತಿ ಗುರುಕಾರುಣ್ಯ ಸರಣೀಂ |**
**ಪ್ರಪನ್ನಾ ಮಾನ್ಯಾಸ್ಮಃ ಕಿಮಪಿಚ ವದಂತೋಽಪಿ ಮಹಾತಾಂ ||**

**(ಶ್ರೀಮನ್ಯಾಯಸುಧಾ)**

"ನಮಗೆ ವ್ಯಾಕರಣಶಾಸ್ತ್ರದಲ್ಲಿ ಗಾಢವಾದಜ್ಞಾನವಿಲ್ಲ, ವೇದವೇದಾಂತ ಚರ್ಚೆಗಳಲ್ಲಿ ಚತುರರಲ್ಲ, ನ್ಯಾಯಶಾಸ್ತ್ರದಲ್ಲಿ ಪ್ರೌಢಿಮೆಯಿಲ್ಲ, ಇದಲ್ಲದೇ ಇತರ ಅವಶ್ಯ ತಿಳಿಯಬೇಕಾದ ವಿಷಯಗಳನ್ನೂ ಸಹ ತಿಳಿದಿಲ್ಲ. ಹಾಗಾದರೆ ಯಾವ ಸಾಮರ್ಥ್ಯದಿಂದ ಗ್ರಂಥರಚನೆಮಾಡಲು ಪ್ರವೃತ್ತರಾಗುವಿರಿ ಎಂದರೆ ನಮ್ಮ ಪರಮಗುರುಗಳಾದ ಶ್ರೀಪೂರ್ಣಪ್ರಜ್ಞಮುನಿಗಳ ಕಾರುಣ್ಯವೇ ಪ್ರಪನ್ನರಿಗೆ ಶರಣುಹೊಕ್ಕವರಿಗೆ ಜ್ಞಾನದಾಯಕ—ಸ್ಫೂರ್ತಿದಾಯಕ ಶಕ್ತಿ. ಅವರ ಕರುಣೆ ಪಡೆದ ನಾವು ಯಾವ ಮಾತು ಹೇಳಿದರೂ, ಏನು ಬರೆದರೂ ಅದನ್ನು ಮಹಾತ್ಮರು ಅಂಗೀಕಾರ ಮಾಡುತ್ತಾರೆ. ಮಾನ್ಯತೆ ನಮಗೆ ಸಿಕ್ಕೇಸಿಗುತ್ತದೆ."

ಇದೇಜಾಡಿನಲ್ಲಿ ಸಾಗುತ್ತಿದ್ದಾರೆ ನಮ್ಮ ದಾಸವರ್ಯರು, ಅವರ ಅಭಿಪ್ರಾಯವು ಈ ಕೆಳಗಿನ ಎರಡು ಪದ್ಯಗಳಿಂದ ಸ್ಪಷ್ಟವಾಗುತ್ತದೆ.

**ಬುದ್ಧಿವಿದ್ಯಾಬಲದಿ ಪೇಳಿದ | ಶುದ್ಧ ಕಾವ್ಯವಿದಲ್ಲ ತತ್ವಸು |**
**ಪದ್ಧತಿಗಳನು ತಿಳಿದ ಮಾನವನಲ್ಲ ಬುಧರಿಂದ ||**
**ಮಧ್ವವಲ್ಲಭತಾನೆ ಹೃದಯದೊ | ಳಿದ್ದು ನುಡಿದಂದದಲಿ ನುಡಿದೆನ |**
**ಪದ್ಧಗಳ ನೋಡದಲೆ ಕಿವಿಗೊಟ್ಟಾಲಿಪುದು ಬುಧರು ||**

**(10-18)**

**ವೇದಶಾಸ್ತ್ರ ಪುರಾಣ ಗ್ರಂಥಗ। ಳೋದಿ ಕೇಳ್ದವನಲ್ಲ ಸಂತತ।**
**ಸಾಧುಗಳ ಸಹವಾಸ ಸಲ್ಲಾಪಗಳು ಮೊದಲಿಲ್ಲ ॥**
**ಮೋದ ತೀರ್ಥಾರ್ಯರ ಮತಾನುಗ। ರಾದವರ ಕರುಣದಲಿ ಪೇಳ್ದೆರ।**
**ಮಾಧವ ಜಗನ್ನಾಥ ವಿಟ್ಠಲ ತಿಳಿಸಿದುದರೊಳಗೆ ॥**

**(17–37)**

ಈ ಮೇಲಿನ ಎರಡು ಪದ್ಯಗಳಿಂದ ಶ್ರೀ ಟೀಕಾಚಾರ್ಯರ ಅಭಿಪ್ರಾಯವನ್ನೇ ಶ್ರೀಜಗನ್ನಾಥದಾಸರು ವ್ಯಕ್ತಪಡಿಸಿದ್ದಾರೆ ಎಂದು ತಿಳಿಯುತ್ತದೆ. "ಶ್ರೀಮದಾಚಾರ್ಯರ ಮತಾನುಗರಾದವರ ಕರುಣದಲಿ ಪೇಳ್ದೆ" ಎನ್ನುತ್ತಾರೆ. ಶ್ರೀಮದಾಚಾರ್ಯರ ತತ್ವಶಾಸ್ತ್ರವೇತ್ತ-ಗುರುಪರಂಪರಾ, ಅವರ ಸಾಕ್ಷಾತ್ ಗುರುಗಳಾದ ಶ್ರೀಗೋಪಾಲದಾಸರವರೆಗೆ ಇದ್ದವರ ಕಾರುಣ್ಯ ಬಲವೇ ಈ ಗ್ರಂಥದ ರಚನೆಗೆ ಮತ್ತು ನಿರ್ವಿಘ್ನಪರಿಸಮಾಪ್ತಿಗೆ ಕಾರಣವೆನ್ನುತ್ತಾರೆ.

ಆದ್ದರಿಂದ ಪಲ್ಲವಿಯಲ್ಲಿ "ಗುರುಗಳ ಕರುಣದಿಂದಾಪನಿತು ಪೇಳುವೆ" ಎಂಬ ಪದವದೆಷ್ಟು ಅರ್ಥದಿಂದ ತುಂಬಿ ಸೂಸುತ್ತದೆ. ಗುರುಗಳಲ್ಲಿದ್ದ ಭಕ್ತಿ ಭಾವವನ್ನು ಹೊರಹೊಮ್ಮಿಸಿದೆ. ಉಳಿದ ಎಲ್ಲ ಸಹಕಾರಿ ಕಾರಣಗಳಿದ್ದಾಗ್ಯೂ, ಅಥವಾ ಪುಸ್ತಕಪಾಂಡಿತ್ಯವಿದ್ದಾಗ್ಯೂ ಗುರುಕಾರುಣ್ಯವಿಲ್ಲದೇ ಹೋದರೆ ಗ್ರಂಥ ರಚನೆಗೆ ಪ್ರವೃತ್ತಿಯಾಗಲಿ, ವಿಷಯಸ್ಫೂರ್ತಿಯಾಗಲಿ, ನಿರ್ವಿಘ್ನಪರಿಸಮಾಪ್ತಿಯಾಗಲಿ ಒದಗಲಿಕ್ಕಿಲ್ಲ. ಪ್ರಾಯಶಃ ಮಾಧ್ವಸಂಪ್ರದಾಯದ ಎಲ್ಲ ಗ್ರಂಥ ಕರ್ತರೂ ಸಾಗಿರುವದು ಇದೇ ರಾಜಸರಣಿ. "ಗುರುಗಳ ಕರುಣದಿಂದ" ಎಂಬ ವಿಶೇಷಣದ ಮಹತ್ವಔಚಿತ್ಯಗಳು ತಿಳಿದಮೇಲೆ ನಾವೂ ಸಹ ಅದಕ್ಕೇ ಪ್ರಯತ್ನ ಮಾಡಬೇಕು.

ಇದು ಶಾಸ್ತ್ರಗ್ರಂಥವಾದ್ದರಿಂದ ಶ್ರೀ ಜಗನ್ನಾಥದಾಸಾರ್ಯರು ಅನುಬಂಧ ಚತುಷ್ಟಯವನ್ನು ಎಂದರೆ–ವಿಷಯ, ಅಧಿಕಾರಿ, ಸಂಬಂಧ ಮತ್ತು ಫಲವನ್ನು ಇಲ್ಲಿಯೇ ನಿರ್ದೇಶನ ಮಾಡುತ್ತಾರೆ.

(1) **ವಿಷಯ :—** ಹರಿಕಥಾಮೃತಸಾರ.

ಇಲ್ಲಿ ಸಾರ ಎಂದಮಾತ್ರಕ್ಕೆ ಉಳಿದುದೆಲ್ಲ ಅಸಾರವೆಂದು ಗ್ರಹಿಸಬಾರದು. ಸಾರ–ಅಸಾರ ಅಲ್ಲ. ಸಾರ–ವಿಸ್ತಾರ ಎಂದು ತಿಳಿಯಬೇಕು. ಬಹುವಿಸ್ತಾರ ದಿಂದ ತೆಗೆದಸಾರ. ಸಾರವನ್ನು ಯಾಕೆ ತೆಗೆಯಬೇಕು, ಹೇಳಬೇಕು ಅಥವಾ ಗ್ರಂಥ ಬರೆಯಬೇಕು ಎಂದರೆ ಅಧಿಕಾರಿಗಳಿಗೆ ವಿಸ್ತಾರವನ್ನು ಓದಲು–ಗ್ರಹಿಸಲು ಬುದ್ಧಿ ಶಕ್ತಿಯೂ ಸಾಲದು. ಹೋಗಲಿ, ಸಾವಕಾಶವಾಗಿ ಓದುತ್ತಿರೋಣ ಎಂದರೆ ವೇಳೆಯೂ ಇಲ್ಲ. ಅಂದರೆ ದೀರ್ಘಾಯುವಿಲ್ಲ. ಈ ಸಂದರ್ಭದಲ್ಲಿ ಸಾರಕ್ಕೇ ಶರಣು ಹೋಗಬೇಕೆಂದು ಕೆಳಗಿನ ಶ್ಲೋಕದಿಂದ ತಿಳಿಯುತ್ತದೆ.

**ಅನಂತಶಾಸ್ತ್ರಂ ಬಹುವೇದಿತವ್ಯಂ ।**
**ಅಲ್ಪಶ್ಚಕಾಲೋ ಬಹವಶ್ಚವಿಘ್ನಾಃ ॥**
**ಯತ್ಸಾರಭೂತಂ ತದುಪಾಸಿತವ್ಯಂ ।**
**ಹಂಸೋಯಥಾಕ್ಷೀರ ಮಿವಾಂಬು ಮಿಶ್ರಂ ॥**

ಅಧ್ಯಯನ ಮಾಡತಕ್ಕ ಶಾಸ್ತ್ರಗಳು ಅನಂತ ಸಂಖ್ಯಾತವಾಗಿವೆ. ತಿಳಿಯುತಕ್ಕದು ಬಹಳವಿದೆ. ಉಪಯುಕ್ತ ಕಾಲವಿರುವದು ಅಲ್ಪ. ಆ ಅಲ್ಪಕಾಲ-ದಲ್ಲಿಯೂ ಇಂಥ ಶ್ರೇಯಸಾಧನ ಕಾರ್ಯಗಳಿಗೆ ವಿಘ್ನಬಾಹುಲ್ಯ. ಆದ್ದರಿಂದ ಸಾರಭಾಗವನ್ನು ಗ್ರಹಿಸಲು ಪ್ರಯತ್ನಶೀಲರಾಗಬೇಕು. ಕ್ಷೀರ-ನೀರ ಮಿಶ್ರದಿಂದ ಹಂಸಪಕ್ಷಿಯು ಕ್ಷೀರವನ್ನೇ ಗ್ರಹಣಮಾಡುವಂತೆ ಅಲ್ಪಕಾಲದಲ್ಲಿಯೇ ಶ್ರೇಯಃಸಾಧನೆ ಮಾಡಲಿಚ್ಛಿಸುವವನು ಸಾರಭೂತವಾದ ಗ್ರಂಥಗಳಿಗೇ ಶರಣು ಹೋಗಬೇಕು.

ಈ ಪ್ರಾಜ್ಞರ ಉಕ್ತಿಗನುಸಾರವಾಗಿ "ಹರಿಕಥಾಮೃತ-ಸಾರ" ಗ್ರಂಥರಚಿತವಾಗಿರಬಹುದು. ಈ ಗ್ರಂಥದಲ್ಲಿ ಪ್ರತಿಪಾದ್ಯ ಶ್ರೀಹರಿ, ಅವನ ಕಥಾ-ಮಹಿಮಾ ಅದೇ ಅಮೃತ-ಸ್ವರೂಪ, ಬಹಳ ವಿಸ್ತಾರವಿರುವದರಿಂದ ಅದರ ಸಾರವನ್ನೇ ತೆಗೆದು ಇಲ್ಲಿ ಹೇಳಲ್ಪಟ್ಟಿದೆ.

(2) **ಅಧಿಕಾರಿ :—** ಪರಮಭಗವದ್ಭಕ್ತರು. (ಇದು ಎರಡನೆಯ ವಿಶೇಷಣ) ಯಾರಿರಬಹುದು ಇವರು !

(i) ಭಗವಂತನಲ್ಲಿ ಪರಮ-ಉತ್ಕೃಷ್ಟ ಭಕ್ತಿಮಾಡುವವರೇ ಪರಮ ಭಗದ್ಭಕ್ತರು.

ಒಂದು ಸಂದರ್ಭವನ್ನು ಹೀಗೆ ಊಹಿಸುವಾ. ಒಂದು ಸಭಾಮಂದಿರದ ಹೊರಗೆ ಈ ರೀತಿಯ ಪ್ರಕಟಣೆ, ಏನೆಂದರೆ—

ಉಪನ್ಯಾಸ : ಶ್ರೀಜಗನ್ನಾಥದಾಸರಿಂದ

ವಿಷಯ : ಹರಿಕಥಾಮೃತಸಾರ

ಸುಸ್ವಾಗತ : ಪರಮಭಗವದ್ಭಕ್ತರಿಗೆ

ಈ ಪ್ರಕಟಣೆಯನ್ನು ಓದಿ ಉಪನ್ಯಾಸ ಶ್ರವಣ ಮಾಡಲುಹೋದ ವ್ಯಕ್ತಿಗಳು ಯಾರು ? ಯಾರೂ ಹೋಗಲೇ ಇಲ್ಲ. ಯಾಕೆಂದರೆ ಹೋಗತಕ್ಕವರು ತಾವು ಪರಮ ಭಗದ್ಭಕ್ತರೆಂದು ತಿಳಿಯಬೇಕಲ್ಲವೇ. ಆದರೆ ನೈಜಭಗದ್ಭಕ್ತರು ಯಾರೂ ತಾವು ಅಂಥ ಶ್ರೇಷ್ಠಭಗವದ್ಭಕ್ತರೆಂಬ ಅಹಂಮತಿ ಅಥವಾ ತಾವು ದೊಡ್ಡವರೆಂಬ ಭಾವನೆ ಇರುವುದಿಲ್ಲ. ಇನ್ನು ಕೇವಲ ಸಾಧಾರಣ ಭಗವದ್ಭಕ್ತರಾದರೆ ಉಪನ್ಯಾಸಕ್ಕೆ ಪ್ರವೇಶವಿಲ್ಲ. ಆಭಾಸ.

ಹರಿಕಥಾಮೃತಸಾರ ಓದಲಿಚ್ಛಿಸುವ, ಶ್ರವಣಮಾಡಲಿಚ್ಛಿಸುವ ಪ್ರತಿಯೊಬ್ಬ ವ್ಯಕ್ತಿಯೂ ಮೊದಲಿನ ಪಲ್ಲವಿ ಪದ್ಯ ಓದಿದಮೇಲೆ ತಾನು ಅಧಿಕಾರಿಯೋ ಅಥವಾ ಅನಧಿಕಾರಿಯೋ ಎಂಬ ಪ್ರಶ್ನೆ ಒಂದಿಲ್ಲೊಂದು ಸಲ ವಿಚಾರ ಪಥಕ್ಕೆ ಬರುತ್ತದೆ.

ಕೊನೆಗೆ ನಾವು ಹೀಗೆ ತಿಳಿಯಬೇಕಾಗುತ್ತದೆ. ಯದ್ಯಪಿ ಪರಮ ಭಗವದ್ಭಕ್ತರೇ ಮುಖ್ಯಾಧಿಕಾರಿಗಳಾದರೂ ಈಷತ್ ಅಧಿಕಾರ ಭಗದ್ಭಕ್ತರಿಗೂ ಉಂಟು. ಆದ್ದರಿಂದ ಶ್ರವಣ ಪಠಣಾದಿಗಳನ್ನು ಮಾಡುವಾ.

(ii) ಅಥವಾ ಶ್ರೀಮಜ್ಜಯತೀರ್ಥಮುನಿಗಳು "ವಿಷ್ಣು ತತ್ವನಿರ್ಣಯ ಟೀಕಾದಲ್ಲಿ" ಹೇಳಿದ ವಾಕ್ಯವನ್ನು ಸ್ಮರಿಸುವಾ.

**"ಸಂತಿಹಿ ತಥಾವಿಧಾಪುರುಷಾಃ ಏಹಿ ಸುಖಾವಾಪ್ತ್ಯಾದಿಕಂ ನ ಪ್ರಾರ್ಥ್ಯಂ ಕಿಂತು ಭಗವನ್ನಾರಾಯಣಸ್ಯ ಸಂವಿದೇವ".**

ಜಗತ್ತಿನಲ್ಲಿ ಕೆಲವು ಜನರಿದ್ದಾರೆ. ಅವರಿಗೆ ಕೇವಲ ಲೌಕಿಕ ಸುಖಾದಿಗಳನ್ನು ಪಡೆಯುವದೇ ಮುಖ್ಯಧ್ಯೇಯವಲ್ಲ. ಆದರೆ ಶ್ರೀಮನ್ನಾರಾಯಣನ ಜ್ಞಾನಪಡೆಯುವದಕ್ಕೇ—ಅವನಲ್ಲಿ ಭಕ್ತಿಗೇ—ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ. ಅವರಿಗೆ ಈ ವಿಷಯದಲ್ಲಿಯೇ ಪರಮಆಸಕ್ತಿ, ಅವರೇ ಈ ಅಧ್ಯಾತ್ಮ ವಿಷಯಕ್ಕೆ ಅಧಿಕಾರಿಗಳು.

(iii) ಇಲ್ಲವೇ, ಶ್ರೀಕೃಷ್ಣಪರಮಾತ್ಮನು ಗೀತೆಯಲ್ಲಿ ನಿರ್ದೇಶನಮಾಡಿದ ಅಧಿಕಾರಿಗಳನ್ನು ನೋಡಿದರೆ ನಮ್ಮ ದಾಸವರ್ಯರೂ ಅದೇ ಜಾಡಿನಲ್ಲಿ ಹೋಗಿದ್ದಾರೆ ಎಂದು ತಿಳಿಯುತ್ತದೆ.

**ಇದಂತೇ ನಾತಪಸ್ಕಾಯ ನಾ ಭಕ್ತಾಯ ಕದಾಚನ ।**
**ನಚಾಶುಶ್ರೂಷವೇ ವಾಚ್ಯಂ ನ ಚ**
**ಮಾಂಯೋಭ್ಯಸೂಯತಿ ॥** **(18-67)**
**ಯ ಇದಂ ಪರಮಂಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।**
**ಭಕ್ತಿಂಮಯಿಪರಾಂಕೃತ್ವಾಮಾಮೇವೈಷ್ಯತ್ಯಸಂಶಯಃ ॥**
**(18-68)** (ಗೀತಾ)

"ಈ ಗೀತಾದಲ್ಲಿ ನಿರೂಪಿತವಾದ ವಿಷಯವನ್ನು, ತಪೋಹೀನರಿಗೆ, ಭಕ್ತಿಹೀನರಿಗೆ, ಗುರುಹಿರಿಯರ ಶುಶ್ರೂಷೆಯಲ್ಲಿ ಆಸಕ್ತಿ ಇಲ್ಲದವರಿಗೆ ಮತ್ತು ಪರಮಾತ್ಮನನ್ನು ದ್ವೇಷಿಸುವವರಿಗೆ ಉಪದೇಶಿಸಕೂಡದು".

"ಈ ಪರಮಗುಹ್ಯವಾದ-ರಹಸ್ಯವಾದ ಅಧ್ಯಾತ್ಮವಿದ್ಯೆಯನ್ನು ನನ್ನ ಭಕ್ತರಿಗೆ ಉಪದೇಶಮಾಡಬೇಕು. ಅವರು ಈ ಗ್ರಂಥಸ್ಥ ವಿಷಯವನ್ನು ಶ್ರವಣ ಮನನಮಾಡಿ ಪರಮಾತ್ಮನಲ್ಲಿ ಪರಮ-ಉತ್ಕೃಷ್ಟವಾದ ಭಕ್ತಿಯನ್ನು ಮಾಡಿ ನನ್ನನ್ನೇ ಹೊಂದುತ್ತಾರೆ".

ಶ್ರೀ ಜಗನ್ನಾಥದಾಸರೂ ಸಹ ತಮ್ಮ ಉತ್ತರಗ್ರಂಥದಲ್ಲಿ ಅಧಿಕಾರಿಗಳ ವಿಷಯದಲ್ಲಿ ವಿಶೇಷ ಸ್ಪಷ್ಟೀಕರಣ ಮಾಡಿದ್ದಾರೆ. ಶ್ರೀಕೃಷ್ಣಪರಮಾತ್ಮ ತೋರಿಸಿದ ರಾಜಮಾರ್ಗದಲ್ಲಿಯೇ ದಾಸವರ್ಯರ ನಡೆ. ಈಶನ ಹಿಂದೆಯೇ ದಾಸರು. ಭಗವಂತನಲ್ಲಿ ಉತ್ಕೃಷ್ಟ–ಪರಮಭಕ್ತಿಯನ್ನು ಪಡೆದವರಿಗೆ ಅಂದರೆ ಪರಮ ಭಗವದ್ಭಕ್ತರಿಗೆ ಇದನ್ನು ತಿಳಿಸಬೇಕು. ಅನಧಿಕಾರಿಗಳಿಗೆ *ಹೇಳಕೂಡ* ದೆಂದು ಸಾರಿರುತ್ತಾರೆ.

ಅಥವಾ ಭಗವದ್ಭಕ್ತಸಾಮಾನ್ಯರಿಗೂ ಇದರಲ್ಲಿ ಕಿಂಚಿತ್ ಅಧಿಕಾರಉಂಟು. ಅವರು (ಈ ಗ್ರಂಥವನ್ನು) "ಇದನ್ನು ಪರಮಾದರದಿ ಕೇಳುವದು". "ಪರಮ" ಎಂಬ ವಿಶೇಷಣವನ್ನು "ಆದರ"ಕ್ಕೆ ಹೊಂದಿಸಿಕೊಳ್ಳುವಾ. ಆಗ ಮೇಲೆಹೇಳಿದ ಶ್ರೀಕೃಷ್ಣನ ವಾಕ್ಯದಂತೆ "ಭಕ್ತಿಂ ಮಯಿ ಪರಾಂಕೃತ್ವಾ" ಕಾಲಾಂತರದಲ್ಲಿ ನನ್ನಲ್ಲಿ ಪರಮ ಭಕ್ತಿಮಾಡಿ ಪರಮಭಗವದ್ಭಕ್ತರಾಗಿ "ಮಾಮೇವೈಷ್ಯತ್ಯಸಂಶಯಃ" ನನ್ನನ್ನೇ ಹೊಂದುತ್ತಾರೆ ಇದರಲ್ಲಿ ಏನು ಸಂದೇಹವಿಲ್ಲ.

"ಪರಮ ಶಬ್ದಃ ಅನಧಿಕಾರಿಣಾಂ ವ್ಯಾವೃತ್ಯರ್ಥಂ" ಪರಮಶಬ್ದವು ಅನಧಿ ಕಾರಿಗಳನ್ನು ಬೇರ್ಪಡಿಸಲು ಸಹ ಉಪಯುಕ್ತವಾಗಿದೆ ಎಂದು ಹರಿಕಥಾಮೃತ ಸಾರದ ಪದ್ಯಗಳಿಂದಲೇ ವ್ಯಕ್ತವಾಗುತ್ತದೆ. ಅಧಿಕಾರಿ–ಅನಧಿಕಾರಿಗಳ ವಿಷಯು ವನ್ನು ಮರೆಯದಿರುವಂತೆ ಗ್ರಂಥಕರ್ತರು 24ನೆಯ ಸಂಧಿಯವರೆಗೂ ಒತ್ತಿಒತ್ತಿ ಸ್ಪಷ್ಟೀಕರಿಸಿದ್ದಾರೆ. ಈ ಕೆಳಗಿನ ಒಂಭತ್ತು ಪದ್ಯಗಳನ್ನು ಸಾವಧಾನವಾಗಿ ನೋಡುವಾ.

**ಶ್ರವಣ ಮನಕಾನಂದ ನೀವದು। ಭವಜನಿತದುಃಖಗಳ ಕಳೆವದು।**
**ವಿವಿಧ ಭೋಗಗಳಿಹಪರಂಗಳಲಿತ್ತು ಸಲಹುವದು ॥**

**ಭುವನ ಪಾವನವೆನಿಪ ಲಕ್ಷ್ಮೀ। ಧವನ ಮಂಗಳ ಕಥೆಯು ಪರಮೋ। ತ್ಸವದಿ ಕಿವಿಗೊಟ್ಟಾಲಿಪುದು ಭೂಸುರರು ದಿನದಿನದಿ ॥**

**(2–1)**

ಭೂಸುರರು-ಭಗವದ್ಭಕ್ತರು, ಪರಮೋತ್ಸವದಿ-ಪರಮಾದರದಿ, ಕಿವಿಗೊಟ್ಟಾಲಿಪುದು-ಶ್ರವಣ ಮನನ ಮಾಡುವುದು.

"ಹರಿಕಥಾಮೃತಸಾರ ಗುರುಗಳ ಕರುಣದಿಂದಾಪನಿತು ಪೇಳುವೆ...." ಎಂಬ ಪಲ್ಲವಿಯು ಪ್ರತಿಸಂಧಿಯಲ್ಲಿಯೂ ಪ್ರಾರಂಭದ ಪದ್ಯವಾಗಿದೆ. ಅಧಿಕಾರಿಗಳು, ಪಾಠಕರು, ಪ್ರವಚನಕಾರರು ಮರೆಯಬಾರದೆಂದು ದಾಸಾರ್ಯರು 24ನೆಯ ಸಂಧಿಯವರಗೆ ಯಾರು ಈ ಅಮೃತಸಾರ ಭಾಗಿಗಳು ಯಾರು ಅಲ್ಲ, ಯಾರು ಅರ್ಹರು ಯಾರು ಅನರ್ಹರು ಎಂಬ ವಿಷಯ ಸಾಕಷ್ಟು ತಿಳಿಸಿದ್ದಾರೆ. ಈ ಪದ್ಯಗಳನ್ನು ಅವಧಾನ ಮಾಡುವಾ. ದಾಸರ ಅಭಿಪ್ರಾಯ ಸ್ಪಷ್ಟವಾಗುವದು.

**ಕಬ್ಬಿನೊಳಗಿಹ ರಸವಿದಂತನಿ । ಗಬ್ಬಬಲ್ಲದೆ ಭಾಗ್ಯಯೌವನ ।**
**ಮಬ್ಬಿನಲಿ ಮೈಮರೆದವಗೆ ಈ ಹರಿಹರಿಕಥಾಮೃತವು ॥**
**ಲಭ್ಯವಾಗದು ಹರಿಪದಾಬ್ಜದಿ । ಹಬ್ಬಿದತಿಸದ್ಭಕ್ತಿರಸವುಂ ।**
**ಡುಬ್ಬಿಕೊಬ್ಬಿಸುಖಾಬ್ಧಿಯೊಳಗಾಡುವವಗಲ್ಲದಲೇ ॥**
**(10-19)**

ಕಬ್ಬಿನೊಳಗಿಹ ರಸ ಪಡೆಯುವುದು ಸ್ವಲ್ಪ ಶ್ರಮಸಾಧ್ಯ. ಹಾಗೆಯೇ ಈ ಅಮೃತಸಾರದ ಸವಿಯನ್ನು ಅನುಭವಿಸುವದು ಸ್ವಲ್ಪ ಶ್ರಮಸಾಧ್ಯ. ಆದರೆ ಯೌವನ ಐಶ್ವರ್ಯದ ಮಬ್ಬಿನಲ್ಲಿ ಇರುವವನಿಗೆ ಹರಿಯೂ ಬೇಡ, ಹರಿಕಥಾಮೃತವೂ ಸುತರಾಂ ಬೇಡ. ಪ್ರತಿಪಾದ್ಯವಸ್ತುವೇ ಬೇಡವೆಂದ ಮೇಲೆ ಈ ಪ್ರತಿಪಾದಕ ಗ್ರಂಥದಿಂದೇನು. ಸ್ವಲ್ಪ ಶ್ರಮಪಟ್ಟು ಅಮೃತಸಾರವನ್ನು ಪಡೆಯುವವರು ಯಾರು ಅಂದರೆ ಹರಿಯ ಪಾದರವಿಂದದಲ್ಲಿ ಭಕ್ತಿಯುಳ್ಳವರು. ಪ್ರತಿಪಾದ್ಯನಲ್ಲಿ ಭಕ್ತಿಯುಳ್ಳವರು. ಪ್ರತಿಪಾದಕ ಗ್ರಂಥವಾದ ಹರಿಕಥಾಮೃತ ಸಾರದಿಂದ ರಸವನ್ನು ತೆಗೆದು ಅಮೃತ ಭಾಗಿಗಳಾಗುತ್ತಾರೆ. ಅವರು ರಸವನ್ನನುಭವಿಸಿ, ಉಬ್ಬಿ-ಹರ್ಷೋನ್ಮಾದಾವಸ್ಥೆಗೆ ಬಂದು, ಕೊಬ್ಬಿ ಈ ಭಾಗ್ಯವನ್ನು ಪಡೆದ ತಾವೇ ಧನ್ಯರೆಂದುಕೊಂಡು ಸುಖ ಸಾಗರದಲ್ಲಿ ಇರುವವರಿಗೆ ಈ ಹರಿ ಹರಿಕಥಾಮೃತಸಾರ ಲಭ್ಯ.

ಖಗವರಧ್ವಜ ಸಂಘ್ರಿ ಭಕುತಿಯು । ಬಗೆಯ ನರಿಯದ
ಮಾನವರಿಗಿದು ।
ಒಗಟನಂದದಿ ತೋರುತಿಪ್ಪದು ಎಲ್ಲಕಾಲದಲಿ ॥
ತ್ರಿಗುಣ ವರ್ಜಿತ ನಮಲಗುಣಗಳ । ಪೊಗಳಿಹಿಗ್ಗುವ
ಭಾಗವತರಿಗೆ ।
ಮಿಗೆಭಕುತಿವಿಜ್ಞಾನ ಸುಖವಿತ್ತವರ ರಕ್ಷಿಪುದು ॥ (10-20)

ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಭಕ್ತಿಯ ಪದ್ಧತಿಗಳನ್ನರಿಯದವರಿಗೆ (ನವವಿಧ ಭಕ್ತಿಗಳನ್ನರಿಯದವರಿಗೆ) ಹರಿಕಥಾಮೃತಸಾರವು ಒಂದು ಒಗಟೇ. "ನಾ ಭಕ್ತಾಯ ಕದಾಚನ........".

ಶ್ರೀಹರಿಯ ಮಹಿಮಾ ಶ್ರವಣಮನನಾದಿಗಳಿಂದ ಅತಿಶಯ ಸಂತೋಷ ಪಡುವ ಭಾಗವತರಿಗೆ ಈ ಗ್ರಂಥ ಭಕ್ತಿ, ಜ್ಞಾನ, ಆನಂದವನ್ನು ಇತೋಪ್ಯತಿಶಯ ಅಭಿವೃದ್ಧಿ ಮಾಡಿ ರಕ್ಷಣೆ ಮಾಡುತ್ತದೆ.

ಪರಮ ತತ್ವರಹಸ್ಯವಿದು ಭೂ । ಸುರರು ಕೇಳ್ವದು
ಸಾದರದಿ ನಿ-।
ಷ್ಠುರಿಗಳಿಗೆ ಮೂಢರಿಗೆ ಪಂಡಿತ ಮಾನಿ ಪಿಶುನರಿಗೆ ॥
ಅರಸಿಕರಿಗಿದು ಪೇಳ್ವದಲ್ಲನ । ವರತ ಭಗವತ್ಪಾದಯುಗಳಾಂ-।
ಬುರುಹ ಮಧುಕರರೆನಿಸುವರಿಗಿದನರುಪು ಮೋದದಲಿ ॥
(10-21)

ಹರಿಕಥಾಮೃತಸಾರವು ಪರಮ ತತ್ವರಹಸ್ಯಗಳನ್ನೊಳಗೊಂಡಿದೆ. ಭೂಸುರರು, ಭಗವದ್ಭಕ್ತರು, ಸಾದರದಿ ಪರಮಾದರದಿಂದ ಶ್ರವಣ ಮನನ ಮಾಡಬೇಕು. ಭಗವಂತನ ಪಾದಕಮಲಗಳಲ್ಲಿ ದುಂಬಿಯಂತಿರತಕ್ಕವರಿಗೆ ಈ ಗ್ರಂಥ ಪ್ರತಿಪಾದಿತ ವಿಷಯಗಳನ್ನು ಹೇಳಿರಿ. "ಮದ್ಭಕ್ತೇಷ್ವಭಿಧಾಸ್ಯತಿ".

ಆದರೆ ನಿಷ್ಠುರಿಗಳಿಗೆ, ಮೂಢರಿಗೆ, ಪಂಡಿತಮಾನಿಗಳಿಗೆ, ಪಂಡಿತರೆಂದು ತಿಳಿದು ವೃಥಾ ಹೆಮ್ಮೆಪಡುವವರಿಗೆ, ಚಾಡಿಕೋರರಿಗೆ ಎಂದೂ ಹೇಳಬೇಡಿರಿ.

ಅವರಿಗೆ ಇದರಲ್ಲಿ ಎಂದೂ ಶ್ರದ್ಧಾದಿಗಳು ಬರುವದಿಲ್ಲ. ಶ್ರಮವ್ಯರ್ಥ. "ನ ಚ ಮಾಂ ಯೋಭ್ಯಸೂಯತಿ".

**ಲೋಕವಾರ್ತೆ ಇದಲ್ಲ ಪರಲೋ । ಕೈಕನಾಥನ ವಾರ್ತೆ ಕೇಳ್ವಡೆ ।**
**ಕಾಕು ಮನುಜರಿಗಿದು ಸಮರ್ಪಕವಾಗಿ ಸೊಗಯಿಸದು ॥**
**ಕೋಕನದ ಪರಿಮಳವು ಷಟ್ಪದ । ಸ್ವೀಕರಿಸುವಂದದಲಿ ಜಲಚರ ।**
**ಭೇಕಬಲ್ಲದೆ ಇದರ ರಸಹರಿ ಭಕುತಗಲ್ಲದಲೇ ॥ (10-22)**

ಪರಲೋಕೈಕನಾಥನ ವಾರ್ತೆ ಹರಿಭಕುತನಿಗೆ ಮಾತ್ರ. ಕಾಕುಮನುಜರಿಗೆ ಲೋಕವಾರ್ತೆಯಲ್ಲಿಯೇ ತೃಪ್ತಿ. ಸುಮನಗಳ ಮಧುಪರಿಮಳಗಳನ್ನು ದುಂಬಿ ಮಾತ್ರ ಗ್ರಹಿಸಬಲ್ಲದು. ಕಪ್ಪೆ ಪರಿಮಳವನ್ನಾಗಲಿ ಮಧುವನ್ನಾಗಲಿ ಸಂಗ್ರಹಿಸಲಾರದು.

**ಹರಿಕಥಾಮೃತಸಾರವಿದು ಸಂ । ತರುಸದಾಚಿತ್ತೈಸುವದು ನಿ ।**
**ಷ್ಠುರಿಗಳಿಗೆ ಪಿಶುನರಿಗಯೋಗ್ಯರಿಗಿದನು ಪೇಳದಲೆ ॥**
**ನಿರುತ ಸದ್ಭಕ್ತಿಯಲಿ ಭಗವ । ಚ್ಚರಿತೆಗಳ ಕೊಂಡಾಡಿ ಹಿಗ್ಗುವ ।**
**ಪರಮ ಭಗವದ್ದಾಸರಿಗೆ ತಿಳಿಸುವದು ಈ ರಹಸ್ಯ ॥ (13-32)**

ಹರಿಕಥಾಮೃತಸಾರ ರಸಜ್ಞರು ಇಲ್ಲಿ ಹೇಳುವದನ್ನು ಮನಸ್ಸಿನಲ್ಲಿಡಬೇಕು. ಈ ಗ್ರಂಥಗತ ವಿಷಯವನ್ನು ನಿಷ್ಠುರಿಗಳಿಗೆ, ಪಿಶುನರಿಗೆ, ಅಯೋಗ್ಯರಿಗೆ ಹೇಳ-ಬೇಡಿರಿ. ಇವರು ಅನಧಿಕಾರಿಗಳು. ಈ ವಿಷಯ ಪುನಃ ಪುನಃ ಒತ್ತಿ ಹೇಳುತ್ತಾರೆ.

ಈ ಹದಿನೇಳನೇಯ ಸಂಧಿಯಲ್ಲಿ, ಸಂಸ್ಕೃತ ಪ್ರಾಕೃತ ಭಾಷಾ ಗ್ರಂಥಗಳ ವಿಷಯದಲ್ಲಿ ಆಗ ಅನೇಕ ಜನರಲ್ಲಿ ಒಡಮೂಡಿದ್ದ ಮೇಲು ಕೀಳು ಭಾವನೆಗಳನ್ನು ದಾಸರಾಯರು ವಿಮರ್ಶೆ ಮಾಡಿ ಸಮಂಜಸವಾದ ಪರಿಹಾರ ರೂಪ ಉತ್ತರವನ್ನು ನೀಡಿದ್ದಾರೆ, ಪ್ರಾಕೃತ ಭಾಷೆಯಲ್ಲಿ ರಚಿತವಾದ ಈ ಹರಿಕಥಾ

ಮೃತವನ್ನು ಮೂದಲಿಸುವವರು ಆಗಲೂ ಇದ್ದರು, ಈಗಲೂ ಇದ್ದಾರೆ. ಆದರೆ 200 ವರ್ಷಗಳ ಹಿಂದಿನಕಿಂತಲೂ ಈ ಗ್ರಂಥ ಈಗ ಹೆಚ್ಚು ಬಳಕೆಯಲ್ಲಿದೆ, ಹೆಚ್ಚು ಪ್ರಸಿದ್ಧಿಯಲ್ಲಿದೆ.

**ಆದರಿಶ ಅಗತಾಕ್ಷಭಾಷಾ । ಭೇಥದಿಂದಲಿ**
**ಕರೆಯಲದನು ನಿ ।**
**ಷೇಧಗೈದವಲೋಕಿಸದೆ ಬಿಡುವರೆ ವಿವೇಕಿಗಳು ॥**
**ಮಾಧವನ ಗುಣಪೇಳ್ವಪ್ರಾಕೃತ । ವಾದರೆಯು**
**ಸರಿಕೇಳಿ ಪರಮಾ ।**
**ಲ್ಹಾದ ಬಡದಿಪ್ಪರೆ ನಿರಂತರಬಲ್ಲ ಕೋವಿದರು ॥ (17-34)**

ಈ ಗ್ರಂಥವನ್ನು ಕೇವಲ ಪ್ರಾಕೃತ ಭಾಷೆಯೆಂಬ ಕಾರಣದಿಂದ ಉಪೇಕ್ಷಿಸಿ ನೋಡದಿರುವವರು ಅವಿವೇಕಿಗಳೇ, ಆದರೆ ವಿವೇಕಿಗಳು ಭಾಷಾ ಭೇದದಿಂದ ಹೇಳಿದರೂ ಪರಮಾತ್ಮನ ಗುಣೋತ್ಕರ್ಷಪರವಾದ ಗ್ರಂಥಗಳನ್ನು ಓದಿ ಕೇಳಿ ಅಹ್ಲಾದ ಪಡುತ್ತಾರೆ. ಅವರೇ ಅಧಿಕಾರಿಗಳು ಕೋವಿದರು.

**ಭಾಸ್ಕರನ ಮಂಡಲವ ಕಂಡು ನಮಸ್ಕರಿಸಿ ನೋದಿಸದೆ**
**ದ್ವೇಷದಿ ।**
**ತಸ್ಕರನು ನಿಂದಿಸಲು ಕುಂದಹುದೇ ದಿವಾಕರಗೆ ॥**
**ಸಂಸ್ಕೃತವಿದಲ್ಲೆಂದು ಕುಹಕ ತಿ । ರಸ್ಕರಿಸಲೇನಹುದು**
**ಭಕ್ತಿ ಪು ।**
**ರಸ್ಕರದಿ ಕೇಳ್ವರಿಗೆ ಒಲಿವನು ಪುಷ್ಕರಾಕ್ಷಸಖಾ ॥ (17-35)**

ಈ ಗ್ರಂಥವನ್ನು ಕುಹಕಿಗಳು ತಿರಸ್ಕರಿಸಿದರೆ ಏನೂ ಹಾನಿ ಇಲ್ಲ. ಚೋರನು ಸೂರ್ಯನನ್ನು ಬೈದರೆ ಭಾಸ್ಕರಿನಿಗೇನು ಕುಂದು. ದ್ವೇಷಾಸೂಯೆಗಳು ಕುಹಕಿಗಳ ಹೀನಬುದ್ಧಿ ಅಷ್ಟೆ. ಸಂಸ್ಕೃತವಲ್ಲದಿದ್ದರೂ ಭಕ್ತಿಪುರಸ್ಕರವಾಗಿ ಶ್ರವಣ ಮನನಾದಿಗಳನ್ನು ಮಾಡುವ ವಿವೇಕಿಗಳಿಗೆ. ಅಧಿಕಾರಿಗಳಿಗೆ ಕಮಲನಯನನಾದ ಶ್ರೀಹರಿಯು ನಿಯಮೇನ ಒಲಿಯುತ್ತಾನೆ. ಅಧಿಕಾರಿಗೆ ಬೇಕಾದದ್ದೇ ಶ್ರೀಹರಿಯು

ಒಲಿಮೆ ಪ್ರಸಾದ. ಶ್ರೀಹರಿಯ ಅತ್ಯರ್ಥ ಪ್ರಸಾದದ್ವಾರಾ ಮೋಕ್ಷ. ಯಾರಿಗೆ ಸುಖರೂಪವಾದ ಮೋಕ್ಷವಿಲ್ಲವೋ ಅವರಿಗೆ ಶ್ರೀಹರಿಯ ಪ್ರಸನ್ನತೆಪ್ರಸಾದ ವಿಲ್ಲ. ಪ್ರಸನ್ನನಾದರೆ ಮೋಕ್ಷಸಿದ್ಧ. ದಾಸರಾಯರೇ ಹೇಳಿದ್ದಾರೆ ಒಲಿವನು ಪ್ರಸನ್ನನಾಗುವವನು ಎಂದು.

**ಪತಿತನ ಕಪಾಲದೊಳು ಭಾಗೀ । ರಥಿಯು ಜಲವಿರೆ**
**ಪೇಯವೆನಿಪುದೆ ।**
**ಇತರ ಕವಿ ನಿರ್ಮಿತ ಕುಕಾವ್ಯಶ್ರಾವ್ಯ ಬುಧರಿಂದ ॥**
**ಕೃತಿಪತಿ ಕಥಾನ್ವಿತವೆನಿಪ ಪ್ರಾ । ಕೃತವೇತಾ**
**ಸಂಸ್ಕೃತವೆನಿಸಿ ಸ ।**
**ದ್ಗತಿಯನೀವದು ಭಕ್ತಿಪೂರ್ವಕ ಕೇಳಿ ಪೇಳ್ವರಿಗೆ ॥ (17-36)**

ಕವನಕ್ಕೆ ಶ್ರೀಹರಿಯನ್ನುಳಿದು ಇತರ ಯಾವ ವಿಷಯವಾದರೂ ಕುಕಾವ್ಯ ವಾಗುತ್ತದೆ. ಅದು ಬುಧರಿಂದ ಗ್ರಾಹ್ಯವಲ್ಲ. ಕೃತಿಪತಿ ಪ್ರದ್ಯುಮ್ನ ಯಾವ ಕವನಕ್ಕೆ ವಿಷಯನಾಗಿದ್ದನೋ, ಆ ಕಾವ್ಯ ಪ್ರಾಕೃತಭಾಷೆಯಲ್ಲಿ ರಚಿತವಾದರೂ ಸಂಸ್ಕೃತದ ಸಡಗರ ಬರುತ್ತದೆ. ಭಕ್ತಿಪೂರ್ವಕ ಕೇಳಿಪೇಳುವವರಿಗೆ ಸದ್ಗತಿಯು ಲಭಿಸುವುದು.

**ಈ ಕಥಾಮೃತಪಾನ ಸುವಿ । ವೇಕಿಗಳಿಗಲ್ಲದಲೆ ವೈಷಿಕ ।**
**ವ್ಯಾಕುಲ ಕುಚಿತ್ತರಿಗೆ ದೊರೆವುದೆ ಆವಕಾಲದಲಿ ॥**
**ಲೋಕವಾರ್ತೆಯ ಬಿಟ್ಟು ಇದನವ । ಲೋಕಿಸುತ ನೋದಿ**
**ಪರಿಗೊಲಿದು ಕೃ ।**
**ಪಾಕರಜಗನ್ನಾಥವಿಟ್ಠಲ ಪೊರೆವನನುದಿನದಿ ॥ (24-63)**

ವೈಷಿಕ, ವ್ಯಾಕುಲ, ಕುಚಿತ್ತರು ಲೋಕವಾರ್ತೆಯಲ್ಲಿ ಸದಾನಿರತ ರಾದವರು ಈ ಗ್ರಂಥಕ್ಕೆ ಅಧಿಕಾರಿಗಳಲ್ಲ.

ಲೋಕವಾರ್ತೆಯ ಅವಶ್ಯಕತೆ ಕೆಲಮಟ್ಟಿಗೆ ಮಾತ್ರವಿದೆ. ಅವಶ್ಯಕತೆಯು ಸೀಮಾಮೀರದೇ ("ತದಲಂ ಬಹುಲೋಕ ವಿಚಿಂತನಯಾಪ್ರವಣಂಕುರು

ಮಾನಸ ಮೀಶಪದೇ ॥ ದ್ವಾ. ಸ್ತೋತ್ರ)" ಹರಿಕಥಾಮೃತಸಾರವನ್ನು ಅವಲೋಕಿಸುವವರಿಗೆ ಶ್ರವಣಪುಟದಿಂದ ಅನುದಿನ ಕಥಾಪಾನ ಮಾಡತಕ್ಕ ಸಜ್ಜನರನ್ನು ಶ್ರೀಜಗನ್ನಾಥವಿಟ್ಠಲನು ಸದಾರಕ್ಷಿಸುತ್ತಾನೆ.

**ಸಂಬಂಧ :** ಪ್ರಾಪ್ಯ–ಪ್ರಾಪಕ ಭಾವ
(Relavence) ಪ್ರತಿಪಾದ್ಯ–ಪ್ರತಿಪಾದಕಭಾವ
ದಾತೃ–ದೇಯಭಾವ
ಈಶ–ದಾಸಭಾವ

**ಫಲ :** ಶ್ರೀಹರಿ ಪ್ರಸಾದದ್ವಾರಾ ಮೋಕ್ಷ.
ಈ ಪ್ರಕಾರ ಅನುಬಂಧ ಚತುಷ್ಟಯಗಳನ್ನು ತಿಳಿಯಬಹುದು.

ಈ ಅನುಬಂಧ ಚತುಷ್ಟಯಗಳನ್ನು ಹರಿಕಥಾಮೃತಸಾರವೆಂಬ ಶೀರ್ಷಿಕೆಯಲ್ಲಿಯೇ ಕಾಣಬಹುದು.

ವಿಷಯ : ಹರಿಕಥಾ
ಅಧಿಕಾರಿ : ಮುಮುಕ್ಷು
ಸಂಬಂಧ : ಪ್ರಾಪ್ಯಪಾಪಕಭಾವ
ಫಲ : ಅಮೃತತ್ವ–ಮೋಕ್ಷ–ಸಾರ
ಸೃ ಸರಗತಿ ಭಕ್ಷಣಯೋಃ, ಗತ್ಯರ್ಥಶಬ್ದ ಜ್ಞಾನಾರ್ಥದಲ್ಲಿದೆ.
ಅಪರೋಕ್ಷ ಜ್ಞಾನ—ಅತ್ಯರ್ಥಪ್ರಸಾದ—
ಆನಂದಾನುಭವ (ಭಕ್ಷಣ)-ಮೋಕ್ಷಾನುಭವ.

ಹೀಗೆ, ಈ ಗ್ರಂಥಕ್ಕೆ ವಿಷಯ, ಅಧಿಕಾರಿ, ಸಂಬಂಧ, ಫಲವನ್ನು ಖಚಿತಪಡಿಸಿ ಶ್ರೀದಾಸರಾಯರು ಮಂಗಳಾಚರಣಸಂಧಿಯನ್ನು ರಚನೆ ಮಾಡಲು ಉಪಕ್ರಮಿಸುತ್ತಾರೆ. ಒಂದು ವೈಶಿಷ್ಟ್ಯವೆಂದರೆ ಹದಿಮೂರು ಪದ್ಯಗಳನ್ನೊಳಗೊಂಡ ಮೊದಲನೆಯಸಂಧಿ ಮಂಗಳಾಚರಣಸಂಧಿ ಎಂತಲೇ ಹೆಸರು. ಪರಮಾತ್ಮ, ಲಕ್ಷ್ಮೀದೇವಿ, ಋಜುತಾತ್ವಿಕಾದಿ ಎಲ್ಲ ದೇವತೆಗಳು, ಗುರುಗಳು

ಎಲ್ಲರನ್ನೂ, ಕೆಲವರನ್ನು ಪ್ರತ್ಯೇಕವಾಗಿ, ಕೆಲವರನ್ನು ಸಮೂಹಾಲಂಬತ್ವೇನ ಗುಂಪುಗುಂಪಾಗಿ ನಮಸ್ಕರಿಸಿ ಪ್ರಾರ್ಥಿಸುತ್ತಾರೆ. ಆಮೇಲೆ ಎರಡನೆಯ ಸಂಧಿಯಿಂದ ಪ್ರಾರಂಭವಾಗುತ್ತದೆ ವಿಷಯ.

**ಶ್ರೀರಮಣಿಕರ ಕಮಲ ಪೂಜಿತ । ಚಾರುಚರಣ**
**ಸರೋಜ ಬ್ರಹ್ಮಸ ।**
**ಮೀರವಾಣಿ ಫಣೀಂದ್ರವೀಂದ್ರಭವೇಂದ್ರ ಮುಖವಿನುತ ॥**
**ನೀರಜ ಭವಾಂಡೋದಯ ಸ್ಥಿತಿ । ಕಾರಣನೆ ಕೈವಲ್ಯದಾಯಕ ।**
**ನಾರಸಿಂಹನೆ ನಮಿಪೆ ಕರುಣಿಪುದೆಮಗೆ ಮಂಗಳವ ॥ (1-1)**

ಹರಿಕಥಾಮೃತಸಾರದಲ್ಲಿ ಇದು ಪ್ರಥಮ ಸಂಧಿಯ ಪ್ರಥಮ ಪದ್ಯ.

ಗ್ರಂಥಾರಂಭದಲ್ಲಿ ಮಂಗಳಾಚರಣೆಯನ್ನು ಆಚರಿಸತಕ್ಕದ್ದು ಸಕಲ ಆಸ್ತಿಕ ಗ್ರಂಥಗಳ ಸಾಮಾನ್ಯ ಪದ್ಧತಿ (Common feature). ಪ್ರಕೃತ ರಚಿಸಲ್ಪಡತಕ್ಕ ಗ್ರಂಥವು ನಿರ್ವಿಘ್ನ ಪರಿಸಮಾಪ್ತಿ ಆಗಲೆಂದು ಗ್ರಂಥಕರ್ತರು ಆದಿಯಲ್ಲಿ ನರಸಿಂಹನನ್ನು ನಮಿಸುತ್ತಾರೆ. ಕ್ರಿಯಾಪದವು ಉತ್ತಮಪುರುಷ ಏಕವಚನ ಪ್ರಯೋಗದಲ್ಲಿರುವದರಿಂದ, ಕರ್ತೃಪದ ಆಕಾಂಕ್ಷೆಗೆ "ನಾನು" (ಗ್ರಂಥ ಕರ್ತರು) ಎಂಬ ಉತ್ತರ ತಾನಾಗಿಯೇ ಲಭಿಸುವದು. ಹೇ ನರಸಿಂಹನೇ ನಿನಗೆ ನಮಿಸುತ್ತೇನೆ ನಮಗೆ ಮಂಗಳವನ್ನು ಕರುಣಿಸು ಎಂದು ಪ್ರಾರ್ಥನೆ. "ಎಮಗೆ" ಎಂಬ ಪದದಿಂದ ಗ್ರಂಥಕರ್ತರು, ಹೇಳುವ, ಕೇಳುವ, ಅಧ್ಯಯನ ಮಾಡುವ ಸರ್ವ ಅಧಿಕಾರಿಗಳಿಗೂ ಮಂಗಳವನ್ನು ಪ್ರಾರ್ಥಿಸುತ್ತಾರೆ. ಆತ್ಮಗೌರವಾರ್ಥವಾಗಿಯೂ ಬಹುವಚನ ಪ್ರಯೋಗವು ರೂಢಿಯಲ್ಲಿದೆ.

ಎಂಥ "ನಾರಸಿಂಹ" ಎಂದರೆ, ಶ್ರೀದಾಸವರ್ಯರು ನಾಲ್ಕು ವಿಶೇಷಣಗಳನ್ನು ಉಪಾದಾನ ಮಾಡಿ ಪ್ರತಿಪಾದ್ಯನ ಗುಣಗಾನ ಮಾಡಿದ್ದಾರೆ. ನಾಲ್ಕು ವಿಶೇಷಣಗಳಾವುವೆಂದರೆ–

(1) ಶ್ರೀರಮಣೀಕರ ಕಮಲಪೂಜಿತ ಚಾರುಚರಣ ಸರೋಜ.
ಸಕಲೈಶ್ವರ್ಯಯುಕ್ತಳಾದ ಲಕ್ಷ್ಮೀದೇವಿಯ ಕಮಲದಂತೆಯಿರುವ ಕರಗಳಿಂದ ಪೂಜಿಸಲ್ಪಟ್ಟ ಮನೋಹರವಾದ ಚರಣಕಮಲ ಉಳ್ಳ.

(2) ಬ್ರಹ್ಮಸಮೀರವಾಣಿ ಫಣೀಂದ್ರವೀಂದ್ರಭವೇಂದ್ರ ಮುಖವಿನುತ.

ಬ್ರಹ್ಮ, ವಾಯು, ವಾಣಿ, ಶೇಷ, ಗರುಡ, ರುದ್ರ ಈ ಮೊದಲಾದವರಿಂದ ಸ್ತುತಿಸಲ್ಪಟ್ಟ.

(3) ನೀರಜಭವಾಂಡೋದಯ ಸ್ಥಿತಿ ಕಾರಣನೆ.

ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ—ಸೃಷ್ಟ್ಯಾದ್ಯಷ್ಟಕಾರಣ.

(4) ಕೈವಲ್ಯ ದಾಯಕ.

ಮುಕ್ತಿಪ್ರದ.

ಏನುಹೇಳಿದಂತಾಯಿತೆಂದರೆ—

(1) ಲಕ್ಷ್ಮೀಪತಿತ್ವ (2) ಬ್ರಹ್ಮಾದಿವಂದ್ಯತ್ವ (3) ಸೃಷ್ಟ್ಯಾದ್ಯಷ್ಟ ಕರ್ತೃತ್ವ ಮತ್ತು (4) ಕೈವಲ್ಯದಾಯಕತ್ವ, ಈ ನಾಲ್ಕು ಗುಣಗಳನ್ನು ಸ್ಮರಿಸಿ ದಂತಾಯಿತು.

ಶ್ರೀಮನ್ನ್ಯಾಯಸುಧಾವಾಕ್ಯಗಳಂತೆ, ಗ್ರಂಥ ಪ್ರತಿಪಾದ್ಯನಲ್ಲಿ ವಂದ್ಯತ್ವ ಪ್ರಯೋಜಕೀಭೂತಗುಣಗಳೆಂದರೆ ಇಷ್ಟತ್ವ, ವಿಶಿಷ್ಟತ್ವ, ಅಧಿಕೃತತ್ವ.

ಇಲ್ಲಿ ತೃತೀಯ-ಚತುರ್ಥ ವಿಶೇಷಣಗಳಿಂದ—ಇಷ್ಟತ್ವ ಸಿದ್ಧಿ.

ಪ್ರಥಮ-ದ್ವಿತೀಯ ವಿಶೇಷಣಗಳಿಂದ—ವಿಶಿಷ್ಟತ್ವಸಿದ್ಧಿ.

ಪ್ರಥಮ-ದ್ವಿತೀಯ-ತೃತೀಯ-ಚತುರ್ಥ ವಿಶೇಷಣಗಳಿಂದ—ಅಧಿಕೃತತ್ವ ಸಿದ್ಧಿ. ಆದ್ದರಿಂದ ನರಸಿಂಹ ದೇವರ ನಮನವು ಸಾರ್ಥಕವಾಗಿದೆ.

ಶ್ರೀಜಗನ್ನಾಥದಾಸರಿಗೂ—ಅವರ ಮೂಲಾಂಶ ಸಲ್ಹಾದರಿಗೂ ನರಸಿಂಹ ದೇವರೇ ಕುಲದೇವರು. ಆದ್ದರಿಂದ ಅವರಿಗೇ ನಮನ.

ನಾರಸಿಂಹ—ಎಂದರೆ, ನರಸಂಬಂಧ—ಆರು ಅವತಾರಗಳು, ಸಿಂಹ ಎಂದರೆ—ಮೃಗ ಸಂಬಂಧಿ—ನರೇತರ ಸಂಬಂಧಿ ಮೂರು ಅವತಾರಗಳು—ನರ-ಮೃಗಸೇರಿದ ಒಂದವತಾರ. ಹೀಗೆ ನಾರಸಿಂಹ ಎನ್ನುವುದರಿಂದ—ದಶಾವತಾರ—ಸಂಗ್ರಹ ಮತ್ತು ನಮನ.

ಇದೆಲ್ಲ ಸರಿ. ಆದರೆ ಒಂದು ಆಕಾಂಕ್ಷೆ. ಶ್ರೀಮದಾಚಾರ್ಯರ ಪರಂಪರಾ ಪದ್ಧತಿಯನ್ನನುಸರಿಸಿದ ಮೇಲೆ, ಅವರು ಮಾಡತಕ್ಕ ಮಂಗಳಾಚರಣೆಯಂತೆ ಇವರ ಮಂಗಳಾಚರಣೆ ಇಲ್ಲವಲ್ಲ. ಯಾಕೆಂದರೆ ಶ್ರೀಮದಾಚಾರ್ಯರ ಗ್ರಂಥಗಳಲ್ಲಿ ಶೇಕಡಾ ಎಂಭತ್ತರಷ್ಟು ಗ್ರಂಥಗಳಲ್ಲಿ ಮಂಗಳಾಚರಣ ಶ್ಲೋಕದಲ್ಲಿಯೇ ಗುಣಪೂರ್ಣತ್ವ-ದೋಷದೂರತ್ವ ಎಂಬ ವಿಶೇಷಣಗಳನ್ನು ಉಪಯೋಗಿಸಿದ್ದಾರೆ.

ಉದಾಹರಣೆ:—

**ದೇವಂ ನಾರಾಯಣಂ ನತ್ವಾಸರ್ವದೋಷ ವಿವರ್ಜಿತಂ ।**
**ಪರಿಪೂರ್ಣಂ ಗುರೂಂಶ್ಚಾಂಗೀತಾರ್ಥಂ ವಕ್ಷ್ಯಾಮಿಲೇಶತಃ ॥**
**(ಗೀತಾಭಾಷ್ಯ)**

**ಸಮಸ್ತ ಗುಣಸಂಪೂರ್ಣಂ ಸರ್ವದೋಷ ವಿವರ್ಜಿತಂ ।**
**ನಾರಾಯಣಂ ನಮಸ್ಕೃತ್ಯ ಗೀತಾತಾತ್ಪರ್ಯಮುಚ್ಯತೇ ॥**
**(ಗೀ. ತಾತ್ಪರ್ಯ)**

**ನಾರಾಯಣಂ ಗುಣೈಸ್ಸರ್ವೈರುದೀರ್ಣಂ ದೋಷವರ್ಜಿತಂ ।**
**ಜ್ಞೇಯಂ ಗಮ್ಯಂ ಗುರೂಂಶ್ಚಾಪಿ ನತ್ವಾಸೂತ್ರಾರ್ಥಉಚ್ಯತೆ ॥**
**(ಬ್ರ. ಸೂ. ಭಾಷ್ಯ)**

ಈ ಪ್ರಕಾರವಾಗಿ ಗುಣಪೂರ್ಣ ದೋಷದೂರ ಎಂಬ ವಿಶೇಷಣಗಳನ್ನು ಕಾಣಬಹುದು.

ಪ್ರಕೃತ, ಹರಿಕಥಾಮೃತಸಾರದಲ್ಲಿಯೂ ಈ ಗುಣಪೂರ್ಣತ್ವ ದೋಷದೂರತ್ವ ವಿಶೇಷಣಗಳು ಎಲ್ಲಿವೆ, ಎಂಬ ಆಕಾಂಕ್ಷೆ ಬರುತ್ತದೆ. ಸಮಾಧಾನ ಈ ಎರಡು ಗುಣಗಳು ಲಕ್ಷ್ಮೀಪತಿತ್ವದಲ್ಲಿಯೇ ಅಡಗಿವೆ. ಹೇಗೆಂದರೆ ದೇವ, ದೈತ್ಯರು ಮಾಡಿದ ಸಮುದ್ರಮಥನ ಸಂದರ್ಭವನ್ನು ಜ್ಞಾಪಕಕ್ಕೆ ತಂದುಕೊಳ್ಳುವಾ.

ಸಮುದ್ರಮಥನ ಮಾಡುತ್ತಿದ್ದಾಗ ಅದರಿಂದ ಅನೇಕ ಪದಾರ್ಥಗಳು ಬಂದವು. ಕಾಳಕೂಟವಿಷ, ಅಶ್ವ, ಚಂದ್ರ, ಲಕ್ಷ್ಮೀ ಇತ್ಯಾದಿ ಅನೇಕ ಪದಾರ್ಥಗಳು ಬಂದವು. ಲಕ್ಷ್ಮೀದೇವಿ ಬಂದಾಗ ಒಬ್ಬೊಬ್ಬ ದೇವತೆಯು

ಒಂದೊಂದು ಉಡುಗೊರೆ ಕೊಟ್ಟರು. ಸರಸ್ವತಿ ವೈಜಯಂತಿ ಮಾಲೆಯನ್ನು ಕೊಟ್ಟಳು. ಅದನ್ನು ಹಿಡಿದುಕೊಂಡು ಲಕ್ಷ್ಮೀದೇವಿಯು ದೇವತೆಗಳ ಸಾಲಿನಲ್ಲಿ ಹೊರಟಳು. ಬ್ರಹ್ಮ, ವಾಯು, ರುದ್ರ, ಇಂದ್ರಾದಿ ದೇವತೆಗಳಲ್ಲಿ ಒಂದೊಂದು ದೋಷವನ್ನು ತೋರಿಸಿದಳು. ಅವರೆಲ್ಲರೂ ತಮ್ಮಲ್ಲಿ ಆ ದೋಷವನ್ನು ಒಪ್ಪಿಕೊಂಡರು. ದೈತ್ಯರ ಕಡೆಗೆ ನೋಡಲೇ ಇಲ್ಲ. ಹಾಗೆಯೇ ಮುಂದುವರಿದು ಎದುರಿಗೆ ನಿಂತ ನಾರಾಯಣನು ಗುಣಪೂರ್ಣನೆಂದೂ ಮತ್ತು ದೋಷವರ್ಜಿತ ನೆಂದೂ ಅವನಿಗೆ ಮಾಲೆಹಾಕಿದಳು. ಆದ್ದರಿಂದ ನಾವು ಒಂದು ಸಮವ್ಯಾಪ್ತಿ ಇರತಕ್ಕ ಅನುಮಾನವನ್ನು ಮಾಡಬಹುದು.

1. ನರಸಿಂಹನು ಗುಣಪೂರ್ಣನು ಮತ್ತು ದೋಷದೂರನೆಂದು ತಿಳಿಯಬೇಕು, ಲಕ್ಷ್ಮೀಪತಿಯಾದ್ದರಿಂದ.
2. ನರಸಿಂಹನು ಲಕ್ಷ್ಮೀಪತಿಯು, ಗುಣಪೂರ್ಣ ಮತ್ತು ದೋಷದೂರ ನಾದ್ದರಿಂದ.

ಇದರಿಂದ ತಿಳಿಯುವುದೇನೆಂದರೆ ಗುಣಪೂರ್ಣತ್ವ ಮತ್ತು ದೋಷ ದೂರತ್ವ ಗುಣಗಳು, ಲಕ್ಷ್ಮೀಪತಿತ್ವದಲ್ಲಿಯೇ ನಿಗೂಢವಾಗಿವೆ.

ಪ್ರಥಮ ವಿಶೇಷಣವಾದ ಲಕ್ಷ್ಮೀಪತಿತ್ವದಿಂದ ಇನ್ನೊಂದು ಗುಣದ್ಯೋತನ ವಾಗುತ್ತದೆ. ಅದೇನೆಂದರೆ ಅಕ್ಷರಾತೀತತ್ವ. ಲಕ್ಷ್ಮಿಯು ಅಕ್ಷರಳು. ಕ್ಷರ-ನಾಶ, ನಾಶರಹಿತವಾದ ಶರೀರವುಳ್ಳವಳು. ಬ್ರಹ್ಮಾದಿಗಳು ಕ್ಷರರು. ಶರೀರಕ್ಷರಣಾತ್ ಕ್ಷರಃ, ದೇಹನಾಶವುಳ್ಳವರು. ಪರಮಾತ್ಮನು ಅಕ್ಷರವಂದ್ಯನು ಅಥವಾ ಅಕ್ಷರಾತೀತನು.

ಎರಡನೆಯ ವಿಶೇಷಣದಿಂದ "ಬ್ರಹ್ಮಾದಿವಂದ್ಯತ್ವ" ದಿಂದ ಕ್ಷರಾತೀತತ್ವ ಅಥವಾ ಕ್ಷರವಂದ್ಯತ್ವ ದ್ಯೋತನವಾಗುತ್ತದೆ.

ಅಲ್ಲರಿ, ಅಕ್ಷರವಂದ್ಯತ್ವವು ಕ್ಷರವಂದ್ಯತ್ವದಕ್ಕಿಂತಲೂ ಗುಣದಲ್ಲಿ ಅಧಿಕ ವಾಗಿದೆ. ತಾರತಮ್ಯಾನುಸಾರ ಪ್ರಥಮ, ದ್ವಿತೀಯ ವಿಶೇಷಣಗಳು ಉಕ್ತವಾಗಿವೆ. ಅಂದಮೇಲೆ ಅಕ್ಷರವಂದ್ಯತ್ವ ಹೇಳಿದ ಮೇಲೆ ಕ್ಷರವಂದ್ಯತ್ವವನ್ನು ಪ್ರತ್ಯೇಕವಾಗಿ

ಹೇಳಬೇಕಾದ್ದಿಲ್ಲ. ಕೈಮುತ್ಯನ್ಯಾಯದಿಂದಲೇ ಸಿದ್ಧವಾಗುತ್ತದೆ. ಹಾಗಿದ್ದ ಮೇಲೆ ಕ್ಷರವಂದ್ಯತ್ವವು ವ್ಯರ್ಥ ವಿಶೇಷಣವಾಗುವುದಿಲ್ಲವೇ, ಎಂದು ಅಕಾಂಕ್ಷೆ ಬಂದರೆ, ಅಲ್ಲವೆಂದು ಉತ್ತರ. ಯಾಕೆಂದರೆ ಲೋಕದಲ್ಲಿ ಬ್ರಹ್ಮರುದ್ರಾದಿಗಳು ಸೃಷ್ಟಿ, ಲಯಕರ್ತರೆಂದು ಖ್ಯಾತಿ ಇದೆ. ಲೋಕದಲ್ಲಿ ಜನಜನಿತವಾದ ಅಜ್ಞಾನವನ್ನು ಅಥವಾ ಭ್ರಮವನ್ನು ನಿರಸನ ಮಾಡಲು, ಸ್ಪಷ್ಟವಾಗಿ ತಿಳಿಸಲು ಬ್ರಹ್ಮಾದಿ ವಂದ್ಯತ್ವವನ್ನು ವಿಶೇಷಣ ರೀತಿಯಿಂದ ಪ್ರತ್ಯೇಕವಾಗಿ ಉಪಾದಾನ ಮಾಡಿದ್ದಾರೆ. ಬ್ರಹ್ಮ, ರುದ್ರರು ಕ್ರಮವಾಗಿ ಸೃಷ್ಟಿ, ಲಯಗಳನ್ನು ಮಾಡಿದರೂ ಸ್ವತಂತ್ರ ಕರ್ತೃತ್ವೇನ ಅಲ್ಲ. ಪರಮಾತ್ಮನ ಆಧೀನಕರ್ತೃತ್ವ ಅವರಿಗೆ ಉಂಟು ಎಂಬುದು ಸ್ಪಷ್ಟವಾಗುತ್ತದೆ.

ಪರಮಾತ್ಮನಿಗೆ ಕ್ಷರವಂದ್ಯತ್ವ ಮತ್ತು ಅಕ್ಷರವಂದ್ಯತ್ವ ಅಥವಾ ಕ್ಷರಾಕ್ಷರಾತೀತ್ವವನ್ನು ತಿಳಿಸಿದ್ದು ಮೇಲೆ ಹೇಳಿದ ಸಾಮಾನ್ಯ ಕಾರಣಕ್ಕೆ ಮಾತ್ರವಲ್ಲ. ಇನ್ನೊಂದು ಮುಖ್ಯವಾದ ಗುಣವನ್ನು ಸಂಪಾದನೆ ಮಾಡುತ್ತಾರೆ. ಈ ಕೆಳಗೆ ಉದಾಹರಿಸಿದ ಗೀತಾಶ್ಲೋಕಗಳು ವಿಷಯವನ್ನು ಸ್ಪಷ್ಟಪಡಿಸುತ್ತವೆ. ಶ್ರೀಮದಾಚಾರ್ಯರು ಈ ಶ್ಲೋಕಗಳನ್ನು ಬಹಳ ಸ್ಥಳಗಳಲ್ಲಿ ತತ್ವ ತಿಳಿಸಲು ಪ್ರಮಾಣತ್ವೇನ ಉದಾಹರಿಸಿದ್ದಾರೆ.

"ದ್ವಾವಿಮೌ ಪುರುಷೌ ಲೋಕೆ ಕ್ಷರಶ್ಚಾಕ್ಷರ ಏವಚ ।
ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೆ ॥
ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋಲೋಕತ್ರಯ ಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ।
ಯಸ್ಮಾತ್ ಕ್ಷರಮತೀತೋಹಂ ಅಕ್ಷರಾದಪಿಚೋತ್ತಮ ।
ಅತೋಸ್ಮಿಲೋಕೆ ವೇದೇಚ ಪ್ರಥಿತಃ ಪುರುಷೋತ್ತಮಃ ।

ಕ್ಷರಸಮೂಹದಿಂದಲೂ ಅಕ್ಷರಳಿಂದಲೂ ಉತ್ತಮನಾದ್ದರಿಂದ ಲೋಕದಲ್ಲಿ, ವೇದಗಳಲ್ಲಿ ಪರಮಾತ್ಮನಿಗೆ ಪುರುಷೋತ್ತಮ ಎಂಬ ಹೆಸರು ಇದೆ. ಕ್ಷರಾಕ್ಷರಾತೀತತ್ವದಿಂದ ಪುರುಷೋತ್ತಮತ್ವ ಸಿದ್ಧವಾಯಿತು.

ಲಕ್ಷ್ಮೀಪತಿತ್ವ + ಬ್ರಹ್ಮಾದಿವಂದ್ಯತ್ವ
ಅಕ್ಷರವಂದ್ಯತ್ವ + ಕ್ಷರವಂದ್ಯತ್ವ | = ಪುರುಷೋತ್ತಮತ್ವ
ಅಕ್ಷರಾತೀತತ್ವ + ಕ್ಷರಾತೀತತ್ವ

ಶ್ರೀಮದಾಚಾರ್ಯರ, ಈ ಕೆಳಗೆ ಬರೆದ, ಎರಡು ವಾಕ್ಯಗಳನ್ನು ನೋಡಿದರೆ "ಗುಣಪೂರ್ಣತ್ವಕ್ಕೂ" ಮತ್ತು "ಸ್ವತಂತ್ರತ್ವಕ್ಕೂ" ನಿಕಟ ಸಂಬಂಧವಿದೆ ಎಂದು ತೋರುತ್ತದೆ.

(I) **"ಸ್ವತಂತ್ರತ್ವಸ್ಯ ಗುಣಪೂರ್ಣತ್ವ ನಿಯಮಾತ್"**

(II) **"ನಹಿ ಸ್ವತಂತ್ರೋ ಅಪೂರ್ಣತಾಂ ಕಾಮಯೀತ"**

**(ನ್ಯಾಯವಿವರಣ)**

(I) ಸ್ವತಂತ್ರನಾದವನು ಗುಣಪೂರ್ಣನಾಗಿದ್ದಾನೆಂಬುದು ನಿಯಮ.

(II) ಸ್ವತಂತ್ರನಾದವನು ಅಪೂರ್ಣತೆಯನ್ನು ಬಯಸುವುದಿಲ್ಲ.

ಸ್ವತಂತ್ರತ್ವ ಮತ್ತು ಗುಣಪೂರ್ಣತ್ವಗಳು ಸಮವ್ಯಾಪ್ತಗುಣಗಳು. ಅಪೂರ್ಣತ್ವ–ಸ್ವತಂತ್ರತ್ವ ಒಂದೆಡೆ ಇರಲಾರವು. ಉದಾ : ಬ್ರಹ್ಮಾದಿತೃಣಾಂತ ಜೀವರು–ಅಸ್ವತಂತ್ರ ಚೇತನಗಣದಲ್ಲಿ ಬರುತ್ತಾರೆ. ಅದ್ದರಿಂದ ಮೇಲಿನ ಎರಡು ವಾಕ್ಯಗಳಿಂದ ವ್ಯಾಪ್ತಿಯನ್ನು ಈ ರೀತಿ ಗ್ರಹಿಸಬಹುದು ;

**ಯತ್ರಸ್ವತಂತ್ರತ್ವಂ ತತ್ರಗುಣಪೂರ್ಣತ್ವಂ ದರ್ಶನೀಯಂ.**
**ಯತ್ರ ಅಪೂರ್ಣಗುಣವತ್ವಂ ತತ್ರನಿಯಮೇನ**
**ಅಸ್ವಾತಂತ್ರತ್ವಂ ವೇದನೀಯಂ.**

ಲಕ್ಷ್ಮೀಪತಿತ್ವ — | ಗುಣಪೂರ್ಣತ್ವ / ನಿರ್ದೋಷತ್ವ | — ಸ್ವತಂತ್ರತ್ವ

ಇನ್ನು ಮೂರನೆಯ ವಿಶೇಷಣ :– "ನೀರಜ ಭವಾಂಡೋದಯ ಸ್ಥಿತಿ ಕಾರಣನೇ". ಇಲ್ಲಿ ನೀರಜಭವ–ಬ್ರಹ್ಮ, ಬ್ರಹ್ಮಾಂಡೋದಯ ಸ್ಥಿತಿ ಎರಡು

ಗುಣಗಳನ್ನು ಹ್ರಸ್ವವಾಗಿ ಹೇಳಿದ್ದಾರೆ. ಸೃಷ್ಟ್ಯಾದ್ಯಷ್ಟಕರ್ತೃತ್ವವನ್ನು ಪರಮಾತ್ಮನ ಗುಣ ವಿಶೇಷವನ್ನಾಗಿ ತಿಳಿಯಬೇಕು.

**ಉತ್ಪತ್ತಿಸ್ಥಿತಿ ಸಂಹಾರ ನಿಯತಿಜ್ಞಾನವಾವೃತಿಃ ।**
**ಬಂಧಮೋಕ್ಷೌ ಚ ಪುರುಷಾದ್ಯಸ್ಮಾತ್ಸ ಹರಿರೇಕರಾಟ್**
**॥ ಸ್ಕಾಂದೇ ॥ (ಬ್ರ. ಸೂ. ಭಾ)**

ಸೃಷ್ಟ್ಯಾದ್ಯಷ್ಟಕದಲ್ಲಿ :—

| ಸೃಷ್ಟಿ, ಸ್ಥಿತಿ, ಸಂಹಾರ, ನಿಯಮ | ಜ್ಞಾನ, ಅಜ್ಞಾನ, ಬಂಧ, ಮೋಕ್ಷ |
| --- | --- |
| ಜಡ-ಚೇತನ ಇಬ್ಬರಿಗೂ ಸಂಬಂಧಿಸಿದ್ದು | ಚೇತನಗಣಕ್ಕೆ ಮಾತ್ರ ಸಂಬಂಧಿಸಿದ್ದು |

ಪರಮಾತ್ಮ ಪ್ರಕೃತಿಯ ಮತ್ತು ಚೇತನರ ಎಲ್ಲ ತರಹದ ಮುಖ್ಯ ಮತ್ತು ಸೂಕ್ಷ್ಮಜ್ಞಾನ ಉಳ್ಳವನಾಗಿದ್ದಾನೆ. "**ಯಃ ಸರ್ವಜ್ಞಃ ಸ ಸರ್ವವಿತ್**" ಯಾರು **ಸರ್ವಜ್ಞರೋ** ಅವರು ಸರ್ವವನ್ನೂ ತಿಳಿದವರು. ಸೃಷ್ಟ್ಯಾದ್ಯಷ್ಟ ಕರ್ತೃತ್ವದಿಂದ ಪರಮಾತ್ಮನ ಇನ್ನೊಂದು ಸಂಬಂಧಪಟ್ಟ ಗುಣವೆಂದರೆ "**ಸರ್ವಜ್ಞತ್ವ**".

ಇಷ್ಟೇ ಅಲ್ಲ, ಇನ್ನೊಂದು ವೇದವಾಕ್ಯವನ್ನು ಸ್ಮರಿಸುವಾ. "ತತ್ಸೃಷ್ಟ್ವಾ ತದೇವ ಅನುಪ್ರವಿಶತ್". ಬ್ರಹ್ಮಾಂಡವನ್ನು ಸೃಷ್ಟಿಸಿ ಅದರ ಎಲ್ಲ ಭಾಗಗಳಲ್ಲೂ ಪರಮಾತ್ಮನು ಪ್ರವೇಶಿಸಿದನು. "ಈಶಾವಾಸ್ಯಮಿದಂ ಸರ್ವಂಯತ್ಕಿಂಚ ಜಗತ್ಯಾಂ ಜಗತ್" (ಈಶಾವಾಸ್ಯ). ಸಕಲ ಜಡಚೇತನ ಪ್ರಪಂಚವೂ ಈಶನಿಂದ ಆವಾಸ್ಯವಾಗಿದೆ. "ಸ್ವತಃಪ್ರವೃತ್ತ್ಯಶಕ್ಯತ್ವಾತ್ ಈಶಾವಾಸ್ಯಮಿದಂ ಜಗತ್" (ಈಶಾವಾಸ್ಯಭಾಷ್ಯ). ಜಡಚೇತನ ಜಗತ್ತಿಗೆ ಸ್ವತಃಪ್ರವೃತ್ತಿ ಇಲ್ಲದಿದ್ದ ಕಾರಣ ಈ ಜಗತ್ತು ಈಶಪ್ರವಿಷ್ಟ ಮತ್ತು ಈಶಾವಾಸ್ಯವಾಗಿದೆ. ಸೃಷ್ಟ್ಯಾದ್ಯಷ್ಟಕಕ್ಕೆ ಸಂಬಂಧಪಟ್ಟ ಇನ್ನೊಂದು ಗುಣವೆಂದರೆ "**ಸರ್ವಗತತ್ವ**". "ವಿಶ್ವಂವಿಷ್ಣುರ್ವಷಟ್ಕಾರೋ ಭೂತ ಭವ್ಯಭವತ್ಪ್ರಭುಃ" ವಿಷ್ಣುಸಹಸ್ರನಾಮ. ವಿಷಲ್ರ್ ವ್ಯಾಪ್ತೌ-ಧಾತು. ವಿಷ್ಣು-ಸರ್ವತ್ರವ್ಯಾಪ್ತನಾಗಿದ್ದಾನೆ. **ಸರ್ವಗತನಾಗಿದ್ದಾನೆ.**

ಈಗ ಮೊದಲಿನ ಮೂರು ವಿಶೇಷಣಗಳನ್ನು ಒಟ್ಟಿಗೆ ಚಿಂತನೆ ಮಾಡಿದರೆ ಪರಮಾತ್ಮನ ಇನ್ನೊಂದು ಗುಣವ್ಯಕ್ತವಾಗುವುದು.

ಲಕ್ಷ್ಮೀಪತಿತ್ವ – ಬ್ರಹ್ಮಾದಿವಂದ್ಯತ್ವ – ಸೃಷ್ಟ್ಯಾದ್ಯಷ್ಟಕರ್ತೃತ್ವ

ಇವೆಲ್ಲವೂ ಅಸ್ವತಂತ್ರ ಜಗತ್ ಆದ್ದರಿಂದಲೂ, ನಿಯಮೇನ ಸೃಷ್ಟ್ಯಾದ್ಯಷ್ಟಕದಲ್ಲಿ ಒಂದಾದ್ದರಿಂದಲೂ ಪರಮಾತ್ಮನು ಅಸ್ವತಂತ್ರ ಜಗತ್ತಿಗೆ "ನಿಯಾಮಕ" ನಾಗಿದ್ದಾನೆ.

ಈ ಮೂರು ಪ್ರಥಮ ವಿಶೇಷಣಗಳನ್ನು ಸಮೂಹಾಲಂಬತ್ವೇನ ವಿಚಾರ ಮಾಡಿದರೆ ಪರಮಾತ್ಮನಲ್ಲಿ "ನಿಯಾಮಕತ್ವ" ಗುಣವುಧೃಡಯಿತು. ಇನ್ನು ನಾಲ್ಕನೆಯ ವಿಶೇಷಣವನ್ನು ಆವಲೋಕಿಸುವಾ. "ಕೈವಲ್ಯದಾಯಕತ್ವ" ಕೈವಲ್ಯ ಮೋಕ್ಷವು ಮೂರನೆಯ ವಿಶೇಷಣದಲ್ಲಿಯೇ ಅಡಕವಾದ ಮೇಲೆ ಪುನಃ "ಕೈವಲ್ಯ ದಾಯಕತ್ವ" ಎಂಬ ವಿಶೇಷಣವನ್ನು ಬಳಸಲು ಏನುಕಾರಣ. ಪುನರುಕ್ತಿ ಎಂಬ ದೋಷವು ಬರಲಿಕ್ಕಿಲ್ಲವೇ. ಇಲ್ಲ. ಯಾಕೆಂದರೆ—

ತೃತೀಯ ವಿಶೇಷಣದಲ್ಲಿ ಮೋಕ್ಷ ಕಾರಣತ್ವವಿದ್ದರೂ ಅನೇಕ ಸಮಯಿಗಳು "ಜ್ಞಾನಾತ್ ಮೋಕ್ಷ", "ಜ್ಞಾನೇನೈವ ಪರಂಪದಂ" ಇತ್ಯಾದಿ ವಾಕ್ಯಗಳಿಂದ ಈ ಮೋಕ್ಷ ವಿಷಯದಲ್ಲಿ ಕೊಡುವವರದಾಗಲಿ ತೆಗೆದುಕೊಳ್ಳುವವರದಾಗಲಿ ಅವಶ್ಯಕತೆ ಇದ್ದಂತೆ ಕಾಣುವುದಿಲ್ಲ. ತಾನಾಗಿಯೇ ಬರುವುದು ಎಂಬ ಭಾವನೆ. ಆದರೆ ವಸ್ತುಸ್ಥಿತಿಯಿಂದ ಹಾಗಲ್ಲ. ಪರಮಾತ್ಮನ ಅಪರೋಕ್ಷಜ್ಞಾನ, ಅವನ ಪ್ರಸಾದ; ತದ್ವಾರ ಮೋಕ್ಷವೆಂದು ಸ್ಮೃತಿಗಳಲ್ಲಿ ಉಕ್ತವಾಗಿದೆ.

**"ಅಜ್ಞಾನಾಂ ಜ್ಞಾನದೋ ವಿಷ್ಣುಃ ಜ್ಞಾನಿನಾಂ ಮೋಕ್ಷದಃಪ್ರದಃ ।**
**ಆನಂದದಶ್ಚಮುಕ್ತಾನಾಂ ಸಏವೈಕೋ ಜನಾರ್ದನಃ ॥"**

**(ಅನುವ್ಯಾಖ್ಯಾನ)**

ಇಂಥ ಭ್ರಮನಿರಸನೆ ಮಾಡಲಿಕ್ಕೂ ಮತ್ತು ದಾತೃ-ದೇಯ ಭಾವವಿದೆಯೆಂದು ಸ್ಪಷ್ಟೀಕರಣ ಮಾಡಲಿಕ್ಕೂ ಈ ಚತುರ್ಥ ವಿಶೇಷಣ "ಕೈವಲ್ಯದಾಯಕತ್ವ" ಎಂದು ಉಪಾದಾನ ಮಾಡಿದ್ದಾರೆ.

ಇನ್ನು ಈ ನಾಲ್ಕು ವಿಶೇಷಣಗಳನ್ನು ಒಂದುಗೂಡಿ ಅವಲೋಕಿಸುವಾ.

ಲಕ್ಷ್ಮೀಪತಿತ್ವ + ಬ್ರಹ್ಮಾದಿವಂದ್ಯತ್ವ + ಸೃಷ್ಟ್ಯಾದ್ಯಷ್ಟಕರ್ತೃತ್ವ + ಕೈವಲ್ಯದಾಯಕತ್ವ. ಇವೆಲ್ಲವೂ ಸೇರಿದರೆ, ಇದರಲ್ಲಿ ಮುಕ್ತನಿಯಾಮಕತ್ವವೂ ಇರುವುದರಿಂದ ಪರಮಾತ್ಮನಿಗೆ "ಸರ್ವೋತ್ತಮತ್ವವು" ಎಂಬುದೊಂದು ಗುಣವು ವ್ಯಕ್ತವಾಗುತ್ತದೆ. ಮುಕ್ತಿಯನ್ನು ಕೊಡುವುದಷ್ಟೇ ಅಲ್ಲ, ಅಧಿಕಾನಂದದಾಯಕನೂ ಮತ್ತು ಆನಂದಹ್ರಾಸ ಮಾಡತಕ್ಕವನೂ ಆದ್ದರಿಂದ ಮುಕ್ತನಿಯಾಮಕತೆ ಸಿದ್ಧವಾಗಿ, "ಸರ್ವೋತ್ತಮತ್ವ" ಸ್ಪಷ್ಟವಾಯಿತು.

ಈ ಪ್ರಕಾರ ಶ್ರೀಜಗನ್ನಾಥದಾಸರು ಉಪಾದಾನ ಮಾಡಿದ ನಾಲ್ಕು ವಿಶೇಷಣಗಳಿಂದ ಅಥವಾ ಗುಣಗಳಿಂದ ಶಾಸ್ತ್ರದೃಷ್ಟಿಯಿಂದ ನೋಡಲಾಗಿ ಅಧಿಕ ಗುಣಗಳು ವ್ಯಕ್ತಪಡುತ್ತವೆ. ನಾವು ಇದುವರೆಗೆ ವಿಚಾರ ಮಾಡಿದ್ದನ್ನು ಒಂದೆಡೆ ಕ್ರೋಢೀಕರಿಸಿ ನೋಡುವಾ ನಾಲ್ಕರಿಂದ ಹತ್ತಾದದ್ದು.

| | |
|---|---|
| ಲಕ್ಷ್ಮೀಪತಿತ್ವ<br>ಬ್ರಹ್ಮಾದಿ ವಂದ್ಯತ್ವ<br>ಸೃಷ್ಟ್ಯಾದ್ಯಷ್ಟಕರ್ತೃತ್ವ<br>ಕೈವಲ್ಯದಾಯಕತ್ವ | ಗುಣಪೂರ್ಣತ್ವ<br>ದೋಷದೂರತ್ವ<br>ಅಕ್ಷರವಂದ್ಯತ್ವ<br>ಕ್ಷರವಂದ್ಯತ್ವ<br>ಪುರುಷೋತ್ತಮತ್ವ<br>ಸ್ವತಂತ್ರತ್ವ<br>ಸರ್ವಜ್ಞತ್ವ<br>ನಿಯಾಮಕತ್ವ<br>ಸರ್ವಗತತ್ವ<br>ಸರ್ವೋತ್ತಮತ್ವ. |

ದಶ ಎಂದರೆ ಪೂರ್ಣ. ಈ ಪೂರ್ಣಪ್ರಮತಿಯು ಶಾಸ್ತ್ರದಿಂದ ಅವಲೋಕಿಸಿದರೆ ಎಲ್ಲ ಕಡೆಯೂ ಪೂರ್ಣನೇ ಕಾಣುತ್ತಾನೆ.

ಹೀಗೆ ಒಂದು ಗುಣದಲ್ಲಿ ಅನೇಕ–ಅನಂತ ಗುಣಗಳಿರುವದು ಅನೈಸರ್ಗಿಕ

ವಲ್ಲ. ದಾಸವರ್ಯರೇ ಈ ವಿಷಯವನ್ನು ಮುಂದಿನ ಗ್ರಂಥದಲ್ಲಿ ಸ್ಪಷ್ಟ ಪಡಿಸುತ್ತಾರೆ.

“ಒಂದು ಗುಣದೊಳನಂತ ಗುಣಗಳು। ಒಂದುರೂಪದೊಳಿಹವು
ಲೋಕಗ। ಳೊಂದೆರೂಪವಧರಿಸಿ ತದ್ಗ ಪದಾರ್ಥ ಒಳಹೊರಗೆ ॥
ಬಾಂದಳದವೋಲಿದ್ದು ಬಹುಪೆಸ । ರಿಂದ ಕರೆಸುತ
ಪೂರ್ಣಜ್ಞಾನಾ ।
ನಂದನುಯು ಪರಿಪರಿ ವಿಹಾರವಮಾಡಿ ಮಾಡಿಸುವಾ ॥”

“ಒಂದರೊಳಗೊಂದೊಂದು ಬೆರೆದಿಹ । ವಿಂದಿರೇಶನ
ರೂಪಗುಣಗಳು ಮನ ।
ಬಂದತೆರದಲಿ ಚಿಂತಿಸಿದಕನುಮಾನ ವಿನಿತಿಲ್ಲ ॥”
“ವಾಸುದೇವನ ಗುಣಸಮುದ್ರದೊ । ಳೀಸಬಲ್ಲವ
ಭವಸಮುದ್ರಾ
ಯಾಸವಿಲ್ಲದೆ ಜಗದೊಳಗೆ ದಾಂಟುವನು ಶೀಘ್ರದಲಿ ॥”

ಒಂದು ಗುಣದೊಳು ಅನಂತಗುಣಗಳನ್ನು ಕಾಣಲು–ತಿಳಿಯಲು ನಮ್ಮ ಮಂದ ಬುದ್ಧಿಗೆ ಆಗುವದೇ ಇಲ್ಲ. ಆದರೆ ಕೆಲವು ಗುಣಗಳನ್ನು ತಿಳಿಯಲು ಈ ಮನನ ಪ್ರಯತ್ನ. ಈ ಅಲ್ಪಪ್ರಯತ್ನದಿಂದಲೇ ಶ್ರೀಹರಿಯು ಪ್ರೀತನಾಗಲಿ.

|| ಹರಿಃ ಓಂ ||

ಳ

# ಶ್ರೀಜಗನ್ನಾಥದಾಸರ ಉಪಮಾನಗಳು

## "ಉಪಮಾ ಜಗನ್ನಾಥದಾಸಸ್ಯ"

ಮಹಾಕವಿ ಕಾಳಿದಾಸನು ಬಹುಜನ ಭಾರತೀಯರಿಗೆ ಪರಿಚಿತವಾದ ವ್ಯಕ್ತಿ. ಸಂಸ್ಕೃತಾಭಿಜ್ಞರಿಗೆ ವಿಶೇಷ ಪರಿಚಯುವೆನ್ನೋಣ. ಇತರರಿಗೆ ಸಾಮಾನ್ಯ. ಈ ಕವಿಯು ಎಂಟನೆಯ ಶತಮಾನದಲ್ಲಿ ಭೋಜರಾಜನ ಆಸ್ಥಾನದಲ್ಲಿ ಗೌರವಿಸಲ್ಪಟ್ಟವನೆಂದು ಇತಿಹಾಸದಿಂದ ತಿಳಿದುಬರುತ್ತದೆ.

ಪ್ರಾಚೀನ ಕಾಲದಲ್ಲಿ ಸಂಸ್ಕೃತದಲ್ಲಿ ಬರೆದ ಕಾವ್ಯಗಳು, ನಾಟಕಗಳು, ಪ್ರಬಂಧಗಳು, ಕಾದಂಬರಿಗಳು ಮತ್ತು ಅನೇಕ ಧಾರ್ಮಿಕ/ಆಧ್ಯಾತ್ಮಿಕ ಗ್ರಂಥಗಳು ಈಗಲೂ ಉಪಲಬ್ಧ ಇವೆ. ಆಗಿನ ಕಾಲದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ವಿಚಾರಗಳನ್ನು ಪ್ರಾಯಶಃ ಸಂಸ್ಕೃತ ಮಾಧ್ಯಮದಲ್ಲಿಯೇ ಬರೆಯುತಕ್ಕ ರೂಢಿ ಇತ್ತೆಂದು ತೋರುತ್ತದೆ. ಈ ಸಂಸ್ಕೃತ ಭಾಷೆಯ ಮೂಲಕವೇ, ಆ ಸೇತು ಹಿಮಾಚಲ, ಧಾರ್ಮಿಕ, ಸಾಮಾಜಿಕ ಐಕಮತ್ಯವನ್ನು ಸಾಧಿಸಲು ನಮ್ಮ ಪ್ರಾಚೀನರಿಗೆ ಸಾಧ್ಯವಾಯಿತು. ಈಗಿನಷ್ಟು ಸಾರಿಗೆ ಸಂಪರ್ಕ, ಅಂಚೆ ವ್ಯವಸ್ಥೆ ಇಲ್ಲದೇಹೋದರೂ, ಆಗಿದ್ದ ಸೌಕರ್ಯಗಳಲ್ಲಿಯೇ ನಮ್ಮ ಪೂರ್ವಿಕರು ಅಷ್ಟು ಸಾಧಿಸಿದ್ದು ಆಶ್ಚರ್ಯವೇ.

ಕಾಳಿದಾಸನ ಕೃತಿಗಳೆಲ್ಲವೂ ಸಂಸ್ಕೃತ ಭಾಷೆಯಲ್ಲಿವೆ. ಕೆಲವನ್ನು ಹೇಳಬೇಕೆಂದರೆ ರಘುವಂಶ, ಕುಮಾರಸಂಭವ, ಅಭಿಜ್ಞಾನ ಶಾಕುಂತಲ. ಕಾಳಿದಾಸನ

ಕೃತಿಗಳಲ್ಲಿ ಮುಖ್ಯವಾಗಿ ನಾಲ್ಕು ಬಗೆಯ ವೈಶಿಷ್ಟ್ಯಗಳನ್ನು ಕಾಣಬಹುದು. ಅವನು ತನ್ನ ಕೃತಿಗೆ ಆರಿಸಿದ ವಿಷಯ, ಕೀರ್ತಿಶಾಲಿ ವ್ಯಕ್ತಿಗಳ ಮುಖ್ಯಪಾತ್ರ, ಉಚಿತ ಹೇರಳ ಉಪಮಾನಗಳು ಮತ್ತು ಭಾಷಾಲಂಕಾರ ಶಬ್ದ ಪ್ರಯೋಗ ಸೌಂದರ್ಯ, ಇವುಗಳು ಆತನ ಕೃತಿಗಳನ್ನು ಅಜರಾಮರವನ್ನಾಗಿಮಾಡಿವೆ. "ಉಪಮಾಕಾಳಿದಾಸಸ್ಯ" ಎಂಬುದು ಅವನ ಕೃತಿ ಚಮತ್ಕೃತಿಗಳಿಗೆ ಸಂಬಂಧಪಟ್ಟ ಒಂದು ನಾಣ್ಣುಡಿ.

ಕವಿಯು, ಪ್ರಕೃತ ಕಾಳಿದಾಸನು, ಪದಾರ್ಥಗಳನ್ನಾಗಲಿ, ನಿಸರ್ಗ ವನ್ನಾಗಲಿ, ಜೀವನವನ್ನಾಗಲಿ, ಸೌಂದರ್ಯ/ಮಾಧುರ್ಯಗಳನ್ನಾಗಲಿ ನೋಡುವರೀತಿಗೂ ಮತ್ತು ಜನಸಾಮಾನ್ಯರು ನೋಡುವರೀತಿಗೂ ಬಹಳ ಅಂತರವಿದೆ. ಉದಾಹರಣೆಗೆ ;— ಹಿಮಾಲಯ ಪರ್ವತವು ಜನಸಾಮಾನ್ಯರಿಗೆ ಹಿಮದಿಂದ ಕೂಡಿದ ಬೆಟ್ಟಗಳಶ್ರೇಣಿ, ಛಳಿ ಹೆಚ್ಚು, ಬೆಳ್ಳಗಿರುವ ಪರ್ವತ, ಹತ್ತುವುದುಕಷ್ಟ, ಬದರೀನಾಥಯಾತ್ರೆ ಇತ್ಯಾದಿಗಳು ಅನಿಸಿದರೆ, ಕಾಳಿದಾಸನಿಗೆ ಈ ಪರ್ವತವು ಉತ್ತರದಲ್ಲಿ ಪೂರ್ವಪಶ್ಚಿಮವಾಗಿ ಬಿದ್ದಂಥ ಭೂಮಂಡಲ ವನ್ನಳೆಯುವ ಅಳತೆಗೋಲು (ಮಾನದಂಡಃ).

ರಘುವಂಶದಲ್ಲಿ ಪ್ರಥಮ ಚಕ್ರವರ್ತಿಯಾದ ದಿಲೀಪನು ನಮಗೆ ಕೇವಲ ಚಕ್ರವರ್ತಿಯಾಗಿಕಂಡರೆ, ಕಾಳಿದಾಸನಿಗೆ ವೇದಗಳಿಗೆ ಪ್ರಥಮೋಚ್ಚಾರಣ ಮಾಡ ತಕ್ಕ "ಓಂ" ಕಾರದಂತೆ ಭಾಸವಾಗುತ್ತಾನೆ.

ಸರೋವರದಲ್ಲಿರುವ ಕಮಲಗಳು ನಮ್ಮಂಥ ಸಾಮಾನ್ಯರಿಗೆ ಕೇವಲ ಕಮಲಪುಷ್ಪಗಳಂತೆ ಕಂಡರೆ, ಕವಿಗೆ ಅದರಲ್ಲಿ ಮುಖ, ನಯನ, ಕರ, ಪಾದಗಳ ಸೌಂದಯವು ಕಾಣುತ್ತದೆ. ಅದೇ ರೀತಿ ಚಂದ್ರನಲ್ಲಿ ಕವಿ ಕಾಣುವುದು ಅಹ್ಲಾದ ವ್ಯಂಜಕತ್ವ ಮತ್ತು ಮುಖಕಾಂತಿ. ಶಶಿವದನೆ ಎಂದು ವರ್ಣನೆ.

ದುಷ್ಯಂತನ ರಥದಲ್ಲಿರುವ ಧ್ವಜಸ್ತಂಭ ಮತ್ತು ಬಾವುಟಗಳು ನಮಗೆ ಸ್ತಂಭ ಬಾವುಟಗಳಾಗಿ ಕಂಡರೆ, ಕಾಳಿದಾಸನಿಗೆ ಅವು ದುಷ್ಯಂತನ ತನುಮನಗಳಂತೆ

ಕಾಣುತ್ತವೆ. ಹೀಗೆ ಅವನ ಕೃತಿಗಳಲ್ಲಿ ಒಂದಲ್ಲ ಎರಡಲ್ಲ, ಉಪಮಾನಗಳು ನಿಬಿಡವಾಗಿ ತುಂಬಿವೆ. ಓದುವವರಿಗೆ ಅದೆಂಥ ಸಂತೋಷವಾಗುವದು ! ಹೀಗೆ ಕಾಳಿದಾಸನು ವಿವಿಧ ಕ್ಷೇತ್ರಗಳಿಂದ ಆಯ್ದು ಉಚಿತ ಉಪಮಾನಗಳು ಅವನ ಕಾವ್ಯ ನಾಟಕಗಳ ಕೃತಿಗೆ ಶ್ರೇಯಸ್ಸನ್ನು ತಂದಿವೆ.

ಈ ಮಹಾಕವಿಯು ಗತಿಸಿದ ಒಂದು ಸಾವಿರ ವರ್ಷಗಳಾದ ನಂತರ ಹದಿನೆಂಟನೆಯ ಶತಮಾನದಲ್ಲಿ ಇನ್ನೊಬ್ಬ ಪ್ರತಿಭಾವಂತ ಕವಿಯು ಕರ್ನಾಟಕದಲ್ಲಿ ಉದಯಿಸಿದರು. ಇವರ ಮೊದಲಿನ ಹೆಸರು, ಶ್ರೀನಿವಾಸಾಚಾರ್ಯರು. ತಂದೆಯ ಹೆಸರು ನರಸಿಂಹದಾಸರು. ಊರು ಮಾನವಿ, ಜಿಲ್ಲೆ-ರಾಯಚೂರು, ಕರ್ನಾಟಕ. ಇವರು ಮೊದಲು ಸಮಗ್ರ ಶಾಸ್ತ್ರಗಳನ್ನು ಸಂಸ್ಕೃತದಲ್ಲಿ ಅಧ್ಯಯನ ಮಾಡಿ ಖ್ಯಾತಿವೆತ್ತ ಪಂಡಿತರಾಗಿದ್ದರು. ಜೀವನದಲ್ಲಿ ಅರ್ಧಕಳೆದನಂತರ ಕೆಲವು ಆಕಸ್ಮಿಕ ಘಟನೆಗಳ ಕಾರಣಗಳಿಂದಾಗಿ ಇವರು, ಭೃಗ್ವಂಶ ಸಂಭೂತರಾದ ಶ್ರೀವಿಜಯದಾಸರ ಸಂಪರ್ಕಪಡೆದು ತರುವಾಯ ಅವರ ಶಿಷ್ಯರಾದ ಶ್ರೀಗೋಪಾಲದಾಸರಲ್ಲಿ ಶಿಷ್ಯತ್ವಪಡೆದರು. ತರುವಾಯ ಪಂಢರಪುರಕ್ಷೇತ್ರದಲ್ಲಿ ಇವರಿಗೆ "ಜಗನ್ನಾಥವಿಠಲ" ಎಂಬ ಅಂಕಿತ ದೊರಕಿತು. ಅಂದಿನಿಂದ ಇವರು ಜಗನ್ನಾಥದಾಸರೆಂದು ಪ್ರಸಿದ್ಧರಾದರು. ನಂತರ ಪದ, ಪದ್ಯ ಮತ್ತು ಸುಳಾದಿಗಳು ಕವನರೂಪದಲ್ಲಿ ಪ್ರವಹಿಸಿದವು. ಇವರ ಕೃತಿಗಳಲ್ಲಿ ಉತ್ತಮೋತ್ತಮ ಕೃತಿ ಎಂದರೆ "ಹರಿಕಥಾಮೃತಸಾರ". ಈ ಪದ್ಯಗ್ರಂಥದಲ್ಲಿ 985 ಭಾಮಿನಿ ಪಟ್ಟದಿಯ ಪದ್ಯಗಳಿವೆ. ಈ ಗ್ರಂಥವನ್ನು ಓದಿದ ಸಂಸ್ಕೃತಾಭಿಜ್ಞರಿಗೆ ಕವಿ ಕಾಳಿದಾಸನ ಸ್ಮರಣೆ ಬಾರದೇ ಇರದು. ಅದರಲ್ಲಿಯೂ ಉಪಮಾನಗಳ ಸ್ಮರಣೆ.

ಜಗನ್ನಾಥದಾಸರಾದರೂ ಕವನ ರಚನೆಯಲ್ಲಿ ಚತುರರು. ಇವರ ಕಾವ್ಯ ಪ್ರತಿಪಾದ್ಯ 'ಶ್ರೀಹರಿ' ವಿಷಯ "ಹರಿಕಥಾಮೃತಸಾರ". ಇದಕ್ಕಿಂತ ಉತ್ತಮನಾದ ಕಥಾನಾಯಕನಾಗಲಿ ಅಥವಾ ಉತ್ತಮ ವಿಷಯವಾಗಲಿ ಸಿಗಲಾರದು. ಉಪಮಾನ ಪ್ರಯೋಗದಲ್ಲಿ ದಾಸರು ಬಹಳ ಕುಶಲರು. ಇವರವೂ ಪಕ್ವ ವಿಚಾರಗಳು. ಶ್ರೇಷ್ಠಕವಿಹೃದಯ. ಪದಾರ್ಥಗಳನ್ನು ವ್ಯಕ್ತಿಗಳನ್ನು, ನಿಸರ್ಗವನ್ನು, ಅಧ್ಯಾತ್ಮವನ್ನು, ದೇವದೇವತೆಗಳನ್ನು, ಶಾಸ್ತ್ರಗಳನ್ನು, ಧರ್ಮಾದಿ

ಪಾರಮಾರ್ಥಿಕವಿಷಯಗಳನ್ನು ಬಹಳ ಆಳವಾಗಿ ಮತ್ತು ಸೂಕ್ಷ್ಮವಾಗಿ ಕವಿದೃಷ್ಟಿಯಿಂದ ನೋಡಿದ್ದಾರೆ. ತಿಳಿದಿದ್ದಾರೆ.

ಇವರ ಕವನಗಳನ್ನೋದಿದ ಮೇಲೆ ಅನಿಸುತ್ತದೆ, ಕಾಳಿದಾಸನಕಿಂತ ಜಗನ್ನಾಥದಾಸರು ಉಪಮಾನ ಪ್ರಯೋಗದಲ್ಲಿ ಯಾವ ರೀತಿಯೂ ಕಡಿಮೆಇಲ್ಲ. ಸ್ವಲ್ಪಹೆಚ್ಚು ಎಂದರೆ ಉತ್ಪ್ರೇಕ್ಷೆಯಾಗಲಾರದು. ಆ ಅಂಶಗಳನ್ನು ಮುಂದೆ ನೋಡುವಾ. ಆದ್ದರಿಂದ ಈಗ ನಾವು "ಉಪಮಾ ಜಗನ್ನಾಥದಾಸಸ್ಯ" ಎಂಬ ಉದ್ಗಾರಕ್ಕೆ/ಕೀರ್ತಿಗೆಕಾಲ ಒದಗಿದೆ. ಅಂದಾಜು ಸಾವಿರ ಪದ್ಯಗಳಿರತಕ್ಕ ಗ್ರಂಥ "ಹರಿಕಥಾಮೃತಸಾರ" ದಲ್ಲಿ ಸಾವಿರ ಪದ್ಯಗಳ ಪೈಕಿ ಸುಮಾರು ಮುನ್ನೂರಕ್ಕಿಂತಲೂ ಹೆಚ್ಚು ಪದ್ಯಗಳಲ್ಲಿ ಉಪಮಾನಗಳು ವಿರಾಜಮಾನವಾಗಿವೆ.

ಇದೇನು, ಇಷ್ಟು ಉಪಮಾನಗಳನ್ನು ಪ್ರಯೋಗ ಮಾಡುವದರ ಪ್ರಯೋಜನವೇನು ? ಈ ಉಪಮಾನಗಳು ಪ್ರಮಾಣಗಳೋ ಸುಮ್ಮನೇ ಅಲಂಕಾರಗಳೋ ಅಥವಾ ಕವಿಚಾತುರ್ಯವೋ ಎಂಬ ಕುತೂಹಲ ಓದುಗರಿಗೆ ಒಂದಿಲ್ಲೊಂದು ಸಲ ಅನಿಸುತ್ತದೆ. ಉಪಮಾನಗಳನ್ನು ನೈಯಾಯಿಕರು ಮತ್ತು ಅದ್ವೈತಿಗಳು ಪ್ರತ್ಯೇಕ ಪ್ರಮಾಣಗಳಾಗಿಟ್ಟುಕೊಂಡಿದ್ದಾರೆ. ಆದರೆ ಮಧ್ವಸಿದ್ಧಾಂತದಲ್ಲಿ ಉಪಮಾನವು ಪ್ರತ್ಯೇಕ ಪ್ರಮಾಣವಲ್ಲ. ಆದರೆ ಅದು ಅನುಮಾನದಲ್ಲಿಯೇ ಅಂತರ್ಭಾವವಾಗಿದೆ.

"ಅರ್ಥಾಪತ್ತಿಶ್ಚೋಪಮಾಚ ಹ್ಯನುಮಾಭೇದವಿವತಃ"

||ವಿಷ್ಣು ತತ್ವನಿರ್ಣಯ||

ಜಗನ್ನಾಥದಾಸರ ಉಪಮಾನಗಳ ಕಡೆಗೆ ನೋಡುವ ಮೊದಲು ಕಾಳಿದಾಸನ ಒಂದು ಮಾತನ್ನು ನೆನಪಿಗೆ ತಂದುಕೊಳ್ಳುವಾ. ಕಾಳಿದಾಸನು ಮಾಳವಿಕಾಗ್ನಿಮಿತ್ರ ನಾಟಕವನ್ನು ಪ್ರೇಕ್ಷಕರ ಮುಂದೆ ಇಟ್ಟಾಗ ಅವನಿಗೆ ಒಂದು ತಡೆ ಇತ್ತು. ಅದೇನೆಂದರೆ ಅವನ ಪೂರ್ವದಲ್ಲಿದ್ದ ನಾಟಕ ಕರ್ತೃಗಳು ಆಗಲೇ ಉತ್ತಮ ನಾಟಕಗಳನ್ನು ಬರೆದು ಪ್ರಕಟಿಸಿ ಜನಾನುರಾಗಿಗಳಾಗಿ ಪ್ರಸಿದ್ಧರಾಗಿದ್ದರು. ಅವರು ಕಾಳಿದಾಸನ ನಾಟಕ ನೋಡುವರೊ ಇಲ್ಲವೊ ಎಂಬ ಸಂದೇಹ. ಅವನು ನಾಟಕ ಪ್ರಾರಂಭದಲ್ಲಿ ಪ್ರೇಕ್ಷಕರನ್ನು ಕುರಿತು ಹೇಳುತ್ತಾನೆ.

**ಪುರಾಣ ಮಿತ್ಯೇವ ನ ಸಾಧು ಸರ್ವಂ ।**
**ನಚಾಪಿಕಾವ್ಯಂ ನವಮಿತ್ಯವದ್ಯಮ್ ॥**
**ಸಂತ: ಪರಿಕ್ಷಾನ್ಯತರಂ ಭಜಂತಿ ।**
**ಮೂಢಃ ಪರ ಪ್ರತ್ಯಯನೇಕ ಬುದ್ಧಿಃ ॥**

ಹಿಂದಿನದೆಲ್ಲ ಸಮೀಚೀನವೆಂದೂ, ಹೊಸದೆಲ್ಲವೂ ದೋಷಯುಕ್ತವೆಂದೂ ತಿಳಿಯುವದು ಅಸಮಂಜಸ. ಸಜ್ಜನರು ಪರೀಕ್ಷೆ ಬುದ್ಧಿಯಿಂದ ಅವಲೋಕಿಸಿ ಉತ್ತಮವಾದದ್ದನ್ನು ಗ್ರಹಿಸುತ್ತಾರೆ, ಆದರೆ ಮೂರ್ಖರದು ಒಂದೇ ದೃಷ್ಟಿ.

ಹೀಗೆಯೇ, ಹಿಂದೆ ಕಾಳಿದಾಸನು ಉಪಮಾನಕ್ಕೆ ಪ್ರಸಿದ್ಧಿ ಪಡೆದ ನಂತರ ಅವೇ ಕೊನೆಯ ಪ್ರಯೋಗಗಳಲ್ಲ. ಮುಂದೆ ಯಾರೂ ಉಪಮಾನ ಬಳಸ ಬಾರದೆಂದಿಲ್ಲ. ಹಾಗೆಯೇ ಜಗನ್ನಾಥದಾಸರ ಉಪಮಾನಗಳನ್ನೂ ವಿದ್ವಾಂಸರು ಪರೀಕ್ಷಿಸಿ ನೋಡುತ್ತಾರೆ. ಉಪೇಕ್ಷೆ ಮಾಡುವದಿಲ್ಲ.

ಕಾಳಿದಾಸನು ಪ್ರಾಯಶಃ ದೃಷ್ಟಪದಾರ್ಥಗಳಲ್ಲಿ/ವಿಷಯಗಳಲ್ಲಿ ಉಪಮಾನ ಉಪಮೇಯಗಳನ್ನರಸಿ ಪ್ರಯೋಗಿಸಿದರೆ, ಜಗನ್ನಾಥದಾಸರ ಕಾವ್ಯ ದಲ್ಲಿ ಬಹುಶಃ ಉಪಮಾನಗಳು ದೃಷ್ಟ, ಉಪಮೇಯಗಳು ಅದೃಷ್ಟ. ಅದೃಷ್ಟ ವೆಂದರೆ ಅತೀಂದ್ರಿಯ ಪದಾರ್ಥಗಳು. ಉದಾ : ಶ್ರೀಹರಿ, ಧರ್ಮಾ-ಧರ್ಮ, ಸ್ವರ್ಗ–ನರಕ, ದೇವತೆಗಳು, ಪುಣ್ಯ-ಪಾಪ, ಸ್ವರ್ಗ-ಮೋಕ್ಷ, ಕೈವಲ್ಯ-ವೈಕುಂಠ ಇತ್ಯಾದಿ. ಆಧ್ಯಾತ್ಮಕಾವ್ಯ–ಗ್ರಂಥವಾದ್ದರಿಂದ, ದಾಸರು ನಮಗೆ ದೃಷ್ಟ ಪ್ರಪಂಚದ ಉಪಮಾನಗಳಿಂದ ಅದೃಷ್ಟಪ್ರಪಂಚ-ದೇವಲೋಕದ-ಪರಮಾರ್ಥದ ಪರಿಚಯ ಮಾಡಿಸಿಕೊಡುತ್ತಾರೆ. ಶಬ್ದಾಲಂಕಾರದ ಸೊಗಸು, ಕಾವ್ಯದಲ್ಲಿ ಸೌಂದರ್ಯ, ಮಾಧುರ್ಯ ಮತ್ತು ಗಾಂಭೀರ್ಯಗಳು ಮೂರ್ತಿ ಮತ್ತಾಗಿ ನಿಂತಿವೆ. ಶಬ್ದಭಾಂಡಾರವಂತೂ ಕೇಳಲೇಬೇಕಾದ್ದಿಲ್ಲ. ಸಂದರ್ಭೋಚಿತ ಪದ ಪ್ರಯೋಗ, ವರ್ಣಾಭಿಮಾನಿ ದೇವತೆಗಳೇ ಪ್ರತ್ಯಕ್ಷನಿಂತಿದ್ದಾರೆಂಬಂತೆ ತೋರುತ್ತದೆ. ಓದುಗರು ಮೈಮರೆದು ಕವಿಪ್ರಪಂಚದಲ್ಲಿ, ಅಧ್ಯಾತ್ಮ ಪ್ರಪಂಚದಲ್ಲಿ ಅಥವಾ ದೇವಲೋಕದಲ್ಲಿ ಅಥವಾ ಭಗವಂತನ ಸಾನ್ನಿಧ್ಯದಲ್ಲಿ ಇದ್ದಂತೆ ಭಾಸವಾಗುತ್ತದೆ. ಕವನವನ್ನು ಓದುವಷ್ಟು ಸಮಯವಂತೂ ನಾವು

ನಿಜಕ್ಕೂ ಭೂಲೋಕವನ್ನು ಮರೆತಿರುತ್ತೇವೆ. ಹರಿಕಥಾಮೃತಸಾರದ ಫಲಸ್ತುತಿ ಸಂಧಿಯಲ್ಲಿ ಕಾವ್ಯದ ಕೆಲವು ಉತ್ತಮ ಗುಣಗಳು ನಮ್ಮ ಗಮನ ಸೆಳೆಯುತ್ತವೆ. ಉದಾಹರಣೆಗೆ—

"ಶ್ರೀ ಕೃತೀಪತಿ ಅಮಲ ಗುಣಗಳು । ಈ ಕೃತಿಯೊಳುಂಟಾದ ಬಳಿಕ ।
ಪ್ರಾಕೃತವೆ ಸಂಸ್ಕೃತದ ಸಡಗರವೇನು ಸುಗುಣರಿಗೆ ॥"

"ಮಥಿಸಿ ಮಧ್ವಾಗಮ ಪಯೋಬ್ಧಿಯ । ಕ್ಷಿತಿಗೆ ತೋರಿದ ಬ್ರಹ್ಮವಿದ್ಯಾ ।
ರತರಿಗೀಪ್ಸಿತ ಹರಿಕಥಾಮೃತಸಾರವೆನಿಸುವದು ॥"

"ಅಶ್ರುತಾಗಮ ಭಾವವಿದರ ಪ । ರಿಶ್ರಮವು ಬಲ್ಲವರಿಗಾನಂ ।
ದಾಶ್ರುಗಳ ಮಳೆಗರಿಸಿ ಮೈಮರೆಸುವ ಚಮತ್ಕೃತಿಯ ॥
ವಿಶ್ರುಗೆ ಮರೆಮಾಡಿ ದಿವಿಜರ । ಜಸ್ರದಲಿ ಕಾಯ್ದಿಪ್ಪರಿದರೊಳ ।
ಪಶ್ಯತಿಗಳ್ಕೈತಪ್ಪವೇ ನಿಜಭಕ್ತಿಯುಳ್ಳರಿಗೆ ॥"

"ಕೇಶವನ ಗುಣಮಣಿಗಳನು ಪ್ರಾ । ಣೇಶಗರ್ಪಿಸಿ ವಾದಿರಾಜರ ।
ಕೋಶಕೊಪ್ಪುವ ಹರಿಕಥಾಮೃತ ಸಾರ ಪೇಳುವರೇ"
"....ಲೋಕೈಕನಾಥನ । ಭಕ್ತಿಭಾಗ್ಯವ ಪಡೆದಜೀವ ॥
ನ್ಮುಕ್ತಗಲ್ಲದೆ ಹರಿಕಥಾಮೃತಸಾರ ಸೊಗಸುವದೇ ॥"

"ಒತ್ತಿಬಹ ವಿಘ್ನಗಳ ತಡೆದಪ । ಮೃತ್ಯುವಿಗೆ ಮರೆಮಾಡಿ ಕಾಲನ ।
ಭೃತ್ಯರಿಗೆ ಭೀಕರವ ಪುಟ್ಟಿಸಿ ಸಕಲ ಸಿದ್ಧಿಗಳ ॥
ವತ್ತಿಗೊಳ್ಳಿಸಿ ವನರುಹೇಕ್ಷಣ । ನೃತ್ಯಮಾಡುವನವನ ಮನೆಯೊಳು ।
ನಿತ್ಯಮಂಗಳ ಹರಿಕಥಾಮೃತ-ಸಾರ ಪಠಿಸುವರ ॥"

"ಕುರುಡಕುಂಗಳ ಪಡೆವ ಬಧಿರನಿ । ಗೆರಡು ಕೀವಿಕೇಳ್ಬಹವು
ಬೆಳೆಯೆುದ ।
ಮುರುಡ ಮುದಾನಕೃತಿಯು ತಾಳ್ವನು ಕೇಳ್ದಮಾತ್ರದಲಿ ॥"
"ಸತಿಯುರಿಗೆ ಪತಿಭಕುತಿ ಪತ್ನೀ । ವ್ರತ ಪುರುಷರಿಗೆ
ಹರಷನೆಲೆಗೊಂ ।
ಡತಿ ಮುನೋಹರವಾಗಿ ಗುರುಹಿರಿಯುರಿಗೆ ಜಗದೊಳಗೆ ॥"
"ಚಿಂತನೆಗೆ ಬಪ್ಪಂತೆ ಬಹುದೃ । ಷ್ಟಾಂತ ಪೂರ್ವಕವಾಗಿ
ಪೇಳ್ದಮ ।
ಹಂತರಿಗೆ ನರರೆಂದು ಬಗೆವರೆ ನಿರಯು ಭಾಗಿಗಳು ॥"
"ದುಷ್ಟರೆನ್ನದೆ ದುರ್ವಿಷಯುದಿಂ । ಪುಷ್ಟರೆನ್ನದೆ
ಪೂತಕರ್ಮ ।
ಭ್ರಷ್ಟರೆನ್ನದೆ ಶ್ರೀದವಿಠ್ಠಲ ವೇಣುಗೋಪಾಲ ॥
ಕೃಷ್ಣ ಕೈವಿಡಿಯುುವನು ಸುಸತ್ಯ ವಿಶಿಷ್ಟ
ದಾಸತ್ವವನು ಪಾಲಿಸೆ ನಿತ್ಯಮುಂಗಳ ಹರಿಕಥಾಮೃತಸಾರ
ಪಠಿಸುವರ ॥"

ಜಗನ್ನಾಥದಾಸರಿಗೆ ಕಾಳಿದಾಸನ ಕೃತಿಗಳನ್ನೋದತಕ್ಕ ಅವಕಾಶವಿತ್ತು. ಆದರೆ ಕಾಲಕೃತ ವೈಪರೀತ್ಯದಿಂದ ಕಾಳಿದಾಸನಿಗೆ, ಜಗನ್ನಾಥದಾಸರ ಗ್ರಂಥಗಳನ್ನು ನೋಡುವ ಸಂದರ್ಭ ಒದಗಲೇಇಲ್ಲ. ಉಪಮಾನ ಪ್ರಪಂಚದಲ್ಲಿ ನಿಸ್ಸೀಮರಾದ ಕವಿಗಳಿಬ್ಬರು ಸಂಧಿಸಿದ್ದರೆ ಅದೆಂಥ ರಸಮುಯ ಸಂದರ್ಭ. ಅಂಥ ಸಮುಯ ಒದಗಲಾರದು. ಹೆಚ್ಚಿನ ಊಹೆ ಏಕೆ!

ಕಾಳಿದಾಸನದು ಸಂಸ್ಕೃತಕಾವ್ಯಪ್ರಪಂಚ. ಸಂಸ್ಕೃತ ಸಾಹಿತ್ಯ ಲೋಕ. ಓದುಗರಿಗೆ ಕಾವ್ಯಾನಂದ. ಕವಿಯು ತನ್ನ ಕಾವ್ಯಗಳಿಗೆ ಎಲ್ಲಿಯೂ ಕೈವಲ್ಯಾದಿ ಪುರುಷಾರ್ಥಗಳಿವೆ ಎಂದು ಹೇಳಿಕೊಂಡಿಲ್ಲ. ಆದರೂ ಕಾಳಿದಾಸನ ಕೃತಿಗಳು ಸಂಸ್ಕೃತ ಕಾವ್ಯಪ್ರಪಂಚದಲ್ಲಿ ಒಂದು ಉನ್ನತಸ್ಥಾನಗಳಿಸಿವೆ. ಈ ಕೃತಿಗಳನ್ನೋದದ ಸಂಸ್ಕೃತಜ್ಞರೇ ಇಲ್ಲ.

ಜಗನ್ನಾಥದಾಸರದು ಕೇವಲ ಕಾವ್ಯಪ್ರಪಂಚವಲ್ಲ. ಅಧ್ಯಾತ್ಮಪ್ರಪಂಚ. ವೇದಾಂತ ಸಾಮ್ರಾಜ್ಯ. ಕೇವಲ ಪ್ರಾಕೃತಭಾಷೆಯ ಗ್ರಂಥವೆಂದು ಕಡೆಗಾಣಿಸು-ವಂತಹದಲ್ಲ. ಈ ಗ್ರಂಥಗಳನ್ನು ಅರ್ಥಮಾಡಿಕೊಂಡು ಪಠಣಪಾರಾಯಣ ಮಾಡಿದರೆ ಮತ್ತು ಜೀವನದಲ್ಲಿ ಉಕ್ತಅನುಷ್ಠಾನ ಮಾಡಿದರೆ ಸದ್ಗತಿ ಅಥವಾ ಮುಕ್ತಿದೊರೆಯುವದೆಂದು ಕವಿಗಳೇ ಸಾರಿದ್ದಾರೆ. ಅಲ್ಲದೇ ಇತರರು ಫಲಸ್ತುತಿ ಬರೆದಿದ್ದಾರೆ. ಈ ಕವನದ ಉದರದಲ್ಲಿ ಕೇವಲ ವೇದಾಂತವಡಗಿದೆ.

ಜಗನ್ನಾಥದಾಸರ ನಂತರ ಬಂದಂಥ ಸಂಸ್ಕೃತ-ಪ್ರಾಕೃತ-ದ್ವಿಭಾಷಾ ಪರಿಣಿತರಿಗೆ, ಪ್ರಕೃತ, ಪ್ರಸ್ತುತರಾದ ಕವಿಗಳಿಬ್ಬರ, ಕೃತಿಗಳನ್ನೋದುವ ಸೌಕರ್ಯವಿದೆ. ಹಾಗೆ ಓದಿದ ಮೇಲೆ ವಿಚಾರಶೀಲರು ವಿಮರ್ಶಾತ್ಮಕದೃಷ್ಟಿ ಉಳ್ಳವರು ಅವರವರ ಕೃತಿಗಳಲ್ಲಿ ಅಂತರ್ಗತವಾದ ಉಪಮಾನಗಳನ್ನು ವಿಶೇಷ ಕುತೂಹಲದಿಂದ ಪರಾಮರ್ಶೆ ಮಾಡುತ್ತಾರೆ. ತುಲನಾತ್ಮಕ ದೃಷ್ಟಿಯಿಂದ ಅಳೆಯುತ್ತಾರೆ. ಜಗನ್ನಾಥದಾಸರ ಕೃತಿಗಳು ಕರ್ನಾಟಕ ಭಾಷೆಯಲ್ಲಿರುವದರಿಂದ ಅದರ ರಸಜ್ಞತೆ ಕರ್ನಾಟಕಭಾಷಾ ಪರಿಚಿತರಿಗೆ ಮಾತ್ರ ಸೀಮಿತವಾಗಿದೆ. ಓದುಗರ ವ್ಯಾಪ್ತಿ ಕನ್ನಡಿಗರಿಗೆ ಮಾತ್ರ ಆವರಿಸಿದೆ. ಇಷ್ಟು ಕೊರತೆಯನ್ನು ಬಿಟ್ಟರೆ ಉಪಮಾನಗಳ ದೃಷ್ಟಿಯಿಂದ ಯಾವ ಕೊರತೆಯೂ ಇಲ್ಲ. ಜೊತೆಗೆ ಅಧ್ಯಾತ್ಮ ಗ್ರಂಥವಾದ್ದರಿಂದ ಕಾವ್ಯಾನಂದದೊಡನೆ ಅಧ್ಯಾತ್ಮಜ್ಞಾನ ಪುಣ್ಯ–ಪುರುಷಾರ್ಥಗಳೂ ಲಭಿಸುತ್ತವೆಂದು ಫಲಸ್ತುತಿ ಇದೆ.

ಪ್ರಕೃತ ನಮ್ಮ ಈ ಲೇಖನದ ದೃಷ್ಟಿಯಿಂದ ಓದುಗರಿಗೆ ಕಾಳಿದಾಸನ ಕೃತಿಗಳು ಈಗಾಗಲೇ ಸಾಕಷ್ಟು ಪರಿಚಿತವಾಗಿವೆ. ಓದಿ ಆನಂದ ಪಟ್ಟಿದ್ದಾರೆ. ಎಂದು ಭಾವಿಸಿ ಜಗನ್ನಾಥದಾಸರ ಉಪಮಾನಗಳ ಸ್ವಾರಸ್ಯದ ಕಡೆಗೆ ಗಮನ-ವನ್ನು ಹರಿಸುವಾ. ಉಪಮಾನಗಳು ಬಹು ಸಂಖ್ಯೆಯಲ್ಲಿದ್ದರೂ, ನಮ್ಮ ಬರಹವನ್ನು ವಿಶೇಷ ಬೆಳೆಸದೇ, ಬೇಸರಿಸದೇ ಕೇವಲ ಕೆಲವೇ ಉದಾಹರಣೆಗಳನ್ನು ದಿಕ್‌ಪ್ರದರ್ಶನಾರ್ಥವಾಗಿ ಇಲ್ಲಿ ಸೂಚಿಸುವ ಪ್ರಯತ್ನಮಾಡುವೆ.

1. ಶ್ರೀ ಜಗನ್ನಾಥದಾಸರ ಪ್ರಥಮ ಉಪಮಾನ. ಪರಮಾತ್ಮನು ಬ್ರಹ್ಮಾದಿಗಳ ಮನದಲ್ಲಿ ಹೇಗೆ ತೋರಿ ತೋರದಲೆ ಇರುತ್ತಾನೆ ಎಂದು :–

**ಪರಿಮಳವು ಸುಮನದೊಳಗನಳಸು । ಅರಣಿಯೊಳಗಿಪ್ಪಂತೆ ದಾಮೋ-।**
**ದರನು ಬ್ರಹ್ಮಾದಿಗಳ ಮನದಲಿ ತೋರಿ ತೋರದಲೆ ॥ 1-13 ॥**

ಹೇಗೆ ಹೂವಿನಲ್ಲಿ ಸುವಾಸನೆಯು ಸದಾವ್ಯಕ್ತವಾಗಿ ಇರುತ್ತದೋ ಹಾಗೆ ಬ್ರಹ್ಮವಾಯುಗಳ ಮನದಲ್ಲಿ ಪರಮಾತ್ಮನು ತೋರುತ್ತಾನೆ ಮತ್ತು ಅರಣಿ ಕಟ್ಟಿಗೆಯಲ್ಲಿ ಬೆಂಕಿಯು ಇದ್ದರೂ ಹೇಗೆ ಅದೃಶ್ಯವೋ ಹಾಗೆ ಇತರ ದೇವತೆಗಳ ಮನದಲ್ಲಿ ತೋರದಲೆ ಇರುತ್ತಾನೆ.

ಹೂವಿನಲ್ಲಿಯ ಪರಿಮಳವು ಅಪ್ರಯಾಸ ಲಬ್ಧ. ಅರಣಿಯಲ್ಲಿಯ ಅನಿಲನು ವ್ಯಕ್ತವಾಗಬೇಕಾದರೆ ಸ್ವಲ್ಪ ಪ್ರಯತ್ನಸಾಧ್ಯ. ಈ ರೀತಿ ತೋರಿ ತೋರದಲೆ ದಾಮೋದರನು ಇರುತ್ತಾನೆ ವ್ಯಕ್ತಾವ್ಯಕ್ತನಾಗಿ.

2. ಗ್ರಂಥಕರ್ತರು ತಮ್ಮ ಕೃತಿಯು ಹೇಗೆ ಗೌರವಾನ್ವಿತವಾಗುತ್ತದೆ ಎಂದು ದೃಷ್ಟಾಂತಪೂರ್ವಕ ಹೇಳುತ್ತಾರೆ.

**ಮಳೆಯ ನೀರೋಣಿಯಲಿ ಪರಿಯಲು । ಬಳಸರೂರೊಳಗಿದ್ದ ಜನರಾ ।**
**ಜಲವು ಹೆದ್ದೊರೆಗೂಡೆ ಮಜ್ಜನಪಾನಗೈದುವರು ॥**
**ಕಲುಷವಚನಗಳಾದರಿವು ಬಾಂ । ಬೊಳೆಯ ಪೆತ್ತನಪಾದ ಮಹಿಮಾ ।**
**ಜಲಧಿ ಪೊಕ್ಕದರಿಂದ ಮಾಣ್ದಪರೇ ಮಹೀಸುರರು ॥ 2-2 ॥**

ಹೇಗೆ ಮಳೆಯನೀರು ಬೀದಿಗಳಲ್ಲಿ ಹರಿದಾಗ ಅದು ಸ್ನಾನಪಾನಾದಿಗಳಿಗೆ ಯೋಗ್ಯವೆಂದು ಪರಿಗಣಿಸುವದಿಲ್ಲವೋ ಮತ್ತು ಅದೇ ನೀರು ಕೆರೆ–ಸರೋವರಗಳಿಗೆ ಸೇರಿದರೆ ಜನರು ಬಹು ಸಂತೋಷದಿಂದ ಸ್ನಾನಪಾನಾದಿಗಳಿಗೆ ಗ್ರಹಿಸುತ್ತಾರೋ, ಹಾಗೆಯೇ ಕೇವಲ ಗ್ರಂಥಕರ್ತರ ವಾಕ್ಯಗಳೆಂದು ಮಹೀಸುರರು ಮನ್ನಿಸದಿದ್ದರೂ, ಈ ವಾಕ್ಯಗಳು ಪರಮಾತ್ಮನ ಪಾದಮಹಿಮಾ ಸಾಗರವನ್ನು

ಸೇರಿದ್ದರಿಂದ ಸಜ್ಜನರಿಂದ ಗ್ರಾಹ್ಯವೇ ಆಗುತ್ತದೆ. ಈ ಉಪಮಾನವು ತತ್ವಪ್ರಕಾಶಿಕಾ ವ್ಯಾಖ್ಯಾನ ಗ್ರಂಥದಲ್ಲಿ ಶ್ರೀಟೀಕಾರಾಯರು ವಿವರಿಸಿದ ವಿಚಾರ ಸರಣಿಯಲ್ಲಿಯೇ ಇದೆ.

**ಗಂಗಾಸಂಗೇನ ನೈರ್ಮಲ್ಯಂ ರಥ್ಯಾದ್ಭಿರ್ಲಭ್ಯತೆ ಯಥಾ।**
**ವಾಚೋಽವಿಶುದ್ಧಿ ಶುಧ್ಯರ್ಥಂ ಸಂಗವ್ಯಂತೆ ಗುರೋರ್ಗಿರಃ ॥**
**॥ ತತ್ವಪ್ರಕಾಶಿಕಾ ॥**

3. ಪರಮಾತ್ಮನು ತನ್ನ ಭಕ್ತರನ್ನು ರಕ್ಷಣೆಮಾಡಲು ಎಷ್ಟು ಆತುರ ಉಳ್ಳವನಾಗಿರುತ್ತಾನೆ ಎಂಬ ವರ್ಣನೆ.

**ಜನನಿಯನು ಕಾಣದಿಹ ಬಾಲಕ। ನೆನೆನೆನೆದು ಹಲುಬುತಿರೆ ಕತ್ತಲೆ।**
**ಮನೆಯೊಳಗಿದ್ದವನ ನೋಡುತ ನಗುತ ಹರುಷದಲಿ ॥**
**ತನಯನಂ ಬಿಗಿದಪ್ಪಿರಂಬಿಸಿ। ಕನಲಿಕೆಯ ಕಳೆವಂತೆ ಮಧು**
**ಸೂದನನು ತನ್ನವರಿದ್ದೆಡೆಗೆ ಬಂದೊದಗಿಸಲಹುವನು ॥**

ಬಾಲಕನು ಕೆಲವುವೇಳೆ ಆಟವಾಡಿದ ನಂತರ ತಾಯಿಯಸ್ಮರಣೆ ಬರುತ್ತದೆ. ಹುಡುಕುತ್ತಾನೆ. ಸಿಗದಿರಲು ಕಾತರ, ಭಯ, ವಿಹ್ವಲಗಳಿಂದ ಕೂಡಿದವನಾಗಿ ಹಲುಬಿ ಅಳುತ್ತಾನೆ. ಇದನ್ನು ನೋಡುತ್ತ ಕತ್ತಲೆಮನೆಯಲ್ಲಡಗಿದ್ದ ತಾಯಿಯು ಮಗುವಿನ ಹತ್ತಿರಬಂದು ಅಪ್ಪಿಕೊಂಡು, ರಮಿಸಿ, ಕನಲಿಕೆಯನ್ನು ಕಳೆಯುವಂತೆ, ಮಧುಸೂದನನು ಹಲುಬುವ ತನ್ನ ಭಕ್ತರಿದ್ದೆಡೆಗೆ ಬಂದು ತಾಯಿಯೋಪಾದಿಯಲ್ಲಿ ಸಲಹುವನು.

ಅಲ್ಲರೀ, ನಾವು ಹಲುಬಿದೆವಲ್ಲ. ಪರಮಾತ್ಮ ಬರಲಿಲ್ಲ. ನಾವು ಹಲುಬಿದ್ದು ಪರಮಾತ್ಮನಿಗಾಗಿ ಅಲ್ಲ. ಏನನ್ನೋ ಕೇಳಿದೆವು. ಅದನ್ನವನು ಅವ್ಯಕ್ತನಾಗಿಯೇ ಕೊಟ್ಟ. ಆದ್ದರಿಂದ ಬರಲಿಲ್ಲ. ನಮಗಾಯ್ತು ಸಮಾಧಾನ.

4. ಶ್ರೀಹರಿಯು ತನ್ನ ಭಕ್ತರ ಮಾತುಗಳನ್ನು, ಆಲಿಸತಕ್ಕ ಬಗೆಯನ್ನು ವರ್ಣಿಸುತ್ತಾರೆ ಕವಿಗಳು.

**ಬಾಲಕನ ಕಲಭಾಷೆ ಜನನೀ। ಕೇಳಿಸುಖಪಡುವಂತೆ ಲಕ್ಷ್ಮೀ।**
**ಲೋಲಭಕ್ತರು ಮಾಡುತಿಹ ಸಂಸ್ತುತಿಗೆ ಹಿಗ್ಗುವನು ॥**

ಬಾಲಕನ ತೊದಲು ನುಡಿಗಳನ್ನು ಕೇಳಿ ಹೇಗೆ ತಾಯಿಯು ಸುಖಪಡು ವಳೋ ಹಾಗೆಯೇ ಲಕ್ಷ್ಮೀಲೋಲನು (ಶ್ರೀಹರಿಯು) ತನ್ನಭಕ್ತರು ಮಾಡತಕ್ಕ ಸ್ತೋತ್ರಗಳಿಂದ ಸಂತೋಷಪಟ್ಟು ಹಿಗ್ಗುವನು.

ಅಲ್ಲರೀ ಪರಮಾತ್ಮ ಪೂರ್ಣಕಾಮ–ಆನಂದಪೂರ್ಣ ಅವನಿಗೆ ಜನ್ಯಸುಖ ವಿಲ್ಲವಲ್ಲ ಎಂದರೆ, ನಿಜ. ಹೊಸದೇನೂ ಬೇಡವಾದರೂ, ಇದ್ದ ಆನಂದವೇ ಭಕ್ತರ ಸ್ತೋತ್ರಗಳಿಂದ ಆನಂದೋದ್ರೇಕವಾಗುವುದು ಎನ್ನುವಾ, ಹಾಲುಕ್ಕುವಂತೆ.

5. ತನ್ನ ಭಕ್ತರ ಅವಸರಕ್ಕೆ (ಆಪತ್ಸಮಯಗಳಲ್ಲಿ) ಶ್ರೀಹರಿಯು ಬಂದೊದಗತಕ್ಕ ವೇಗವನ್ನು ವರ್ಣಿಸುವ ಉಪಮಾನಗಳು.

**ಕಣ್ಣಿಗೆವೆಯೆಂದದಲಿ ಕೈನ್ಮೆ । ತಿಣ್ಣಿಗೊದಗುವ ತೆರದಿ ಪಲ್ಗಳು ।**
**ಪಣ್ಣುಫಲಗಳನಗಿದು ಜಿಹ್ವೆಗೆ ರಸವನೀವಂತೆ ॥**
**ಪುಣ್ಯಫಲವೀವಂದದಲಿ ನುಡಿ । ವೆಣ್ಣಿನಾಣ್ಮಾಂಡದೊಳು ಲಕ್ಷ್ಮಣ ।**
**ನಣ್ಣನೊದಗುವ ಭಕ್ತರವಸರಕ ಮರಗಣ ಸಹಿತ ॥2–27॥**

ಹೇಗೆ ರೆಪ್ಪೆಗಳು ಕಣ್ಣಿನ ಆಪತ್ತಿಗೊದಗುವವೋ, ಮೈಯಲ್ಲುಂಟಾದ ಕೆರೆತಕ್ಕೆ ಕೈ ಹೇಗೆ ಒದಗುವದೋ, ಆಪತ್ಕಾಲಗಳಲ್ಲಿ ಪುಣ್ಯದ ಫಲವು ಹೇಗೆ ತತ್‌ಕ್ಷಣದಲ್ಲಿ ಬಂದೊದಗುವದೋ,

ಹಾಗೆಯೇ ಬ್ರಹ್ಮಾಂಡದಲ್ಲಿ ಜೀವರು ಎಲ್ಲಿಯಾದರೂ ಇರಲಿ ಅವರ ಅವಸರಕ್ಕೆ (ಆಪತ್ಕಾಲದಲ್ಲಿ), ಲಕ್ಷ್ಮಣನಣ್ಣನಾದ ಶ್ರೀರಾಮಚಂದ್ರ ಮೇಲೆ ಹೇಳಿದ ದೃಷ್ಟಾಂತಗಳೋಪಾದಿಯಲ್ಲಿ ಸ್ವಲ್ಪವೂ ವಿಳಂಬ ಮಾಡದೆ ತತ್‌ಕ್ಷಣದಲ್ಲಿ ಬಂದೊದಗಿ ಸಲಹುವನು. ಕೆಲವು ಸಂದರ್ಭಗಳನ್ನು ಸ್ಮರಣೆ ಮಾಡಿಕೊಳ್ಳ ಬಹುದು. ದ್ರೌಪದಿ ಮಾನರಕ್ಷಣೆ, ಗಜರಾಜನನ್ನು ರಕ್ಷಿಸಿದ್ದು, ಅಂಬರೀಷನ್ನ ಕಾಯ್ದುದ್ದು, ಪ್ರಹ್ಲಾದ, ಧ್ರುವ, ಅಜಾಮಿಳ ಇತ್ಯಾದಿ.

6. ಜೀವನಿಷ್ಠ ಪರಮಾತ್ಮನ ಅವ್ಯಕ್ತ ಸಾನ್ನಿಧ್ಯವನ್ನು ಜೀವಕೃತ ಚೇಷ್ಟಾದಿಗಳಿಂದ ಊಹಿಸಬಹುದು.

ತೃಣಕೃತಾಲಯದೊಳಗೆ ಪೊಗೆಸಂ । ದಣಿಸಿ ಪ್ರತಿಛಿದ್ರದಲಿ
ಪೊರವು ।
ಟ್ಟನಿಲನಿರವನು ತೋರಿತೋರದಲಿಪ್ಪ ತೆರನಂತೆ ॥
ವನಜಜಾಂಡದೊಳಖಿಳಜೀವರ । ತನುವಿನೊಳ ಹೊರಗಿದ್ದು
ಕಾಣಿಸ ।
ದನಿಮಿಷೇಶನು ಸಕಲಕರ್ಮವ ಮಾಳ್ಪನವರಂತೆ ॥ 3-12 ॥

ಹುಲ್ಲಿನಿಂದ ನಿರ್ಮಿತವಾದ ಕುಟೀರದಲ್ಲಿ ಹೊಗೆ ತುಂಬಿ ಪ್ರತಿ ಛಿದ್ರಗಳಿಂದ ಹೊಗೆ ಹೊರಗೆ ಬಂದು ಹೊರಗಿನಿಂದ ನೋಡುವವರಿಗೆ ಹೇಗೆ ಕುಟೀರದಲ್ಲಿರುವ ಬೆಂಕಿಯು ಕಾಣದೇ ಹೋದರೂ ಊಹಿಸಿ ತಿಳಿಯಲು ಸಾಧ್ಯವಾಗುವದೋ, ಹಾಗೆ ಜೀವಕೃತ ಗಮನಾಗಮ ಚೇಷ್ಟಾದಿಗಳಿಂದಲೇ ಜೀವನಿಷ್ಠ ಪರಮಾತ್ಮನ ಸನ್ನಿಧಿಯನ್ನು ಊಹಿಸಬೇಕು.

ಧೂಮವನ್ನು ನೋಡಿ ಅಗ್ನಿಯನ್ನು ಊಹಿಸುವಂತೆ, ಜೀವಕೃತ ಚೇಷ್ಟೆಗಳನ್ನು ನೋಡಿ ಒಳಗಿದ್ದ ಪರಮಾತ್ಮನನ್ನು ಊಹಿಸಬೇಕು.

ನ್ಯಾಯಶಾಸ್ತ್ರದ ದೃಷ್ಟಿಯಿಂದಲೂ ಧೂಮಾಗ್ನಿಗಳ ವ್ಯಾಪ್ಯ ವ್ಯಾಪಕ ಭಾವದ ಉಪಮಾನ ಸಮಂಜಸವಾಗಿದೆ.

7. ಪರಮಾತ್ಮನು ಜೀವರುಗಳ ಪೂಜಾ ಸ್ವಿಕಾರ ಮಾಡಿ ಫಲಗಳನ್ನು ಕೊಡುವ ರೀತಿಯನ್ನು ಉಪಮಾನ ಪೂರ್ವಕ ವರ್ಣಿಸುತ್ತಾರೆ.

ಪಾದಪಗಳಡಿಗೆರೆಯೆ ಸಲಿಲವು । ತೋಪು ಕೊಂಬೆಗಳುಬ್ಬಿ
ಪುಷ್ಪ ।
ಸ್ವಾದು ಫಲವೀವಂದದಲಿ ಸರ್ವೇಶ್ವರನು ಜನರಾ ॥
ರಾಧನೆಯ ಕೈಕೊಂಡು ಬ್ರಹ್ಮ ಭ । ವಾದಿಗಳ ನಾಮದಲಿ
ಫಲವಿ ।
ತ್ತಾದರಿಸುವನು ತನ್ನ ಮಹಿಮೆಯ ತೋರಗೊಡ ಜಗಕೆ
॥ 3-13 ॥

ಗಿಡಗಳ ಮೂಲಕ್ಕೆ ನೀರು ಹಾಕಿದರೆ ಹೇಗೆ ತೋಯ್ದು, ಕೊಂಬೆಗಳುಬ್ಬಿ, ಕೊಂಬೆಗಳ ಮೂಲಕ ಪುಷ್ಪಗಳನ್ನು ಮತ್ತು ಸಿಹಿಯಾದ ಹಣ್ಣುಗಳನ್ನು ಕೊಡು ವದೋ, ಸಾಕ್ಷಾತ್ತಾಗಿ ಫಲಕೊಡದೇ, ಹಾಗೆಯೇ ಶ್ರೀಹರಿಯು ಬ್ರಹ್ಮವಾಯು, ರುದ್ರ, ಇಂದ್ರಾದಿ ದೇವತೆಗಳ ದ್ವಾರಾಫಲಗಳನ್ನು ಕೊಡುತ್ತಾನೆ.

ಗಿಡದ ಉಪಮಾನ ದೇವರಿಗೆ
ಕೊಂಬೆಗಳ ಉಪಮಾನ ಬ್ರಹ್ಮರುದ್ರಾದಿ ದೇವತೆಗಳಿಗೆ
ಹೂವುಹಣ್ಣುಗಳ ಉಪಮಾನ ದೇವತೆಗಳು ಕೊಡತಕ್ಕ ಫಲಕ್ಕೆ.

8. ಪರಮಾತ್ಮನು ಜೀವಾಂತರ್ಗನಾಗಿ ಒಂದು ವಿಭೂತಿ ರೂಪದಿಂದ ಇರುವವರೆಗೂ ಜೀವನು ಎಲ್ಲರಿಗೂ ಹಿತ ಉಳ್ಳವನಾಗಿ ಮತ್ತು ಆಪ್ತನಾಗಿರು ತ್ತಾನೆ. ಆ ಸ್ಥಳ ಬಿಡಲು ಸರ್ವರೂ ಉದಾಸೀನ ಮಾಡುತ್ತಾರೆ.

**ತಪ್ತಲೋಹವು ನೋಳ್ಪ ಜನರಿಗೆ । ಸಪ್ತಜಿಹ್ವನ ತೆರದಿ ತೋರ್ಪದು ।**
**ಲುಪ್ತಪಾವಕ ಲೊಹಕಾಂಬದು ಪೂರ್ವದೋಪಾದಿ ॥**
**ಸಪ್ತವಾಹನ ನಿಖಿಳ ಜನರೊಳು । ವ್ಯಾಪ್ತನಾದುದರಿಂದ ಸರ್ವರು**
**ಆಪ್ತರಾಗಿಹರೆಲ್ಲ ಕಾಲದಿ ಹಿತವ ಕೈಕೊಂಡು ॥ 3-22 ॥**

ಕಾದಂಥ ಲೋಹವು ಅಗ್ನಿಯೋಪಾದಿಯಲ್ಲಿ ಕಾಣುವದು. ಉಷ್ಣತೆಯು ಹೋದ ಮೇಲೆ ಕೇವಲ ಲೋಹ ಮಾತ್ರ ಹೇಗೆ ಕಾಣುವದೋ,

ಹಾಗೆಯೇ ಜೀವರಲ್ಲಿ ಪರಮಾತ್ಮನು ಒಂದು ವಿಭೂತಿಯಿಂದ ಇರುವ ವರೆಗೆ ಅವನಲ್ಲಿ ತೇಜಸ್ಸಿರುತ್ತದೆ ಅವನು ಎಲ್ಲರಿಗೂ ಆಪ್ತನಾಗಿರುತ್ತಾನೆ. ಪರಮಾತ್ಮನ ವಿಭೂತಿ ಇಲ್ಲವಾದರೆ ಎಲ್ಲರೂ ಉದಾಸೀನ ಮಾಡುತ್ತಾರೆ.

ಲೋಹದ ಉಪಮಾನ — ಜೀವರಿಗೆ
ಅಗ್ನಿಯು ಉಪಮಾನ — ಪರಮಾತ್ಮನಿಗೆ

9. ಮಳೆಯ ನೀರು ಒಂದೇ ಆದರೂ ಬೇರೆ ಬೇರೆ ವೃಕ್ಷಗಳಲ್ಲಿ ಬೇರೆ ಬೇರೆ ರಸಫಲಗಳು ಉತ್ಪನ್ನವಾಗುವಂತೆ, ಪರಮಾತ್ಮನು ಒಬ್ಬನೆ ಭಿನ್ನಜೀವರಲ್ಲಿ ಭಿನ್ನ ಕ್ರಿಯಾದಿಗಳು ಯೋಗ್ಯತಾನುಸಾರ ಉತ್ಪನ್ನ ಮಾಡುತ್ತಾನೆ.

**ವಾರಿದನು ಮಳೆಗನಿಯೆ ಬೆಳದಿಹ । ಭೂರುಹಂಗಳಚಿತ್ರ ಫಲರಸ ।**
**ಬೇರೆಬೇರಿಪ್ಪಂತೆ ಬಹುವಿಧ ಜೀವರೊಳಗಿದ್ದು ॥**
**ಮಾರರಮಣನವರವರ ಯೋಗ್ಯತೆ । ಮೀರಗೊಡದಲೆ ಗುಣಕರ್ಮಗಳನು ।**
**ಸಾರಮಾಡುವ ದೇವನಿಗೆ ವೈಷಮ್ಯವೆಲ್ಲಿಹುದೋ ॥ 3–23 ॥**

ಮೋಡವು ಮಳೆಸುರಿಸಲು, ಬೆಳೆದಿಹ ವೃಕ್ಷಗಳು ಭಿನ್ನಭಿನ್ನ ರಸಫಲ ಗಳನ್ನು ಹೇಗೆ ಕೊಡುವವೋ, ಹಾಗೆಯೇ ಪರಮಾತ್ಮನು ಒಬ್ಬನೇ ಆದರೂ ಭಿನ್ನಭಿನ್ನ ಜೀವರುಗಳಲ್ಲಿ ಅವರವರ ಯೋಗ್ಯತಾನುಸಾರ ಕ್ರಿಯಾವಿಶಿಷ್ಟನಾಗಿ ರುತ್ತಾನೆ. ಆದ್ದರಿಂದ ಪ್ರತಿಯೊಬ್ಬ ಜೀವರ ಕರ್ಮದಲ್ಲಿ ವೈಲಕ್ಷಣ್ಯ ಕಾಣು ತ್ತದೆ. ಪರಮಾತ್ಮನಲ್ಲಿ ವೈಷಮ್ಯವಿಲ್ಲ.

ಮಳೆಯು ಉಪಮಾನ ಪರಮಾತ್ಮನಿಗೆ
ವೃಕ್ಷಗಳ ಉಪಮಾನ ಜೀವರಿಗೆ
ಚಿತ್ರರಸಫಲಗಳ ಉಪಮಾನ ಚಿತ್ರಜೀವಕರ್ಮ ಯೋಗ್ಯತಾನುಸಾರ ಅಥವಾ ಭಿನ್ನಜೀವಸ್ವರೂಪ.

(10) "ನತಾವತಾ ದೋಷವಾನೀಶತಾಪೀತಿ" ಶ್ರುತ್ಯನುಸಾರ ದೋಷಿ ಗಳಲ್ಲಿದ್ದರೂ ನಿರ್ದೋಷಿಯಾಗಿ ಜೀವರಿಗೆ ಪುಣ್ಯ-ಪಾಪ ಭೋಜನ ಮಾಡಿಸುತ್ತಾ ಸಾಕ್ಷಿಯಾಗಿರುವನೆಂದು ಹೇಳುತ್ತಾರೆ.

**ಜಲವನಪಹರಿಸುವ ಘಳಿಗೆಬ । ಟ್ಟಲನುಳಿದು ಜಯಘಂಟೆ ಕೈಪಿಡಿ ।**
**ದೆಳದು ಹೊಡೆವಂದದಲಿ ಸಂತತ ಕರ್ತೃತಾನಾಗಿ ॥**

**ಹಲಧರಾನುಜ ಪುಣ್ಯ ಪಾಪದ। ಫಲಗಳನು ದೇವಾಸುರರಗಣ।**
**ದೊಳು ವಿಭಾಗವಮಾಡಿ ಉಳಿಸುತ ಸಾಕ್ಷಿಯಾಗಿಪ್ಪ ॥ 25 ॥**

ಘಳಿಗೆ ಬಟ್ಟಲು, ವೇಳೆಯನ್ನು ಅಳೆಯುತಕ್ಕ ಒಂದು ಪ್ರಾಚೀನ ವಿಧಾನ. ಈಗ ಅನೇಕ ತರಹದ ಗಡಿಯಾರಗಳು ಚಾಲತಿಯಲ್ಲಿವೆ.

ಘಳಿಗೆಬಟ್ಟಲು ನೆಲದ ಮೇಲಿಟ್ಟ ದೊಡ್ಡ ಪಾತ್ರೆಯಲ್ಲಿ ತೇಲುತ್ತಿರುತ್ತದೆ. ಆ ಪಾತ್ರೆಯಿಂದ ಮೂರು–ನಾಲ್ಕು ಅಡಿ ಮೇಲೆ ಒಂದು ಗಂಟೆಯನ್ನು ಕಟ್ಟಿರುತ್ತಾರೆ. ಅದೇ ಜಯಗಂಟೆ.

ಘಳಿಗೆಬಟ್ಟಲು ನೀರನ್ನು ಕುಡಿದು ಮುಳುಗಿದ ಕೂಡಲೆ ಜಯಗಂಟೆಯನ್ನು ಬಾರಿಸುತ್ತಾರೆ.

ಇಲ್ಲಿ ನೋಡಬೇಕಾದ ವಿಷಯವೆಂದರೆ, ನೀರುಕುಡಿದದ್ದು ಘಳಿಗೆಬಟ್ಟಲಾದರೆ ಏಟು ಬಿದ್ದದ್ದು ಜಯಗಂಟೆಗೆ. ಹಾಗೆಯೇ, ಪರಮಾತ್ಮನು ಜೀವನದಲ್ಲಿದ್ದು ಸ್ವತಂತ್ರ ಕೆಲಸಮಾಡಿದರೆ ಫಲವನ್ನುಣ್ಣುವವನು ಜೀವನೇ. ಪರಮಾತ್ಮನಲ್ಲ. ಪರಮಾತ್ಮನು ಕೇವಲ ಸಾಕ್ಷಿಯಾಗಿರುತ್ತಾನೆ. "ಸಾಕ್ಷಿಚೇತಾ ಕೇವಲೋ ನಿರ್ಗುಣಶ್ಚ".

**ಘಳಿಗೆ ಬಟ್ಟಲಿನ ಉಪಮಾನ ಪರಮಾತ್ಮನಿಗೆ**
**ಜಯಗಂಟೆಯ ಉಪಮಾನ ಜೀವರಿಗೆ**
**ಗಂಟೆಹೊಡೆಯುವ ಉಪಮಾನ ಫಲಭೋಕ್ತೃತ್ವ**

(11) ಪರಮಾತ್ಮನು ಸರ್ವಜೀವರುಗಳ ಒಳಹೊರಗಿದ್ದು ಕಾದುಕೊಂಡಿದ್ದರೂ, ಜೀವರುಗಳಿಗೆ ಆಗತಕ್ಕ ಸುಖದುಃಖಾದಿಗಳ ಸಂಬಂಧವಾಗುವದಿಲ್ಲ, "ಅಸಂಗೋಹ್ಯಯಂ ಪುರುಷಃ" ಈ ಪರಮ ಪುರುಷನು ಸಂಗರಹಿತನಾಗಿದ್ದಾನೆ, ಎಂಬ ವಿಷಯವನ್ನು ದಾಸರಾಯರು ಸುಂದರ ಉಪಮಾಪದಿಂದ ವರ್ಣಿಸಿರುತ್ತಾರೆ.

**ಕಾದಕಬ್ಬಿಣ ಹಿಡಿದುಬಡೆಯಲು। ವೇದನೆಯು**
**ಲೋಹಗಳಿಗಲ್ಲದೆ।**
**ಆದುದೇನೈ ಅನಳಗಾವ್ಯಥೆ ಏನು ಮಾಡಿದರೂ ॥**
**ಆದಿದೇವನು ಸರ್ವಜೀವರ। ಕಾದುಕೊಂಡಿಹ ಒಳಹೊರಗೆ**
**ದುಃ।**
**ಖಾದಿಗಳ ಸಂಬಂಧವಾಗುವದೇನೋ ಚಿನ್ಮಯಗೆ ॥3–27॥**

ಕಾದಂಥ ಕಬ್ಬಿಣವನ್ನು ಹಿಡಿದು ಸುತ್ತಿಗೆಯಿಂದ ಬಡಿದರೆ ವೇದನೆ ಆಗುವದು ಅಂದರೆ ಹಿಗ್ಗುವದು ಬಗ್ಗುವದು ನೆಗ್ಗುವದು ಎಲ್ಲ ಬದಲಾವಣೆ ಆಗುವದು ಲೋಹಗಳಿಗೇ. ಅದರಲ್ಲಿದ್ದ ಅಗ್ನಿಗೆ ಆ ವೇದನೆಯಾವುದೂ ಆಗುವದಿಲ್ಲ. ಉಷ್ಣತೆಯು ಅಳಿದಮೇಲೆ ಬಡಿತದಿಂದ ತನ್ನರೂಪ ಬದಲಾಯಿಸಿಕೊಂಡ ಲೋಹ ಹಾಗೆಯೇ ಉಳಿಯುತ್ತದೆ.

ಅದರಂತೆಯೇ ಪರಮಾತ್ಮನು ಸರ್ವಜೀವರುಗಳನ್ನು ಒಳಹೊರಗೆ ಕಾದುಕೊಂಡಿರುತ್ತಾನೆ. ಆ ಚಿನ್ಮಯನಿಗೆ ಜೀವನಿಗಾದ ದುಃಖಾದಿಗಳು ಆಗುವದೇ ಇಲ್ಲ. ಆಗುವ ವೇದನೆಗಳೆಲ್ಲ ಜೀವನೇ ಅನುಭವಿಸುತ್ತಾನೆ.

**ಕಬ್ಬಿಣದ ಉಪಮಾನ ಜೀವನಿಗೆ**

**ಅನಳನ ಉಪಮಾನ ಪರಮಾತ್ಮನಿಗೆ**

**ವೇದನೆಯು ಉಪಮಾನ ಸುಖದುಃಖಾದಿಗಳ ಅನುಭವ.**

ಜೀವಾಂತರ್ಯಾಮಿಯಾದ ದೇವನಿಗೆ ಸುಖದುಃಖಾದಿಗಳಿಲ್ಲ. ಆಗತಕ್ಕ ಸುಖದುಃಖಗಳೆಲ್ಲ ಜೀವನಿಗೆ ಮಾತ್ರಸಂಬಂಧ ಪಟ್ಟವುಗಳು.

12. ಪರಮಾತ್ಮನಿಗೆ ಸೃಷ್ಟಿಸ್ಥಿತಿ ಲಯಾದಿಗಳು ಮಕ್ಕಳು ಮನೆಕಟ್ಟಿ ಆಡುವ ಕ್ರೀಡೆಯಂತೆ ಎಂಬ ವಿಷಯವನ್ನು ಕವಿಗಳು ಉಪಮಾನದಿಂದ ವಿವರಿಸುತ್ತಾರೆ.

ಮಳಲ ಮನೆಗಳಮಾಡಿ ಮಕ್ಕಳು । ಕೆಲವು ಕಾಲದಲಾಡಿ
ಮೋದದಿ ।
ತುಳಿದು ಕೆಡಿಸುವತೆರದಿ ಲಕುಮೀರಮಣ ಲೋಕಗಳ ||
ಹಲವು ಬಗೆಯಲಿ ನಿರ್ಮಿಸುವ ನಿ । ಶ್ಚಲನು ತಾನಾಗಿದ್ದು
ಸಲಹುವ ।
ಯಲರುಣಿಯವೊಲ್ ನುಂಗುವಗೆ ಎಲ್ಲಿಹುದೋ ಸುಖದುಃಖ
||3–28||

ಮಕ್ಕಳು ಮಳಲಿನಿಂದ ಅಥವಾ ಮಣ್ಣಿನಿಂದ ಮನೆಯನ್ನು ಮಾಡುತ್ತಾರೆ. ಕೆಲವುಕಾಲ ಅವುಗಳ ಜೊತೆಗೆ ಆಟವಾಡುತ್ತಾರೆ. ಆಟವೆಲ್ಲವೂ ಮುಗಿದು ಸಾಕಾಗಿ ಅವರು ಮನೆಗೆ ಹೋಗಬೇಕಾದರೆ ಆ ಮನೆಗಳನ್ನು ಸಂತೋಷದಿಂದಲೇ ತುಳಿದು ಕೆಡಿಸಿ ಮನೆಗಳಿಗೆ ಹೋಗುತ್ತಾರೆ. ಮನೆಕೆಟ್ಟು ಹೋಯ್ತಲ್ಲ ಎಂಬ ಖೇದ ಅವರಿಗಿರುವದಿಲ್ಲ.

ಇದರಂತೆಯೇ ಪರಮಾತ್ಮನು ಈ ಚಿತ್ರ ವಿಚಿತ್ರವಾದ ಚರಾ–ಚರ ಜಗತ್ತನ್ನು ಬಹಳ ಜಾಗರೂಕತೆವಹಿಸಿ ಅಂದವಾಗಿ ಸೃಷ್ಟಿ ಮಾಡುತ್ತಾನೆ. ಸೃಷ್ಟಿಮಾಡಿದ ಜಗತ್ತನ್ನು ಯಾವರೀತಿ ಅಪಾಯವಾಗದಂತೆ ರಕ್ಷಣೆಮಾಡುತ್ತಾನೆ. ಕೊನೆಗೊಮ್ಮೆ ಲಯ. ಕಾರ್ಯರೂಪ ಪ್ರಕೃತಿಯು ಕಾರಣರೂಪವಾದ ನಿತ್ಯ ಪ್ರಕೃತಿಯು ಕೂಡ ಸೇರಿಬಿಡುತ್ತದೆ. ಈ ಲಯ ಕಾರ್ಯವೂ ಪರಮಾತ್ಮನಿಗೆ ಸಂತೋಷಕಾರ್ಯವೇ. ಸಂಹಾರವೂ ಕೂಡ ಒಂದು ಲೀಲಾವಿಶೇಷ. ಸೃಷ್ಟಿ ಮಾಡಿದ್ದರಿಂದ ವಿಶೇಷಸುಖವಿಲ್ಲ, ಲಯ ಮಾಡಿದ್ದರಿಂದ ಸುತರಾಂ ದುಖಃವೂ ಇಲ್ಲ. ಯಲರುಣಿ ಎಂದರೆ ಹೆಬ್ಬಾವು. ಹೆಬ್ಬಾವು ತನ್ನಕೈಗೆ ಸಿಕ್ಕ ಚರಾಚರ ಪದಾರ್ಥಗಳನ್ನು ನುಂಗುವಂತೆ ನುಂಗುತ್ತಾನೆ. "ಓಂ ಅತ್ತಾಚರಾಚರಗ್ರಹಣಾತ್ ಓಂ". ಸಕಲ ಚರಾಚರ ಭಕ್ಷಕ ಪರಮಾತ್ಮ. ಆಗಲೂ ದುಃಖವಿಲ್ಲ.

ಮಳಲ ಮನೆಗಳಮಾಡಿ ಉಪಮಾನ ಹಲವು ಬಗೆಯಲಿ ನಿರ್ಮಿಸುವ
ಮಕ್ಕಳು ಕೆಲವುಕಾಲದಲಾಡಿ ಉಪಮಾನ ನಿಶ್ಚಲನು ತಾನಾಗಿದ್ದು ಸಲಹುವ

ಮೋದದಿ ತುಳಿದು ಕೆಡಿಸುವತೆರದಿ ಉಪಮಾನ ಯಲರುಣಿಯುವೋಲ್
ನುಂಗುವವಗೆಲ್ಲಿಹುದೊ ಸುಖದುಃಖ.

13. ಪರಮಾತ್ಮನು ಜೀವನ ಹೃದಯಕಮಲದಲ್ಲಿ ಸದಾ ಇರುತ್ತಿದ್ದರೂ ಕಾಲದ ಮತ್ತು ಕರ್ಮದ ಸಂಬಂಧ ವಾಗುವುದಿಲ್ಲವೆಂದು ಕವಿಗಳು ವರ್ಣಿಸುತ್ತಾರೆ.

**ಅಥನುಮಾನವ ನೋರ್ವಮಂತ್ರೌ । ಷಧಗಳನು ತಾನರಿತು ಪಾಪಕ ।**
**ಉದಕಗಳ ಸಂಬಂಧವಿಲ್ಲದೆ ಇಪ್ಪನದರೊಳಗೆ ॥**
**ಪದುಮ ಜಾಂಡೊದರನು ಸರ್ವರ । ಹೃದಯದೊಳಗಿರೆ ಕಾಲಗುಣಕ ।**
**ರ್ಮದ ಕಲುಷ ಸಂಬಂಧವಾಗುವದೇನೋ ಚಿನ್ಮಯಗೆ ॥ 3-30 ॥**

ಮನುಷ್ಯ ಸಾಮಾನ್ಯನೊಬ್ಬನು ಮಂತ್ರ ಮತ್ತು ಔಷದಿಗಳ ಸಿದ್ಧಿಯನ್ನು ಪಡೆದು ಬೆಂಕಿಯ ಸಂಬಂಧವಿಲ್ಲದೆ ಬೆಂಕಿಯಲ್ಲಿರಬಲ್ಲ. ನೀರಿನ ಸಂಬಂಧವಿಲ್ಲದೇ ನೀರಿನಲ್ಲಿ ಇರಬಲ್ಲ. ಇವನಿಗೇ ಇಷ್ಟು ಸೋಜಿಗಪಡಿಸತಕ್ಕ ಶಕ್ತಿ ಇದ್ದಮೇಲೆ,

ಬ್ರಹ್ಮಾಂಡವನ್ನೇ ಉದರದಲ್ಲಿ ಇಟ್ಟಿರತಕ್ಕ ಪರಮಾತ್ಮನಿಗೆ ಸರ್ವಜೀವರ ಹೃದಯ ಕಮಲದಲ್ಲಿದ್ದರೂ, ಕಾಲಕೃತ ಪರಿಣಾಮ ಅಂದರೆ ವೃದ್ಧಿ ಜರಾಮರಣಗಳಿಲ್ಲದಿರುವದು, ಕರ್ಮಸಂಬಂಧ ಎಂದರೆ ಕರ್ಮಫಲ ಅನುಭವ ಇತ್ಯಾದಿಗಳ ಕಾಲ–ಕರ್ಮಗಳ ಸಂಬಂಧವಿಲ್ಲದೇ ಇರಲು ಸಾಧ್ಯವಿಲ್ಲವೇ ! ಇದ್ದೇಇದೆ. ಪರಮಾತ್ಮನಿಗೆ ಎಲ್ಲರಿಗಿಂತಲೂ ಅಧಿಕವಾದ ಅಚಿಂತ್ಯಾದ್ಭುತ ಶಕ್ತಿಇದೆ.

14. ಭೋಜನವನ್ನು ಪ್ರಾರಂಭಮಾಡದ ಪೂರ್ವ ಭಗವಂತನಿಗೆ ಅರ್ಪಣೆ ಮಾಡಬೇಕು. ಈ ವಿಷಯ/ಮಾತು ಸ್ಪಷ್ಟವಾಗಿ ಭಗವಂತನಿಂದಲೆ ಗೀತೆಯಲ್ಲಿ ಉಕ್ತವಾಗಿದೆ. ಆಕಸ್ಮಿಕ ಭೋಜನ ಪ್ರಾರಂಭದಲ್ಲಿ ಮರೆತು ಭೋಜನ ಮಧ್ಯದಲ್ಲಿ ಶ್ರೀಹರಿಗೆ ಅರ್ಪಣೆ ಮಾಡುವದು ನೆನಪಾದರೆ ಆಗ ಶ್ರೀಹರಿಯು ಏನು ಮಾಡುವನೆಂಬದನ್ನು ಕವಿಗಳು ಸುಂದರ ಉಪಮಾನದಿಂದ ವರ್ಣಿಸುತ್ತಾರೆ.

ಗಣನೆಇಲ್ಲದ ಪರಮಸುಖ ಸದ್ಗುಣ । ಗಣಂಗಳ ಲೇಶಲೇಶಕೆ
ಎಣೆ ಎನಿಸದು ರಮಾಬ್ಜಭವ ಶಕ್ರಾದಿಗಳ ಸುಖವು ॥
ಉಣುತುಣುತ ನೈಮರೆತು ಕೃಷ್ಣಾ । ರ್ಪಣವೆನಲು
ಕೈಕೊಂಬನರ್ಭಕ ।
ಜನನಿ ಭೋಜನ ಸಮಯದಲಿ ಕೈಒಡ್ಡುವಂದದಲಿ ॥4-25॥

ಅನಂತಕಲ್ಯಾಣ ಗುಣಪರಿಪೂರ್ಣನಾದಂಥ ಶ್ರೀಹರಿಯ ಆನಂದ ರಮಾ ಬ್ರಹ್ಮಾದಿಗಳ ಆನಂದಕ್ಕಿಂತ ಅನಂತಪಟ್ಟು ಹೆಚ್ಚು. ಪರಮಾತ್ಮನ ಗುಣಗಳ ಯಾವ ಭಾಗವನ್ನೂ ಇತರರಿಗೆ ಹೋಲಿಸುವಂತಿಲ್ಲ. ಅಂಥ ಮಹಾಮಹಿಮನಾದ ಪರಮಾತ್ಮನಿಗೆ ಮನುಷ್ಯ ಏನುಕೊಟ್ಟು ಮೆಚ್ಚಿಸಲು ಸಾಧ್ಯ. ಆದರೂ ತನ್ನ ಭಕ್ತರ ಭಿಡೆ ಮೀರದಂತೆ ಪ್ರೀತಿ ಗೌರವಗಳಿಂದ ಕೊಟ್ಟಿದ್ದನ್ನು ಸ್ವೀಕರಿಸುತ್ತಾನೆ.

ಉದಾಹರಣೆಗೆ ಭೋಜನದ ಆರಂಭದಲ್ಲಿಯೇ "ಭಗವದ್ದತ್ತ ಪದಾರ್ಥಾನ್ ಭಗವಂತಂ ಸಮರ್ಪಯಾಮಿ". ಭಗವಂತ ಕೊಟ್ಟದು ಭಗವಂತನಿಗೆ ಅರ್ಪಣೆ ಶ್ರೀಕೃಷ್ಣಾರ್ಪಣಮಸ್ತು ಎನ್ನಬೇಕು. ಒಂದೊಂದು ಸಲ ಚಿತ್ತ ವಿಕ್ಷೇಪದಿಂದ ಮೊದಲು ಅರ್ಪಿಸಲಾಗಲಿಲ್ಲ, ಭೋಜನದ ಮಧ್ಯದಲ್ಲಿ ಅರ್ಪಣೆ ನೆನಪಾಯಿತು ಎನ್ನುವಾ ಆಗಲೂ ಹಾಗೆ ಮಾಡಿದರೆ,

ತಾಯಿಯು ಊಟಮಾಡುವ ವೇಳೆಯಲ್ಲಿ ಪ್ರೀತಿಯಿಂದ ತನ್ನ ಮಗನನ್ನು ಕರೆದರೆ ಹೇಗೆ ಬಾಲಕನು ತಾಯಿಯಮುಂದೆ ಓಡಿಬಂದು ಕೈಒಡ್ಡುವನೋ,

ಹಾಗೆಯೇ ಪರಮಾತ್ಮನಾದರೂ, ಜ್ಞಾನಿಗಳು ಭಕ್ತರು ಹಾಗರ್ಪಿಸಿದರೆ, ಬಾಲಕನು ಜನನಿ ಭೋಜನದಸಮಯದಲ್ಲಿ ಕೈಒಡ್ಡುವ ರೀತಿ ಸ್ವೀಕಾರ ಮಾಡುತ್ತಾನೆ. ಅದು ಅವನ ಭಕ್ತವಾತ್ಸಾಲ್ಯ ವಿಶೇಷ.

15. ಪರಮಾತ್ಮನ ಅನಂತಗುಣಗಳಲ್ಲಿ ಯಾವದಾದರೊಂದು ಗುಣವನ್ನು ಉಪಾಸಿಸಿದವನು ಸಹ ಕೃತಾರ್ಥನಾಗುವನೆಂದು ಕವಿಗಳು ಸದೃಷ್ಟಾಂತ-ವಾಗಿ ಹೇಳುತ್ತಾರೆ.

ಡ್ಯನದಿ ಆದ್ಯಂತವನು ಕಾಣದೆ । ಮನುಜನೇ ಕತ್ರದಲಿ ತಾನು ।
ಜ್ಞಸವಗೈಯೆ ಸಮಸ್ತದೋಷದಿ ಮುಕ್ತನಹ ತೆರದಿ ॥
ಅನಘನಮಲಾನಂತ ನಂತ ಸು । ಗುಣಗಳೊಳಗೊಂದೇ ಗುಣ ಉಪಾ ।
ಸನವ ಗೈವಮಹಾತ್ಮ ಧನ್ಯ ಕೃತಾರ್ಥನೆನಿಸುವನು ॥ 15-27 ॥

ಗಂಗಾಸ್ನಾನ ಮಾಡಬೇಕೆಂಬ ಅಭಿಲಾಷೆಯುಳ್ಳ ಒಬ್ಬ ಮನುಷ್ಯ ಹರಿದ್ವಾರಕ್ಕೆ ಹೋಗಿ ಅಲ್ಲಿ ಬೃಹದಾಕಾರವಾಗಿ ವೇಗವಾಗಿ ಹರಿಯುತಕ್ಕ ಗಂಗೆಯಲ್ಲಿ ಏಕದೇಶ ಸ್ಥಳದಲ್ಲಿ ಸ್ನಾನಮಾಡಿ ತನ್ನ ಸ್ವಸ್ಥಳಕ್ಕೆ ಬರುತ್ತಾನೆ. ಬಂದು ತನ್ನ ಬಂಧು ಬಳಗದವರಿಗೆಲ್ಲ ತಾನು ಹರಿದ್ವಾರಕ್ಕೆ ಹೋದವಿಷಯ, ಗಂಗಾಸ್ನಾನ ಮಾಡಿ ಕೃತಕೃತ್ಯನಾದ ವಿಷಯಹೇಳಿ ಗಂಗಾ ಸಮಾರಾಧನೆ ಮಾಡುತ್ತಾನೆ. ಇಲ್ಲಿ ಸ್ನಾನವಾಯಿತು ಎಂದಾಕ್ಷಣಕ್ಕೆ ಗಂಗೆಯಲ್ಲಿದ್ದ ಎಲ್ಲ ನೀರು ಸ್ನಾನಮಾಡಿದ ನೆಂದಲ್ಲ. ಅದು ಸಾಧ್ಯವೂ ಇಲ್ಲ. ಈತನನ್ನು ಸ್ಪರ್ಶಮಾಡದೇ ಇದ್ದ ಏಷ್ಟೋ ನೀರು ಹಾಗೆಯೇ ಉಳಿಯಿತು. ಆದರೂ ಗಂಗಾಸ್ನಾನ ಹೇಗೆ ಮುಗಿಯಿತೋ,

ಹಾಗೆಯೇ ಪರಮಾತ್ಮನ ಅನಂತ ಗುಣಗಳನ್ನು ಉಪಾಸನೆ ಮಾಡಲು ಯಾರಿಗೂ ಶಕ್ಯವಿಲ್ಲ. ಆದರೂ ಏಕದೇಶದಲ್ಲಿ ಗಾಗಾಸ್ನಾನ ಮಾಡಿದಂತೆ, ಪರಮಾತ್ಮನ ಒಂದೊಂದು ಗುಣ ಉಪಾಸನೆ ಮಾಡಿದರೂ ಸಹ ಧನ್ಯನಾಗುವನು ಮತ್ತು ಕೃತಾರ್ಥನಾಗುವನು. ಮನುಷ್ಯೋತ್ತಮರು–ಮುಮುಕ್ಷುಗಳು ಚತುರ್ಗುಣೋಪಾಸನೆ ಮಾಡಬೇಕೆಂದೂ, ತೃಣಜೀವ-ಮುಮುಕ್ಷುಗಳು ಏಕ-ಗುಣೋಪಾಸನ ಮಾಡಬೇಕೆಂದೂ ಶಾಸ್ತ್ರಗಳ ಆದೇಶ.

16. ಸೃಷ್ಟಿಕರ್ತನಾದ ಪರಮಾತ್ಮನು, ಜೀವರನ್ನು ರಕ್ಷಣೆ ಮಾಡುವ ಕಾಲದಲ್ಲಿ ಭಿನ್ನಜೀವರ ಭಿನ್ನಯೋಗ್ಯತಾನುಸಾರ ಕೊಟ್ಟು, ಯೋಗ್ಯತೆ ಮೀರ–ದಂತೆ ನೋಡಿಕೊಂಡು ಸಂತೈಸುವನು ಎಂಬ ವಿಷಯವನ್ನು ಕವಿಗಳು ಸುಂದರ ಉಪಮಾನ ಕೊಟ್ಟು ವಿವರಿಸುತ್ತಾರೆ.

**ತೋಟಿಗನು ಭೂಮಿಯೊಳು ಬೀಜವ । ನಾಟಿಬೇಕೆಂದೆನುತ ಹರುಷದಿ ।**
**ಮೂಟೆಯಿಂ ನೀರೆತ್ತಿ ಸಸಿಗಳ ಸಂತೈಸುವಂತೆ ॥**
**ಪಾಟುಬಡದಲೆ ಜಗದಿಜೀವರ । ಘೋಟಕಾಸ್ಯನು ಸೃಜಿಸಿ ಯೋಗ್ಯತೆ ।**
**ದಾಟಗೊಡದಲೆ ಸಲಹುತಿಪ್ಪನು ಸರ್ವಕಾಲದಲಿ ॥17-12॥**

ತೋಟಗಾರನೊಬ್ಬ ಭೂಮಿಯನ್ನು ಹಸನಮಾಡಿ ಕಪ್ಪಲಿಯಿಂದ ನೀರು ಪೂರೈಸಿ ಬೀಜವನ್ನು ನಾಟುತ್ತಾನೆ. ಮೊಳಕೆಯೊಡೆಯುತ್ತವೆ. ಸಸಿಗಳಾಗುತ್ತವೆ. ಅವನು ಅನೇಕ ತರಹದ ಬೀಜಗಳನ್ನು ಹಾಕಿರುತ್ತಾನೆ. ಅನೇಕ ತರಹದ ಸಸಿಗಳು ಹುಟ್ಟಿರುತ್ತವೆ. ಕೆಲವಕ್ಕೆ ನೀರು ಕಡಿಮೆಹಾಕಬೇಕು. ಕೆಲವಕ್ಕೆ ಹೆಚ್ಚು ಬೇಕು. ಇದನ್ನೆಲ್ಲ ಅರಿತ ತೋಟಿಗನು ಯಾವಯಾವ ಸಸ್ಯಗಳಿಗೆ ಎಷ್ಟು ಎಷ್ಟು ನೀರು ಅವಶ್ಯಕವೋ ಅಷ್ಟಷ್ಟೇ ನೀರುಕೊಟ್ಟು, ಅತಿನೀರಿನಿಂದ ಕೊಳೆಯುದ ಹಾಗೆ ನೀರಿನ ಕೊರತೆಯಿಂದ ಒಣಗಿದಹಾಗೆ, ನೋಡಿಕೊಂಡು ಹೇಗೆ ಆಸಕ್ತಿಯಿಂದ ಸಂತೈಸುವನೋ ಹಾಗೆಯೇ ಘೋಟಕಾಶ್ಯನು ಹಯವದನ ದೇವರು, ಜೀವರುಗಳನ್ನು ಸೃಷ್ಟಿಮಾಡಿ ಕಷ್ಟಬಡಿಸದಲೆ, ಅವರವರ ಯೋಗ್ಯತೆಮೀರಗೊಡದಲೆ, ಅಂದರೆ ಯೋಗ್ಯತಾನುಸಾರವಾಗಿ ಸದಾಕಾಲದಲ್ಲಿ ಸರ್ವರನ್ನೂ ಸಲಹುತ್ತಾರೆ. ಉದಾಸೀನತೆ ಯಾವ ಕಾಲದಲ್ಲಿಯು ಇಲ್ಲ ಆಸಕ್ತಿ ವಹಿಸುತ್ತಾರೆ.

17. ಭಕ್ತಿಪರವಶತೆಯಿಂದ ಮೈಮರೆತು ಉತ್ಸಾಹದಿಂದ ವಿಟ್ಠಲಾ ಎಂದೊಮ್ಮೆ ಕರೆದರೆ ಇದಕ್ಕೆ ಫಲದ್ವಯ ಪಾಪನಾಶ ಶ್ರೀಹರಿವಶ ಮತ್ತು ಎಂಬ ವಿಷಯವನ್ನು ಉಪಮಾನದೊಂದಿಗೆ ವರ್ಣಿಸುತ್ತಾರೆ ಕವಿಗಳು.

**ಕಿಟ್ಟಗಟ್ಟಿದ ಲೋಹಪಾವಕ । ಸುಟ್ಟುವಿಂಗಡ ಮಾಡುವಂತೆ ಘಾಂ ।**
**ರಟ್ಟೆ ವ್ರೀಹಿಯೊಳಿಪ್ಪತಂಡುಲ ಕಡೆಗೆ ತೆಗೆವಂತೆ ॥**
**ವಿಟ್ಠಲಾನೆಂದೊಮ್ಮೆ ಮೈಮರೆ । ದಟ್ಟಹಾಸದಿ ಕೆರೆಯೆದುರಿತಗ ।**
**ಳಟ್ಟುಳಿಯ ಬಿಡಿಸೆವನ ತನ್ನೊಳಗಿಟ್ಟು ಸಲಹುವನು ॥ 11-20 ॥**

ಇಲ್ಲಿ ಎರಡು ಉಪಮಾನಗಳಿವೆ. ಭಗವನ್ನಾಮೋಚ್ಚಾರಣೆಯಿಂದ ಎರಡೂ ಕಾರ್ಯಗಳಾಗುವವು ಎಂಬುದನ್ನು ವಿವರಿಸುತ್ತಾರೆ.

1. ಲೋಹಗಳಿಗೆ ಬಲವಾಗಿ ಅಂಟಿಗೊಂಡಿದ್ದ ಕಿಲುಬು ಇತ್ಯಾದಿಗಳನ್ನು ಸುಟ್ಟು ಅದನ್ನು ಬಿಡಿಸುವಂತೆ, ಮಾನವನಿಗೆ ಅನೇಕ ಜನ್ಮಸಂಸ್ಕಾರಗಳಿಂದ ಬಂದ ಅಂಟುಜಾಡ್ಯಗಳಿರುತ್ತವೆ. ಆ ದೋಷಗಳು ಹೋಗಬೇಕಾದರೆ ಭಕ್ತಿಪರವಶತೆಯಿಂದ ಹರಿಧ್ಯಾನ ಮಾಡಬೇಕು. ಹರಿಯು ದುರಿತಗಳನ್ನು ಬಿಡಿಸುತ್ತಾನೆ.

2. ಘರಟ್ಟ–ಓಳಲೇಕಲ್ಲು ವ್ರೀಹಿ–ಭತ್ತದ ಹೊಟ್ಟುಬಿಡಿಸಿ ತಂಡುಲಅಕ್ಕಿ-ಯನ್ನು ಹೊರಗೆ ಹಾಕುವಂತೆ ಭಕ್ತಿಯಿಂದ ಹರಿನಾಮೊಚ್ಚಾರಣೆ–ಹರಿಧ್ಯಾನಾದಿಗಳಿಂದ ಹರಿಯು ಲಿಂಗದೇಹವನ್ನೂ ಸಹ ನಾಶಮಾಡುತ್ತಾನೆ.

ಎರಡು ಕಾರ್ಯಗಳಿಗೂ ಮುಖ್ಯವಾಗಿ ಶ್ರೀಹರಿಯ ಜ್ಞಾನ, ಧ್ಯಾನ ಭಕ್ತಿಪಾರವಶ್ಯತೆಯಿಂದ ನಾಮೋಚ್ಚಾರಣೆ ಅವಶ್ಯಕ. ಏಕಕ್ರಿಯೆ ಫಲದ್ವಯ ಸಾಧಕ. ("ಏಕೋ ಕ್ರಿಯಾದ್ವ್ಯರ್ಥಕರೀ ಬಭೂವ," ಕಾಳಿದಾಸ)

18. ಪರರಿಂದ ನಮಗೆ ಉಪದ್ರವವಾಗಬಾರದಂತೆ ಲೋಕದಲ್ಲಿ ಯಾರಾದರೊಬ್ಬ ಸಮರ್ಥ ವ್ಯಕ್ತಿಯ ಸಂಬಂಧವನ್ನು ನಾವು ಬಯಸುತ್ತೇವೆ, ಅಥವಾ ಹೇಳಿಕೊಳ್ಳುತ್ತೇವೆ. ಹಾಗೆಯೇ ನಾವು ಶ್ರೀಹರಿದಾಸರು ಎಂದರೆ ಆಗುವ ಮಹತ್ ಪ್ರಯೋಜನವನ್ನು ಹರಿಕಥಾಮೃತ ವಕ್ತಾರರು ಉಪಮಾನದೊಂದಿಗೆ ವರ್ಣಿಸಿರುತ್ತಾರೆ.

**ಒಡೆಯರಿದ್ದ ವನಸ್ಥ ಫಲಗಳ । ಬಡಿದು ತಿಂಬುವರುಂಟೇ**
**ಲೋಕದೊಳ್ ।**
**ಹೊಡೆದು ಬಿಸುಟುವರೆಂಬ ಭಯದಿಂ ನೋಡಲಂಜುವರು ॥**
**ಬಿಡದೆ ಮಾಡುವ ಕರ್ಮಗಳು ಮನೆ । ಮಡದಿ ಮಕ್ಕಳು**
**ಬಂಧುಗಳು ಕಾ ।**
**ರೊಡಲನಾಳ್ಗಳು ಎಂದಮಾತ್ರದ ಲೋಡುವವು ದುರಿತ**
**॥25-34॥**

ಫಲಭರಿತವಾದ ವೃಕ್ಷಗಳುಳ್ಳ ಒಂದು ವನಕ್ಕೆ ಒಡೆಯರಿದ್ದಾರೆಂದೂ ಮತ್ತು ವೃಕ್ಷಗಳನ್ನು ಕಾಯುತ್ತಿದ್ದಾರೆಂದೂ ತಿಳಿದರೆ ಸಾಕು. ಆ ವೃಕ್ಷಗಳ ಕಡೆಗೆ ಯಾರೂ ನೋಡಲು ಸಹ ಸಾಧ್ಯವಿಲ್ಲ. ಹೊಡೆದುಬಿಟ್ಟಾರು ಎಂಬ ಭಯದಿಂದ ನೋಡುವುದಿಲ್ಲ. ಹಣ್ಣುಗಳನ್ನು ಕೀಳುವದು ಅಂತೂ ದೂರತೋ ಪಾಸ್ತವಾಯಿತು.

ಹಾಗೆಯೇ ನಾನು, ನನ್ನ ಮಡದಿ, ನನ್ನ ಮಕ್ಕಳು, ನನ್ನ ಬಂಧುಗಳು ಎಲ್ಲರೂ ಪರಮಾತ್ಮನದಾಸರು ಎಂದು ಸಕಲ ಕರ್ಮಗಳನ್ನು ಹರಿಗೆ ಸಮರ್ಪಣೆ ಮಾಡಿದರೆ ದುರಿತಗಳು ನನ್ನುನ್ನು ಸೋಂಕವು.

ದುರಿತಗಳು ದಾರಿಹೋಕರಂತೆ, ಕರ್ಮಗಳನ್ನು ಸರ್ಮಪಣೆ ಮಾಡಿದರೆ ತತ್ಫಲವಾದ ಪುಣ್ಯಪಾಪಗಳನ್ನು ಅರ್ಪಿಸಿದಂತೆಯೇ. ನಮ್ಮ ಪುಣ್ಯಗಳಿಗೆ ಹರಿ ರಕ್ಷಕ ಎಂದರೆ ಅದನ್ನು ಯಾರು ಮುಟ್ಟಲಾರರು. ಹಾಗೆ ಮಾಡದಿದ್ದರೆ ದುರಿತಗಳು ನಮ್ಮನ್ನು ಬಾಧಿಸದೆ ಬಿಡವು.

ದುರಿತಗಳು ಎಂದರೆ ದುರಿತಕರ್ಮಪ್ರೇರಕ ದೈತ್ಯರೆಂದೂ ಉಪಲಕ್ಷಣತಯಾ ಅರ್ಥಮಾಡಬೇಕು. ಯಾಕೆಂದರೆ ಸರ್ವಕರ್ಮಗಳನ್ನು ವಾಯುದೇವನ ದ್ವಾರಾ ಶ್ರೀಹರಿಗರ್ಪಣೆ ಮಾಡದೇಹೋದರೆ, ಪುಣ್ಯಫಲಗಳನ್ನು ದೈತ್ಯರು ಬಲಾತ್ಕಾರ ವಾಗಿ ಸೆಳದು ಒಯ್ಯುತ್ತಾರೆ. ಆ ಪುಣ್ಯವು ಹರಿಯಿಂದ ರಕ್ಷಸಲ್ಪಟ್ಟಿದೆ ಎಂದರೆ, ದುರಿತಪ್ರೇರಕ, ದುರಿತಕರ್ಮ ಮಾಡತಕ್ಕ ದೈತ್ಯ ನಮ್ಮ ಪುಣ್ಯ ಫಲಗಳನ್ನು ನೋಡಲುಕೂಡ ಅಂಜುವರು ಅಂದಮೇಲೆ ಕಿತ್ತುಕೊಳ್ಳುವದು ದೂರತೊಪಾಸ್ತ.

19. ಶ್ರೀಹರಿಯ ಜ್ಞಾನ ಅವನಲ್ಲಿ ಭಕ್ತಿ ಉಂಟಾಗಲು ಸಹಾಯ ಮಾಡತಕ್ಕ ಈ ಹರಿಕಥಾಮೃತಸಾರ ಗ್ರಂಥದಲ್ಲಿರತಕ್ಕ ಗುಣಗ್ರಹಣ ಮಾಡಿರಿ. ಕೇವಲ ಸಂಸ್ಕೃತ-ಪ್ರಾಕೃತ ಭಾಷಾವಿಷಯಗಳಕಡೆಗೆ ಮನಸ್ಸುಕೊಟ್ಟು ಹಾನಿ ಮಾಡಿಕೊಳ್ಳಬೇಡಿರೆಂದು ದಾಸರು ಉಪಮಾನಕೊಟ್ಟು ವಿವರಿಸುತ್ತಾರೆ.

**ಭಾಸ್ಕರನ ಮಂಡಲವ ಕಂಡು ನ । ಮಸ್ಕರಿಸಿ ಮೋದಿಸದೆ ದ್ವೇಷದಿ ।**
**ತಸ್ಕರನು ನಿಂದಿಸಲು ಕುಂದಹುದೇ ದಿವಾಕರಗೆ ॥**

**ಸಂಸ್ಕೃತವಿದಲ್ಲೆಂದು ಕುಹಕ ತಿ । ರಸ್ಕರಿಸ ಲೇನಹುದು**
**ಭಕ್ತಿ ಪು ।**
**ರಸ್ಕರದಿ ಕೇಳ್ವರಿಗೆ ಒಲಿವನು ಪುಷ್ಕರಾಕ್ಷ ಸಖ ॥25-35॥**

ಸೂರ್ಯಮಂಡಲವನ್ನು ಕಂಡು ಸಂತೋಷಪಟ್ಟು ನಮಸ್ಕರಿಸಿ ಕೃತಾರ್ಥರಾಗುವ ಬದಲು, ಸೂರ್ಯೋದಯವನ್ನು ಕಳ್ಳರು ಹೇಗೆ ನಿಂದಿಸುತ್ತಾರೆಯೋ,

ಹಾಗೆ ಇದು ಸಂಸ್ಕೃತಭಾಷಾ ಗ್ರಂಥವಲ್ಲವೆಂದು ಕುಹಕಿಗಳು ನಿಂದಿಸುತ್ತಾರೆ. ಪ್ರಾಕೃತ ಗ್ರಂಥವೆಂದು ಇದರಲ್ಲಿರತಕ್ಕ ಹರಿಯ ಮಹಿಮಾಪೂರ್ವಕಜ್ಞಾನ, ಗುಣಗಾನ ತಜನ್ಯಭಕ್ತಿ ಇತ್ಯಾದಿ ಗುಣಗ್ರಹಣವನ್ನು ಮಾಡಲಾರರು.

ಸೂರ್ಯಪ್ರಕಟನಾದರೆ ಪದಾರ್ಥಗಳ ಜ್ಞಾನವಾಗುತ್ತದೆ ಜಗತ್ತಿಗೆಹರ್ಷ. ಈ ಗ್ರಂಥಪ್ರಕಟವಾದ್ದರಿಂದ ಶ್ರೀಹರಿಯ ಜ್ಞಾನ ಅವನಲ್ಲಿ ಭಕ್ತಿಉಂಟಾಗುತ್ತದೆ. ಚೋರ, ಕಾಮಿ, ಸೋಮಾರಿ ಇವರಿಗೆ ಸೂರ್ಯನನ್ನು ಕಂಡರೆಸಹಿಸದು, ಹಾಗೆಯೇಅಸೂಯಾಪರರಿಗೆ, ಕುಹಕಿಗಳಿಗೆ, ಗುಣಗ್ರಹಣ ಸಾಮಾರ್ಥ್ಯವಿಲ್ಲದವರಿಗೆ ಈ ಗ್ರಂಥವೂ ಸೊಗಸದು.

ಸಜ್ಜನರು ಸೂರ್ಯಮಂಡಲವನ್ನು ಕಂಡು ಜಪ ತಪ ಮಾಡಿ ನಮಸ್ಕರಿಸಿ ಕೃತಾರ್ಥರಾಗುತ್ತಾರೆ. ಹಾಗೆಯೇ ಗುಣಗ್ರಾಹಿ ರಸಜ್ಞರು–ಮುಮುಕ್ಷುಗಳು ಭಕ್ತಿಯಿಂದ ಈ ಗ್ರಂಥವನ್ನು ಓದಿ ತದ್ಗತ ಧರ್ಮಗಳನ್ನು ಅನುಷ್ಠಾನ ಮಾಡಿ ಭಗವಂತನ ಒಲಿಮೆಯನ್ನು ಪಡೆಯುತ್ತಾರೆ, ಅಥವಾ ಭಗವತ್ಪ್ರೀತಿಗೆ ಪಾತ್ರರಾಗುತ್ತಾರೆ. ಹೀಗೆ ಕವಿಗಳು ಸ್ವರಚಿತ ಗ್ರಂಥವು ಸಜ್ಜನರಿಂದ ಆದರಣೀಯ ಎಂಬದನ್ನು ಉಪಮಾನದೊಂದಿಗೆ ಸಮರ್ಥಿಸಿದ್ದಾರೆ.

ಶ್ರೀಮದ್ಧರಿಕಥಾಮೃತಸಾರದಲ್ಲಿ ಅಡಕವಾಗಿದ್ದ ಉಪಮಾನದ ರಾಶಿಯಿಂದ ಕೇವಲ ಕೆಲವೇ ಉಪಮಾನಗಳನ್ನು ಆರಿಸಿ ಶ್ರೀಜಗನ್ನಾಥದಾಸರು ಪ್ರಯೋಗ ಮಾಡಿದ ಉಪಮಾನ ಸ್ವಾರಸ್ಯಗಳ ಕಡೆಗೆ ಓದುಗರ ಮನ ಸೆಳೆಯಲು ಪ್ರಯತ್ನಮಾಡಿದೆ. ಈ ಲೇಖನವನ್ನು ಓದಿ ಮತ್ತು ಹರಿಕಥಾ

ಮೃತಸಾರದಲ್ಲಿದ್ದ ಇನ್ನಿತರ ಉಪಮಾನಗಳನ್ನು ಮನಸಿಟ್ಟು ಓದಿ ನಿಮ್ಮ ಅಭಿಪ್ರಾಯವೂ ಕೂಡ **"ಉಪಮಾಜಗನ್ನಾಥ ದಾಸಸ್ಯ"** ಎಂಬ ಬಿರುದು ನಾಣ್ಣುಡಿ ಜಗನ್ನಾಥದಾಸರಿಗೂ ಆ ಬಹುಮಾನ ಪೂರ್ವಕ ಸಲ್ಲುವದು, ಎಂದು ಆದರೆ ಸರಿ, ನನ್ನ ಈ ಪ್ರಯತ್ನವು ಸಾರ್ಥಕವಾದಂತೆಯೇ.

ಈ ಉಪಮಾನ ಸ್ಥಳಗಳನ್ನು ನಮ್ಮ ನಿತ್ಯ ಜೀವನದಲ್ಲಿ ನೋಡುತ್ತಲೇ ಇರುತ್ತೇವೆ. ಆದರೆ ಕವಿ ದೃಷ್ಟಿಯಂತಲ್ಲ. ಕವಿಗಳು ಈ ಉಪಮಾನಗಳ ಸಹಾಯದಿಂದ ಭಗವಂತನ ಸಾಮ್ರಾಜ್ಯದ ಜ್ಞಾನವನ್ನು ನಮಗೆ ತಿಳಿಸುತ್ತಾರೆ. ಜಗನ್ನಾಥದಾಸರು ಶಾಸ್ತ್ರವೇತ್ತರು. ಶ್ರೇಷ್ಟಕವಿಗಳು. ಉಪಮಾನ ಪ್ರಯೋಗದಲ್ಲಿ ಚತುರರು. ಈ ಮೂರರ ಸಹಾಯದಿಂದ ನಮ್ಮನ್ನು ಅಧ್ಯಾತ್ಮ ಪ್ರಪಂಚದಲ್ಲಿ ವಿಹಾರ ಮಾಡಿಸುತ್ತಾರೆ. ಅಧ್ಯಾತ್ಮ ಪ್ರಪಂಚವು ಅತೀಂದ್ರಿಯ ಪ್ರಪಂಚ. ಈ ಉಪಮಾನಗಳು ನಮಗೆ ಆ ಪ್ರಪಂಚದ ನಿರ್ದಿಷ್ಟ ಜ್ಞಾನ ತಂದುಕೊಡಲು ಬಹಳ ಸಹಾಯಮಾಡುತ್ತವೆ. ಈ ದೃಷ್ಟಿಯಿಂದ ಗ್ರಂಥಕರ್ತರ ಉಪಕಾರವನ್ನು ಮರೆಯಲಾಗದು.

ವರಕವಿಗಳಾದ ಶ್ರೀ ಜಗನ್ನಾಥದಾಸರು ಈ ಉತ್ತಮೊತ್ತಮ ಕೃತಿಯಾದ "ಹರಿಕಥಾಮೃತಸಾರವನ್ನು" ರಚನೆಮಾಡಿ ಮುಮುಕ್ಷುಗಳಿಗೆ ಒಂದು ಅಮೂಲ್ಯ ಕಾಣಿಕೆಯನ್ನು ದಯಪಾಲಿಸಿದ್ದಾರೆ. ಈ ಕೃತಿಯನ್ನು ಓದಿದವರಿಗೆಲ್ಲ ಶ್ರೀಹರಿಯು ಸಮೀಪಕ್ಕೆ ಬಂದಂತೆ ಭಾಸವಾಗುತ್ತದೆ. ಅಥವಾ ಅನುಭವ ತೋರುತ್ತದೆ. ಇದನ್ನು ದಾಸರೇ ಹೇಳಿದ್ದಾರೆ. ಒಂದಿಲ್ಲೊಂದು ದಿನ ಭಗತ್‌ಸಾಕ್ಷಾತ್ಕಾರವೂ ಸಾಧ್ಯವಾಗುತ್ತದೆ. ಆ ಗ್ರಂಥಗತ ವಿಷಯಗಳನ್ನೇ ನಾನು ಇನ್ನೊಮ್ಮೆ ಮೆಲುಕು ಹಾಕಿದೆ ಅಷ್ಟೇ. ಇಷ್ಟರಿಂದ ಶ್ರೀ ಜಗನ್ನಾಥದಾಸರ ಹೃತ್ಕಮಲನಿವಾಸಿ ಶ್ರೀ ಜಗನ್ನಾಥವಿಟ್ಠಲನು ಪ್ರೀತನಾಗಿ ನಮ್ಮೆಲರ ಮೇಲೆ ದಯದೃಷ್ಟಿ ಬೀರಲೆಂದು ಪ್ರಾರ್ಥಿಸುತ್ತಾ ಈ ಲೇಖನವನ್ನು ಮುಕ್ತಾಯ ಗೊಳಿಸುವೆನು.

# ಆಕರ ಗ್ರಂಥಗಳು

1. ಶ್ರೀಮದಾನಂದತೀರ್ಥರ ಭಾಷ್ಯಾದಿ ಗ್ರಂಥಗಳು

2. ಶ್ರೀಮಜ್ಜಯತೀರ್ಥರ ಸುಧಾದಿ ವ್ಯಾಖ್ಯಾನಗಳು

3. ಶ್ರೀಪುರಂದರದಾಸರ ಕೃತಿಗಳು

4. ಶ್ರೀಜಗನ್ನಾಥದಾಸರ ಹರಿಕಥಾಮೃತಸಾರ/ಕೃತಿಗಳು

5. ಶ್ರೀಕಾಳಿದಾಸನ ಕೃತಿಗಳು, ಇತ್ಯಾದಿ.

# ಒಪ್ಪೋಲೆ

| ಪುಟ | ಸಾಲು | ಅಶುದ್ಧ | ಶುದ್ಧ |
|---|---|---|---|
| 1 | 7 | ಬೃಹ–ಪೂರ್ತಾ | ಬೃಹ–ವೃದ್ಧಾ |
| 2 | 20 | ನಾಮನಿ | ನಾಮಾನಿ |
| 3 | 1 | ಕೋಚಗಳನ್ನು | ಸಂಕೋಚಗಳನ್ನು |
| 6 | 13 | ದುರ್ಬಲವಾಗಿ | ದುರ್ಲಭವಾಗಿ |
| 7 | 1 | ವೈದ್ಯಕೀ | ವೈದ್ಯಕೀಯ |
| 8 | 12 | ೩ | ೨ |
| 10 | 1 | ತದ್ಭಕ್ತ | ತದ್ಭಕ್ತಃ |
| 16 | 3 | ಪಡೆವ | ಪಡೆದ |
| 19 | 21 | ಬ್ರಹ್ಯಸೂತ್ರ | ಬ್ರಹ್ಮಸೂತ್ರ |
| 20 | 21 | ವಿರಡು | ಎರಡು |
| 29 | 12 | ಆಸ್ತೇವ | ಅಸ್ತೇವ |
| 38 | 13 | ಹೀಗಿದೆ ಎರಡು | ಹೀಗಿದೆ |
| 41 | 5 | ಪ್ರದಾನದತ್ | ಪ್ರದಾನವತ್ |
| 62 | 22 | ಒಡಮೂಡಿದ್ಯ | ಒಡಮೂಡಿದ. |
| 70 | 16 | ಪುರುಕ್ಷಾ | ಪುರುಷೌ |

# ಗುರುಕೃಪಾ ಪ್ರಕಾಶನದಿಂದ ಪ್ರಕಟವಾದ/ವಾಗಲಿರುವ ಗ್ರಂಥಗಳು

1. ಗಾಯತ್ರೀ ವೈಭವ ರೂ. 10/-
2. ಶಾಸ್ತ್ರಸರಣಿ–ದಾಸವಾಣಿ ರೂ. 10/-
3. The Glories of Gayatree (In English) Being Printed

# ಪುಸ್ತಕ ದೊರೆಯುವ ಸ್ಥಳಗಳು

1) **ಗುರುಕೃಪಾ ಪ್ರಕಾಶನ**
606/607, 14ನೇ ಅಡ್ಡರಸ್ತೆ, ಮಾಗಡಿ ಕಾರ್ಡ್ ರಸ್ತೆ,
ವಿಜಯನಗರ, ಬೆಂಗಳೂರು-560 040.

2) **ಶ್ರೀ ಹೆಚ್. ಕೆ. ರಂಗನಾಥಾಚಾರ್ಯ**
ಶ್ರೀರಘೋತ್ತಮ ಬೃಂದಾವನ,
ಉತ್ತರಾದಿಮಠ ರಸ್ತೆ, ಬಸವನಗುಡಿ,
ಬೆಂಗಳೂರು–560 004.

3) **ವೇದಾಂತ ಬುಕ್ ಹೌಸ್**
92, 6ನೇ ಮುಖ್ಯ ರಸ್ತೆ, ಚಾಮರಾಜಪೇಟೆ,
ಬೆಂಗಳೂರು–560 018.

4) **ಸಂಸ್ಕೃತಿ,** ಪುಸ್ತಕ ವ್ಯಾಪಾರಿಗಳು
35, 5ನೇ ಮುಖ್ಯರಸ್ತೆ, ಚಾಮರಾಜಪೇಟೆ,
ಬೆಂಗಳೂರು–560 018.

5) **ಅಖಿಲ ಭಾರತ ಮಾಧ್ವ ಮಹಾಮಂಡಲ**
ಪೂರ್ಣಪ್ರಜ್ಞ ವಿದ್ಯಾಪೀಠ, ಪೂರ್ಣಪ್ರಜ್ಞನಗರ,
ಬೆಂಗಳೂರು–560 028.

6) **ಶ್ರೀ ಆರ್. ಭೀಮಸೇನಾಚಾರ್ಯ**
ಶ್ರೀ ರಾಘವೇಂದ್ರಸ್ವಾಮಿ ಮಠ, ಶ್ರೀ ವೆಂಕಟೇಶ್ವರನಗರ,
ಮಲ್ಕಾಜಗಿರಿ ಪೋಸ್ಟ್,
ಹೈದರಾಬಾದ್–500 047.